ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 6 ಸೋಮವಾರ 2024

45

ಸಂಪುಟ: 45 | ಸಂಚಿಕೆ: 20 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರೇವಣ್ಣ ಎಸ್‌ಐಟಿ ವಶಕ್ಕೆ

ಬೆಂಗಳೂರು, ಮೇ 5– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಹಾಗೂ ಅಕ್ರಮ ಬಂಧನ ಪ್ರಕರಣದಲ್ಲಿ ಬಂಧಿಸಲ್ಪಟ್ಟ ಹೊಳೆನರಸೀಪುರ ಶಾಸಕ ಹೆಚ್.ಡಿ.ರೇವಣ್ಣ ಅವರನ್ನು ವಿಚಾರಣೆಗಾಗಿ ನಾಲ್ಕು ದಿನಗಳ ಕಾಲ ಎಸ್‌ಐಟಿ ವಶಕ್ಕೆ ನೀಡಿ, ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ.

ಕೆ.ಆರ್.ನಗರ ಠಾಣೆಯಲ್ಲಿ ಮೇ 2ರಂದು ದಾಖಲಾಗಿದ್ದ ಪ್ರಕರಣದ ಮೊದಲನೇ ಆರೋಪಿಯಾದ ಹೆಚ್.ಡಿ. ರೇವಣ್ಣ ಅವರಿಗೆ ನಿರೀಕ್ಷಣಾ ಜಾಮೀನು ನೀಡಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರಾಕರಿಸುತ್ತಿದ್ದಂತೆಯೇ ಶನಿವಾರ ಸಂಜೆ ಅವರ ತಂದೆಯೂ ಆದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನಿವಾಸದಲ್ಲಿ ಎಸ್‌ಐಟಿ ತಂಡ ರೇವಣ್ಣ ಅವರನ್ನು ಬಂಧಿಸಿತ್ತು.

ಪ್ರಾಥಮಿಕ ವಿಚಾರಣೆ ನಡೆಸಿದ ಎಸ್‌ಐಟಿ ತಂಡ, ಬಂಧನದ 24 ತಾಸಿನೊಳಗೆ ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಬೇಕು ಎಂಬ ನಿಯಮದಂತೆ ಇಂದು ಮಧ್ಯಾಹ್ನ ರೇವಣ್ಣ ಅವರನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ಮತ್ತೊಮ್ಮೆ ಆರೋಗ್ಯ ತಪಾಸಣೆ ನಡೆಸಿದ ನಂತರ ಸಂಜೆ ಕೋರಮಂಗಲದಲ್ಲಿರುವ 17ನೇ ಎಸಿಎಂ ನ್ಯಾಯಾಲಯದ ನ್ಯಾಯಾಧೀಶರಾದ ರವೀಂದ್ರ ಕುಮಾರ್ ಬಿ.ಕಟ್ಟಿಮನಿ ಅವರ ನಿವಾಸದಲ್ಲಿ ಹಾಜರುಪಡಿಸಿತು.

ರೇವಣ್ಣ ಅವರನ್ನು ಮತ್ತಷ್ಟು ವಿಚಾರಣೆಗೊಳಪಡಿಸಬೇಕಾಗಿರುವುದರಿಂದ ಎಸ್‌ಐಟಿ ವಶಕ್ಕೆ ನೀಡಬೇಕೆಂದು ಅಧಿಕಾರಿಗಳು ನ್ಯಾಯಾಧೀಶರಿಗೆ ಮನವಿ ಸಲ್ಲಿಸಿದ್ದರು. ಈ ವೇಳೆ ಪ್ರಾಥಮಿಕ ತನಿಖೆ ಹಾಗೂ ಕೆಲವು ಸಾಕ್ಷ್ಯಾಧಾರಗಳನ್ನು ಎಸ್‌ಐಟಿ ಅಧಿಕಾರಿಗಳು ಉಲ್ಲೇಖಿಸಿದ್ದರು.

ಎಸ್‌ಐಟಿ ಮನವಿಗೆ ಆಕ್ಷೇಪ ವ್ಯಕ್ತಪಡಿಸಿದ ರೇವಣ್ಣ ಪರ ವಕೀಲ ಮೂರ್ತಿ ಡಿ.ನಾಯ್ಕ್ ಅವರು, ರೇವಣ್ಣ ಅವರನ್ನು ಈಗಾಗಲೇ ಎಸ್‌ಐಟಿ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಅವರ ವಿರುದ್ಧ ಯಾವುದೇ ಸಾಕ್ಷಿಗಳು ಲಭ್ಯವಿಲ್ಲ. ಆದರೂ ಉದ್ದೇಶಪೂರ್ವಕವಾಗಿ ಅವರ ವಿರುದ್ಧ ಅಪಹರಣದ ಕೇಸು ದಾಖಲಿಸಿದ್ದಾರೆ. ಎಫ್‌ಐಆರ್‌ನಲ್ಲಿ ಎರಡನೇ ಆರೋಪಿಯು 'ರೇವಣ್ಣ ಸಾಹೇಬರು ಹೇಗಿದ್ದಾರೆ' ಎಂಬ ಉಲ್ಲೇಖ ವ್ಯಕ್ತಪಡಿಸಿ, ಬೇರೆ ಯಾವುದೇ ಆರೋಪಗಳಿಲ್ಲ. ಘಟನೆ ನಡೆದಿರುವುದು ಯಾವಾಗ? ಪ್ರಕರಣ ದಾಖಲಾಗಿದ್ದು ಯಾವಾಗ? ಎಂಬುದಕ್ಕೆ ವ್ಯತ್ಯಾಸವಿದೆ. ಹೀಗಾಗಿ ● 8ನೇ ಪುಟಕ್ಕೆ



ಪುರಾವೆ ಇಲ್ಲದೇ ಸುಳ್ಳು ಪ್ರಕರಣ, ರಾಜಕೀಯ ಷಡ್ಯಂತ್ರ– ಎಚ್.ಡಿ.ರೇವಣ್ಣ

ಬೆಂಗಳೂರು, ಮೇ 5– ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಬಂಧಿಸಲಾಗಿರುವ ಎಚ್.ಡಿ.ರೇವಣ್ಣ ಅವರನ್ನು ನ್ಯಾಯಾಧೀಶರ ಮನೆಗೆ ಹಾಜರುಪಡಿಸಲು ಎಸ್‌ಐಟಿ ಅಧಿಕಾರಿಗಳು ಹೊರಟಿದ್ದು, ಇದಕ್ಕೂ ಮುನ್ನ ಅವರನ್ನು ಬೌರಿಂಗ್ ಆಸ್ಪತ್ರೆಗೆ ಕರೆತಂದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದಾರೆ.

ಅರಮನೆ ರಸ್ತೆಯಲ್ಲಿರುವ ಎಸ್‌ಐಟಿ ಕಚೇರಿಯಿಂದ ರೇವಣ್ಣ ಅವರನ್ನು ಬೌರಿಂಗ್ ಆಸ್ಪತ್ರೆಗೆ ಪೊಲೀಸ್ ವಾಹನದಲ್ಲಿ ಕರೆತರಲಾಯಿತು. ವಾಹನದಿಂದ ಇಳಿದು ಆಸ್ಪತ್ರೆಗೆ ಹೊರಟಿದ್ದ ಸಂದರ್ಭದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ರೇವಣ್ಣ, 'ಯಾವುದೇ ಪುರಾವೆ ಇಲ್ಲದೇ ದುರುದ್ದೇಶದಿಂದ ಪ್ರಕರಣ ದಾಖಲಿಸಲಾಗಿದೆ. ಇದು ಸುಳ್ಳು ಪ್ರಕರಣ. ರಾಜಕೀಯ ಷಡ್ಯಂತ್ರ ಇದರ ಹಿಂದಿದೆ' ಎಂದರು. ವೈದ್ಯಕೀಯ ಪರೀಕ್ಷೆ ಬಳಿಕ ರೇವಣ್ಣ ಅವರನ್ನು ಕೋರಮಂಗಲದಲ್ಲಿರುವ ನ್ಯಾಯಾಧೀಶರ ನಿವಾಸಕ್ಕೆ ಎಸ್‌ಐಟಿ ಅಧಿಕಾರಿಗಳು ಕರೆದೊಯ್ಯಲಿದ್ದಾರೆ.

ಸಂತ್ರಸ್ತೆಯರ ನೆರವಿಗೆ ಎಸ್‌ಐಟಿ ಸಹಾಯವಾಣಿ

ಬೆಂಗಳೂರು, ಮೇ 5– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯರ ನೆರವಿಗಾಗಿ ಎಸ್‌ಐಟಿ ಅಧಿಕಾರಿಗಳು ಸಹಾಯವಾಣಿ ಆರಂಭಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್, ಹಾಸನ ಜಿಲ್ಲೆಯಲ್ಲಿ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ ಕುರಿತು ತನಿಖೆಗಾಗಿ ಎಸ್‌ಐಟಿ ತಂಡವನ್ನು ರಚಿಸಲಾಗಿದೆ. ಸಂತ್ರಸ್ತೆಯರ ನೆರವಿಗಾಗಿ 6360938947 ಸಹಾಯವಾಣಿ ಆರಂಭಿಸಲಾಗಿದೆ ಎಂದು ತಿಳಿಸಿದ್ದಾರೆ. ಸಂತ್ರಸ್ತೆಯರು ಹಾಗೂ ಅವರಿಗೆ ಸಂಬಂಧಪಟ್ಟ ವ್ಯಕ್ತಿಗಳು ಸಹಾಯವಾಣಿಗೆ ಕರೆ ಮಾಡಿ ದೂರು ನೀಡಬಹುದು. ಸಂತ್ರಸ್ತೆಯರಿಗೆ ಅಗತ್ಯವಿರುವ ಕಾನೂನು ನೆರವು, ರಕ್ಷಣೆ ಹಾಗೂ ಇತರೆ ಸಹಾಯ ಮಾಡಲು ನಾವು ಸಿದ್ಧರಿದ್ದೇವೆ. ಕೃತ್ಯದ ಬಗ್ಗೆ ದೂರು ನೀಡುವವರ ಹೆಸರು ಗೌಪ್ಯವಾಗಿಡಲಾಗುವುದು ಎಂದು ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್ ತಿಳಿಸಿದ್ದಾರೆ.

ಪ್ರಜ್ವಲ್ ರೇವಣ್ಣ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಜಾರಿ

ಗೃಹ ಸಚಿವ ಪರಮೇಶ್ವರ್



ಪ್ರಜ್ವಲ್ ರೇವಣ್ಣ



ಪರಮೇಶ್ವರ್

ಬೆಂಗಳೂರು, ಮೇ 5– ಹಾಸನ ಸಂಸದ ಪ್ರಜ್ವಲ್ ರೇವಣ್ಣಗೆ ಅಶ್ಲೀಲ ವಿಡಿಯೊ ಪ್ರಕರಣದಲ್ಲಿ ಮತ್ತಷ್ಟು ಸಂಕಷ್ಟ ಎದುರಾಗಿದ್ದು, ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಮನವಿ ಬೆನ್ನಲ್ಲೇ ಸಿಬಿಐ ಪ್ರಜ್ವಲ್ ರೇವಣ್ಣ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಿದೆ.

ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿರುವ ರಾಜ್ಯ ಗೃಹ ಸಚಿವ ಜಿ. ಪರಮೇಶ್ವರ್, ಲೈಂಗಿಕ ಕಿರುಕುಳ ಮತ್ತು ಅಪಹರಣ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ಪತ್ತೆಗೆ ಈಗಾಗಲೇ ಬ್ಲೂ ಕಾರ್ನರ್ ನೋಟಿಸ್ ನೀಡಲಾಗಿದೆ. ಪ್ರಕರಣದ ತನಿಖೆ ನಡೆಸಲು ವಿಶೇಷ ತನಿಖಾ ತಂಡಕ್ಕೆ ರಾಜ್ಯ ಸರ್ಕಾರ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ ಎಂದು ತಿಳಿಸಿದರು. ಎಸ್‌ಐಟಿ ಕಾರ್ಯವಿಧಾನದ ಪ್ರಕಾರ ಕೆಲಸ ಮಾಡುತ್ತಿದೆ ಮತ್ತು ನ್ಯಾಯಯುತ ತನಿಖೆ ನಡೆಸಲಾಗುವುದು. ನ್ಯಾಯಯುತ ತನಿಖೆಗಾಗಿ ನಾವು ಎಸ್‌ಐಟಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದೇವೆ. ಅವರು ಈಗಾಗಲೇ ಆ ಕೆಲಸದಲ್ಲಿದ್ದಾರೆ. ದೇಶದಿಂದ ಪರಾರಿಯಾಗಿರುವ ಪ್ರಜ್ವಲ್ ರೇವಣ್ಣ ● 8ನೇ ಪುಟಕ್ಕೆ

ಪ್ರಜ್ವಲ್ ರೇವಣ್ಣ ಪ್ರಕರಣ: ಸಂತ್ರಸ್ತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು

ಮುಖ್ಯಮಂತ್ರಿ ಸಮ್ಮುಖದಲ್ಲಿ ಸುರ್ಜೇವಾಲ ಘೋಷಣೆ

ಬೆಳಗಾವಿ, ಮೇ 5–ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಲೈಂಗಿಕ ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಕಾಂಗ್ರೆಸ್ ಸರ್ಕಾರ ಆರ್ಥಿಕ ನೆರವು ನೀಡಲಿದೆ ಎಂದು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಘೋಷಿಸಿದರು. ಬೆಳಗಾವಿಯಲ್ಲಿ ಇಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ರಾಹುಲ್ ಗಾಂಧಿ ಆಗ್ರಹಿಸಿದ್ದಾರೆ. ಕಳೆದ 75 ವರ್ಷದಲ್ಲಿ ಎಂದೂ ನಡೆಯದ ವಿಶಿಷ್ಟ ಪ್ರಕರಣ ಇದಾಗಿದ್ದು, ನೂರಾರು ಅತ್ಯಾಚಾರ ಸಂತ್ರಸ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆರ್ಥಿಕ ನೆರವು ● 8ನೇ ಪುಟಕ್ಕೆ



ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡ ಬಿಜೆಪಿ ನಾಯಕರು

ಶಾಸಕ ರೇವಣ್ಣ ಬಂಧನ ಸರಿಯಾಗಿದೆ

● ಪ್ರಜ್ವಲ್ ಮತ್ತೆ ಸಂಸದರಾದರೆ ಅವರನ್ನು ಉಚ್ಚಾಟಿಸುತ್ತೇವೆ ● ಜೆಡಿಎಸ್‌ನೊಂದಿಗಿನ ಮೈತ್ರಿ ಮುಂದುವರಿಕೆ ಬಗ್ಗೆ ವರಿಷ್ಠರು ತೀರ್ಮಾನಿಸುತ್ತಾರೆ: ವಿಪಕ್ಷ ನಾಯಕ ಆರ್.ಅಶೋಕ್




ಬೆಂಗಳೂರು, ಮೇ 5–ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಹಿಂದೆ ರಾಜಕೀಯ ಷಡ್ಯಂತ್ರವಿದೆ ಎಂದು ಜೆಡಿಎಸ್ ನಾಯಕ ಹಾಗೂ ಬಿಜೆಪಿ ಕೆಲ ನಾಯಕರು ಶನಿವಾರದವರೆಗೆ ಕಾಂಗ್ರೆಸ್ ವಿರುದ್ಧ ಕಿಡಿಕಾರುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಬದಲಾಗಿದ್ದು, ಬಿಜೆಪಿ ನಾಯಕರು ಈ ಪ್ರಕರಣದಲ್ಲಿ ಅಂತರ ಕಾಯ್ದುಕೊಂಡಿದ್ದು, ಪ್ರಜ್ವಲ್ ರೇವಣ್ಣ ಮತ್ತು ಅವರ ತಂದೆ ಶಾಸಕ ಹೆಚ್.ಡಿ.ರೇವಣ್ಣ ವಿರುದ್ಧ ಕಾನೂನು ಕ್ರಮ ನಡೆಯಲಿ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್, ಶಾಸಕ ಹೆಚ್.ಡಿ.ರೇವಣ್ಣ ಅವರನ್ನು ಬಂಧಿಸಿರುವುದು ಸರಿಯಾಗಿದೆ. ಅದಕ್ಕಾಗಿ ಪೊಲೀಸರ ಕಾರ್ಯವನ್ನು ಶ್ಲಾಘಿಸುತ್ತೇನೆ. ಹೆಚ್.ಡಿ.ರೇವಣ್ಣ ವಿರುದ್ಧ ಕಠಿಣ ಕಾನೂನು ಕ್ರಮ ಆಗಬೇಕು ಎಂದರು.

ಸಂಸದ ಪ್ರಜ್ವಲ್ ರೇವಣ್ಣ ಬಗ್ಗೆ ಪ್ರತಿಕ್ರಿಯಿಸಿದ ಅವರು, ಪ್ರಜ್ವಲ್ ಹಾಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿಯ ಸಂಸದರಾಗಿದ್ದಾರೆ. ಈಗ ನಡೆದ ಚುನಾವಣೆಯಲ್ಲಿ ಜೆಡಿಎಸ್ ಜೊತೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಪ್ರಜ್ವಲ್ ರೇವಣ್ಣ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಕೊಡಲಾಗಿದೆ. ಅವರು ಚುನಾವಣೆಯಲ್ಲಿ ಗೆದ್ದು ಮತ್ತೆ ಸಂಸದರಾದರೆ, ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಅವರನ್ನು ಉಚ್ಚಾಟಿಸುತ್ತೇವೆ ಎಂದು ಹೇಳಿದರು.

ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಾಗಿರುವುದರಿಂದ ಪ್ರಜ್ವಲ್ ಗೆದ್ದ ನಂತರ ಎನ್‌ಡಿಎ ಸಂಸದರಾಗುತ್ತಾರಾ? ಅಥವಾ ಜೆಡಿಎಸ್ ಸಂಸದರಾಗುತ್ತಾರಾ? ಎಂಬ ವಿಚಾರದಲ್ಲಿ ಗೊಂದಲ ಇದೆ. ಇದರ ಬಗ್ಗೆ ಕಾನೂನಿನಂತೆ ಸ್ಪಷ್ಟನೆ ಪಡೆಯುತ್ತೇವೆ. ಅವರನ್ನು ಈಗಾಗಲೇ ಜೆಡಿಎಸ್ ಪಕ್ಷದಿಂದ ಅಮಾನತುಪಡಿಸಿದೆ. ಅವರು ಜೆಡಿಎಸ್ ಸಂಸದರಾದರೆ ಆ ಪಕ್ಷ ಕ್ರಮ ಕೈಗೊಳ್ಳುತ್ತದೆ. ಒಂದು ವೇಳೆ ಎನ್‌ಡಿಎ ಸಂಸದರಾದರೆ ● 8ನೇ ಪುಟಕ್ಕೆ

> ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ, ಶಾಸಕ ಹೆಚ್.ಡಿ. ರೇವಣ್ಣ ಬಂಧನದ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಜಾಸ್ತಿ ತಲೆ ಕೆಡಿಸಿಕೊಳ್ಳಬಾರದು. ಅವರು ತಮ್ಮ ಆರೋಗ್ಯದ ಕಡೆ ಗಮನ ಹರಿಸಬೇಕು. ಮಹಿಳೆಯರ ಮೇಲಿನ ದೌರ್ಜನ್ಯವನ್ನು ಬಿಜೆಪಿ ಒಪ್ಪುವುದಿಲ್ಲ. ಮಹಿಳಾ ದೌರ್ಜನ್ಯ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಬಂಧನವಾಗಬೇಕು. ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಹೆಚ್.ಡಿ. ರೇವಣ್ಣ ಅವರನ್ನು ಎಸ್‌ಐಟಿ ಬಂಧಿಸಿದೆ. ಎಸ್‌ಐಟಿ ತನಿಖೆ ಸಮರ್ಪಕವಾಗಿ ನಡೆದು ಸತ್ಯಾಂಶ ಹೊರಬರಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು.
>
> – ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ



ಪ್ರಜ್ವಲ್ ರೇವಣ್ಣ ಅರೆಸ್ಟ್ ಆಗಲೇಬೇಕು



ಹುಬ್ಬಳ್ಳಿ, ಮೇ 5–ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಬಂಧನವಾಗಬೇಕು ಎಂದು ಬಿಜೆಪಿ ನಾಯಕರೂ ಆದ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಪ್ರಕರಣ ಹಾಗೂ ರೇವಣ್ಣ ಬಂಧನದ ವಿಚಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಈ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದೆ. ಗಂಭೀರ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಾಗಿರುವುದರಿಂದ ರೇವಣ್ಣ ಬಂಧನವಾಗಿದೆ. ಹಲವಾರು ಮಹಿಳೆಯರು ದೂರು ಕೊಟ್ಟಿದ್ದಾರೆ. ಪ್ರಜ್ವಲ್ ರೇವಣ್ಣ ಸಹ ಅರೆಸ್ಟ್ ಆಗಲೇಬೇಕು. ಪ್ರಕರಣದ ತನಿಖೆ ಸೂಕ್ತ ರೀತಿಯಲ್ಲಿ ಆಗಬೇಕು. ಈ ವಿಚಾರದಲ್ಲಿ ನಮ್ಮ ಪಕ್ಷದ ನಿಲುವು ಸ್ಪಷ್ಟವಾಗಿದೆ ಎಂದಿದ್ದಾರೆ.

ರೇವಣ್ಣರಿಗೆ ಸಾಕಷ್ಟು ವಯಸ್ಸಾಗಿದೆ. ಈ ಪ್ರಕರಣ ದುರ್ದೈವ. ಸಾರ್ವಜನಿಕ ಜೀವನದಲ್ಲಿ ಹೇಗೆ ವರ್ತನೆ ಮಾಡುತ್ತೇವೆ ಎಂಬುದು ಬಹಳ ಮುಖ್ಯ. ವೀಡಿಯೋ ರಿಲೀಸ್ ಆಗಿರುವುದು ಬೇಸರದ ವಿಚಾರ. ವೀಡಿಯೋ ಯಾರು ರಿಲೀಸ್ ಮಾಡಿದರು ಎಂಬುದು ಚರ್ಚೆ ವಿಷಯ ಅಲ್ಲ. ಮಹಿಳೆಯರ ಜೊತೆಗೆ ನಡೆದುಕೊಂಡಿರುವ ರೀತಿ ಸರಿಯಾದುದಲ್ಲ ಎಂದು ಅವರು ಹೇಳಿದ್ದಾರೆ.

ಮೇ 14ಕ್ಕೆ ವಾರಣಾಸಿಯಿಂದ ಪ್ರಧಾನಿ ಮೋದಿ ನಾಮಪತ್ರ ಸಲ್ಲಿಕೆ



ವಾರಣಾಸಿ, ಮೇ 5– ಪ್ರಧಾನಿ ನರೇಂದ್ರ ಮೋದಿ ಅವರು ಮೇ 14 ರಂದು ವಾರಣಾಸಿ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ನಾಮಪತ್ರ ಸಲ್ಲಿಸಲಿದ್ದಾರೆ. ಭಾನುವಾರ ಈ ವಿಷಯ ತಿಳಿಸಿದ ವಾರಣಾಸಿ ಬಿಜೆಪಿ ನಗರಾಧ್ಯಕ್ಷ ವಿದ್ಯಾಸಾಗರ್ ರೈ, ಮೇ 13ರಂದು ಮೋದಿ ಅವರು ಕ್ಷೇತ್ರದಲ್ಲಿ ರೋಡ್‌ಶೋ ನಡೆಸಲಿದ್ದು, ಅದಕ್ಕೆ ಸಿದ್ಧತೆಗಳು ನಡೆಯುತ್ತಿರುವುದಾಗಿ ತಿಳಿಸಿದರು. ರೋಡ್ ಶೋಗೆ ಮಾರ್ಗವನ್ನು ಅಂತಿಮಗೊಳಿಸಲಾಗಿದೆ, ಮೇ 14 ರಂದು ಪ್ರಧಾನಿ ಮೋದಿ ವಾರಣಾಸಿ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಿಇಟಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಲ್ಲಿ ಕೋಚಿಂಗ್ ಸೆಂಟರ್ ಕೈವಾಡ

ಕೆಎಎಂಎಸ್ ಆರೋಪ

ಬೆಂಗಳೂರು, ಮೇ 5– ಈ ವರ್ಷ ಸಿಇಟಿ ಪ್ರಶ್ನೆ ಪತ್ರಿಕೆಗಳಲ್ಲಿ ಪಠ್ಯ ಕ್ರಮದಲ್ಲಿ ಇಲ್ಲದ ಪ್ರಶ್ನೆಗಳು ಕಾಣಿಸಿಕೊಂಡ ಬಗ್ಗೆ ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಅಸೋಸಿಯೇಟೆಡ್ ಮ್ಯಾನೇಜ್‌ಮೆಂಟ್‌ಗಳು (ಕೆಎಎಂಎಸ್) ಉನ್ನತ ಶಿಕ್ಷಣ ಸಚಿವ ಎಂಸಿ ಸುಧಾಕರ್ ಅವರಿಗೆ ಪತ್ರ ಬರೆದಿದ್ದು, ಇಂತಹ ಗೊಂದಲ ಮಯ ಪ್ರಶ್ನೆಪತ್ರಿಕೆಗಳನ್ನು ರೂಪಿಸಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿವೆ. ಅನೇಕ ಕೋಚಿಂಗ್ ಸೆಂಟರ್‌ಗಳು ಶಿಕ್ಷಣ ಇಲಾಖೆ ನೌಕರರೊಂದಿಗೆ ಶಾಮೀಲಾಗಿ ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಅಡ್ಡಿಪಡಿಸುತ್ತಿದ್ದು, ಅವರಿಗೆ ಶಿಕ್ಷೆಯಾಗಬೇಕು ಎಂದು ಕೆಎಎಂಎಸ್ ಪತ್ರದಲ್ಲಿ ಆರೋಪಿಸಿದೆ.

ಪ್ರಜ್ವಲ್ ಲೈಂಗಿಕ ದೌರ್ಜನ್ಯ ವೀಡಿಯೋ ಹಂಚಿದರೆ ಕಠಿಣ ಕ್ರಮ

ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್ ಎಚ್ಚರಿಕೆ



ಬೆಂಗಳೂರು, ಮೇ 5–ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ವೀಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಸ್‌ಐಟಿ ಮುಖ್ಯಸ್ಥರಾದ ಎಡಿಜಿಪಿ ಬಿ.ಕೆ.ಸಿಂಗ್ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವೀಡಿಯೋಗಳನ್ನು ವಾಟ್ಸಾಪ್‌ನಂತಹ ಮೆಸೆಂಜರ್ ಆ್ಯಪ್ ಮೂಲಕವೂ ಸೇರಿದಂತೆ ಸಾಮಾಜಿಕ ಜಾಲತಾಣದಲ್ಲಿ ಹಂಚುವುದು, ಮಾಹಿತಿ ತಂತ್ರಜ್ಞಾನ ಕಾಯಿದೆ ಕಲಂ 67(ಎ) ಐಟಿ ಆಕ್ಟ್ ಹಾಗೂ ಕಲಂ 228ಎ (1), ಐಪಿಸಿ 292ರಡಿ ಶಿಕ್ಷಾರ್ಹ ಅಪರಾಧವಾಗಿದೆ. ಖಾಸಗಿ ಮೆಸೇಜಿಂಗ್ ಆ್ಯಪ್‌ಗಳ ಮುಖಾಂತರ ಹಂಚುವುದನ್ನು ಪತ್ತೆ ಹಚ್ಚಲು ಸಾಧ್ಯವಿದ್ದು, ಹಾಗೇ ಹಂಚಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ● 8ನೇ ಪುಟಕ್ಕೆ

ಲೋಕಸಭೆ ಚುನಾವಣೆ: ರಾಜ್ಯದಲ್ಲಿ 2ನೇ ಹಂತದ ಬಹಿರಂಗ ಪ್ರಚಾರ ಅಂತ್ಯ

ಬೆಂಗಳೂರು, ಮೇ 5– ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳಲ್ಲಿ ಎರಡನೇ ಹಂತದ ಲೋಕಸಭೆ ಚುನಾವಣೆಯ ಬಹಿರಂಗ ಪ್ರಚಾರ ಭಾನುವಾರ ಅಂತ್ಯಗೊಂಡಿದ್ದು, ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಸೆಕ್ಸ್ ವಿಡಿಯೋ ಭಾರಿ ಸದ್ದು ಮಾಡಿದ್ದು, ಮತದಾರನ ಮೇಲೆ ಸಣ್ಣ ಪ್ರಮಾಣದಲ್ಲಿ ಪ್ರಭಾವ ಬೀರುವ ಸಾಧ್ಯತೆ ಇದೆ.


2019 ರ ಚುನಾವಣೆಯಲ್ಲಿ ಈ ಎಲ್ಲಾ 14 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿಗೆ ಮಂಗಳವಾರದ ಚುನಾವಣೆ(ಮೇ 7) ಹೆಚ್ಚು ಮಹತ್ವದ್ದಾಗಿದೆ. ಕರ್ನಾಟಕ ಒಟ್ಟು 28 ಲೋಕಸಭಾ ಕ್ಷೇತ್ರಗಳನ್ನು ಹೊಂದಿದ್ದು, ಏಪ್ರಿಲ್ 26 ರಂದು 14 ಕ್ಷೇತ್ರಗಳಿಗೆ ಮೊದಲ ಹಂತದ ಚುನಾವಣೆ ನಡೆದಿತ್ತು. ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಚುನಾವಣಾ ಪ್ರಚಾರ ಸಭೆಗಳಲ್ಲಿ ಪ್ರಜ್ವಲ್ ರೇವಣ್ಣ ಅವರು ನೂರಾರು ಮಹಿಳೆಯರ ಜೊತೆ ರಾಸಲೀಲೆ ನಡೆಸಿದ ವಿಡಿಯೋವನ್ನು ಪ್ರಸ್ತಾಪಿಸಿ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಪ್ರಜ್ವಲ್ ರೇವಣ್ಣ ಅವರು 400 ● 8ನೇ ಪುಟಕ್ಕೆ

ಮೈಸೂರಲ್ಲಿ ಬಿರುಗಾಳಿಗೆ ಬಿದ್ದ ಮರ, ಕೊಂಬೆ ತೆರವುಗೊಳಿಸದ ಅಧಿಕಾರಿಗಳು





ಓಡಾಡಲು ಪಾದಚಾರಿಗಳಿಗೆ ಅಡಚಣೆ



ಮೈಸೂರು, ಮೇ 5(ಆರ್‌ಕೆ)– ಬಿರುಗಾಳಿಗೆ ಶುಕ್ರವಾರ ಮುರಿದು ಬಿದ್ದ ಮರಗಳು ಹಾಗೂ ಕೊಂಬೆಗಳನ್ನು ತೆರವುಗೊಳಿಸದ ಕಾರಣ, ಮೈಸೂರಿನ ಎಲ್ಲಾ ರಸ್ತೆಗಳ ಫುಟ್‌ಪಾತ್‌ಗಳಲ್ಲಿ ಜನರು ಓಡಾಡಲು ತೀವ್ರ ತೊಂದರೆಯಾಗಿದೆ.

ಮರದ ಕೊಂಬೆಗಳು ಮುರಿದು ಬಿದ್ದು ಎರಡು ದಿನ ಕಳೆದರೂ ಮೈಸೂರು ಮಹಾನಗರಪಾಲಿಕೆ, ಅರಣ್ಯ ಇಲಾಖೆ ಅಧಿಕಾರಿಗಳು ಅದನ್ನು ತೆರವುಗೊಳಿಸಿ ಸ್ವಚ್ಛ ಮಾಡದ ಕಾರಣ ಪ್ರಮುಖ ರಸ್ತೆಗಳು, ಪಾರ್ಕ್‌ಗಳಲ್ಲಿ ಸಾರ್ವಜನಿಕರು ಓಡಾಡಲು ತೊಂದರೆಯಾಗಿದೆಯಲ್ಲದೆ, ನಗರದ ಸೌಂದರ್ಯ ಹಾಳಾಗಿದೆ.

ಸಯ್ಯಾಜಿರಾವ್ ರಸ್ತೆ, ಜೆಎಲ್‌ಬಿ ರಸ್ತೆ, ಕೆಆರ್‌ಎಸ್ ರಸ್ತೆ, ಟೆಂಪಲ್ ರಸ್ತೆ, ಹುಣಸೂರು ರಸ್ತೆ, ಜಗನ್ಮೋಹನ ಅರಮನೆ ಸುತ್ತಲಿನ ರಸ್ತೆಗಳು, ● 8ನೇ ಪುಟಕ್ಕೆ

> ವಾಹನ ಸಂಚಾರಕ್ಕೆ ಅಡ್ಡಿಯಾಗಿದ್ದ ಪ್ರಮುಖ ರಸ್ತೆಗಳಲ್ಲಿ ಮರದ ರೆಂಬೆಗಳನ್ನು ತೆರವುಗೊಳಿಸಲಾಗಿದೆ. ಸದ್ಯಕ್ಕೆ ಅವುಗಳನ್ನು ರಸ್ತೆ ಪಕ್ಕಕ್ಕೆ ಹಾಕಲಾಗಿದೆ. ಮೇಜರ್ ರಸ್ತೆಗಳಲ್ಲಿ ತೆರವುಗೊಳಿಸುವುದು ಪ್ರಥಮ ಆದ್ಯತೆಯಾಗಿತ್ತು. ಇದೀಗ ಕೊಂಬೆಗಳನ್ನು ಫುಟ್‌ಪಾತ್‌ನಿಂದ ಬೇರೆಡೆಗೆ ಸ್ಥಳಾಂತರಿಸುವ ಕಾರ್ಯ ನಡೆಯುತ್ತಿದೆ. ಮರದಲ್ಲೇ ನೇತಾಡುತ್ತಿರುವ ರೆಂಬೆಗಳನ್ನು ತೆರವುಗೊಳಿಸಿ ಅಪಾಯ ತಪ್ಪಿಸುವಂತೆ ಪಾಲಿಕೆ ತೋಟಗಾರಿಕಾ ವಿಭಾಗದ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಕಾರ್ಯಾಚರಣೆ ಮುಂದುವರಿದಿದೆ.
>
> –ಡಾ.ಎನ್.ಎನ್.ಮಧು, ಆಯುಕ್ತರು, ಮೈಸೂರು ಮಹಾನಗರಪಾಲಿಕೆ

ಚೆಸ್ಕಾಂಗೆ 80 ಲಕ್ಷ ರೂಪಾಯಿ ನಷ್ಟ

ಭಾರಿ ಮಳೆಯ ಕಾರಣ ಮೈಸೂರು ನಗರದಲ್ಲಿ 200 ವಿದ್ಯುತ್ ಕಂಬ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 409 ವಿದ್ಯುತ್ ಕಂಬಗಳು ಮುರಿದು ಬಿದ್ದಿತ್ತು. ನಿನ್ನೆ ಬೆಳಿಗ್ಗೆಯಿಂದ ಚುರುಕಿನಿಂದ ಕಾರ್ಯಾಚರಣೆ ಕೈಗೊಂಡ ಚೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮುರಿದು ಬಿದ್ದ ವಿದ್ಯುತ್ ಕಂಬ ತೆರವು ಮಾಡಿ ಹೊಸ ಕಂಬಗಳನ್ನು ಅಳವಡಿಸಿದ್ದಾರೆ. ಮುರಿದು ಬಿದ್ದ ವಿದ್ಯುತ್ ಕಂಬ ಹಾಗೂ ವಿದ್ಯುತ್ ತಂತಿ ಜಖಂಗೊಂಡಿರುವ ಕಾರಣ ಚೆಸ್ಕಾಂಗೆ ಸುಮಾರು 80 ಲಕ್ಷ ರೂಪಾಯಿ ನಷ್ಟವಾಗಿದೆ. ಮಳೆಗಾಲದಲ್ಲಿ ವಿದ್ಯುತ್ ಕಂಬಗಳು ಮುರಿದು ಬೀಳುವುದು ಸರ್ವೆ ಸಾಮಾನ್ಯ. ಆದ ಕಾರಣ ಚೆಸ್ಕಾಂ ಹೊಸದಾದ ವಿದ್ಯುತ್ ಕಂಬಗಳನ್ನು ಸ್ಟಾಕ್ ಮಾಡಿಕೊಂಡಿತ್ತು. ನಿನ್ನೆ ಬೆಳಿಗ್ಗೆ ಆರಂಭಿಸಿದ ಕಾರ್ಯಾಚರಣೆಯನ್ನು ಇಂದು ಸಂಜೆ ತನಕ ಮುಂದುವರೆಸಿದ ಚೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮುರಿದು ಬಿದ್ದ ವಿದ್ಯುತ್ ಕಂಬಗಳನ್ನು ತೆರವು ಮಾಡಿ ಹೊಸ ಕಂಬಗಳನ್ನು ಅಳವಡಿಸಿದ್ದಾರೆ.

ಸಹಜ ಜೀವನವೇ ಯೋಗ

'ಯೋಗ-ಆರೋಗ್ಯ' ಉಪನ್ಯಾಸದಲ್ಲಿ ವೈದ್ಯಶ್ರೀ ಚನ್ನಬಸವಣ್ಣ ಶರಣರು



ಮೈಸೂರು, ಮೇ 5- ಮನುಷ್ಯನ ಸಹಜ ಜೀವನವೇ ಯೋಗ ಎಂದು ಬೆಂಗಳೂರಿನ ಶ್ರೀ ಗಂಗಾ ಯೋಗ ನಿಸರ್ಗ ಚಿಕಿತ್ಸೆ ಹಾಗೂ ಆಯುರ್ವೇದ ಸಂಶೋಧನಾ ಕೇಂದ್ರದ ವೈದ್ಯಶ್ರೀ ಚನ್ನಬಸವಣ್ಣ ಶರಣರು ತಿಳಿಸಿದ್ದಾರೆ.

ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಆಶೀರ್ವಾದದಿಂದ ಸಾರ್ವಜನಿಕರಿಗಾಗಿ ಏರ್ಪಡಿಸಿರುವ ಜೀವನೋತ್ಸಾಹ ಶಿಬಿರದ ಉಪನ್ಯಾಸದಲ್ಲಿ 'ಯೋಗ-ಆರೋಗ್ಯ' ಕುರಿತು ಮಾತನಾಡುತ್ತಾ ತಿಳಿಸಿದರು.

ವಿಶ್ವಕ್ಕೆ ಯೋಗವು ನಮ್ಮ ಪ್ರಾಚೀನ ಪರಂಪರೆಯ ಅತೀ ಮಹತ್ವದ ಕೊಡುಗೆಯಾಗಿದೆ. ದೇಹ-ಮನಸ್ಸು ಮತ್ತು ಪ್ರಕೃತಿ ನಡುವಿನ ಬಾಂಧವ್ಯವೇ ಪ್ರಕೃತಿ ಯೋಗ. ಮನುಷ್ಯ ಮತ್ತು ಅವನ ಮನಸ್ಸನ್ನು ಒಂದಾಗಿಸುವುದೇ ಸಹಜ ಯೋಗ. ಪ್ರಕೃತಿ ಯೋಗ ಮತ್ತು ಸಹಜ ಯೋಗವನ್ನು ಮಾಡುತ್ತ ಹೋದರೆ ಆರೋಗ್ಯವು ಉತ್ತಮವಾಗಿರುತ್ತದೆ. ಮಾನವನ ಆಧ್ಯಾತ್ಮಿಕ ಶಕ್ತಿಯು ಜಾಗೃತವಾಗಿ ನೆಮ್ಮದಿ ಹಾಗೂ ನಿಶ್ಚಿಂತ ಜೀವನ ನಡೆಸಲು ಸಾಧ್ಯವೆಂದು ಹೇಳಿದರು.

ಸಾವಯವ ಕೃಷಿ ಮಿಷನ್‌ನ ಮಾಜಿ ಅಧ್ಯಕ್ಷ ಎ.ಎಸ್. ಆನಂದ, ಕೃಷಿ ಹಾಗೂ ನಮ್ಮ ಬದುಕಿಗೂ ಅವಿನಾಭಾವ ಸಂಬಂಧವಿದೆ. ಕೃಷಿ ಅರ್ಥ ಮಾಡಿಕೊಂಡರೆ ನಮ್ಮ ಪರಂಪರೆಯನ್ನು ಅರ್ಥಮಾಡಿಕೊಂಡಂತೆ. ನಮ್ಮ ದೇಹಕ್ಕೆ ಪೂರಕವಾದ ಆಹಾರವನ್ನು ನಮ್ಮ ಪೂರ್ವಜರು ತಿಳಿಸಿದ್ದಾರೆ. ಸುಸ್ಥಿರ ಕೃಷಿಗಾಗಿ ಸಾವಯವ ಕೃಷಿಯನ್ನು ಮಾಡಿದಾಗ ಆರೋಗ್ಯಕರವಾದ ಬದುಕನ್ನು ನಮ್ಮದಾಗಿಸಿಕೊಳ್ಳಬಹುದು. ಕೃಷಿಕ ಬೆಳೆಗೆ ಹಾಕುವ ವಿಷ ಪ್ರಕೃತಿಗೆ ಮಾಡುವ ಅಪಚಾರವಾಗಿದೆ. ಮನುಷ್ಯ ಆರೋಗ್ಯವಂತನಾಗಿರಲು ಸಾವಯವ ಕೃಷಿಯ ಮಹತ್ವವನ್ನು ಅರಿತುಕೊಳ್ಳಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ್, ಜಾನಪದ ಸಂಸ್ಕೃತಿ ಪರಂಪರಾನುಗತವಾಗಿ ಬಂದ ಶ್ರೀಮಂತ ಸಂಸ್ಕೃತಿಯಾಗಿದೆ. ಗ್ರಾಮೀಣ ಸೊಗಡನ್ನು ಸಮೃದ್ಧವಾಗಿ ಹಿಡಿದಿಟ್ಟಿರುವ ಒಂದು ಶಕ್ತಿ. ಎಲ್ಲಿವರೆಗೆ ಜಗತ್ತಿನಲ್ಲಿ ಸಾಮಾನ್ಯವರ್ಗ ಅಸ್ತಿತ್ವದಲ್ಲಿರುತ್ತದೆಯೋ ಅಲ್ಲಿಯ ತನಕ ಜಾನಪದ ಸಂಸ್ಕೃತಿ ತಾನೇ ತಾನಾಗಿ ಉಳಿದು ಬರುತ್ತದೆ. ಮೌಖಿಕ ಪರಂಪರೆಯ ಸಾಹಿತ್ಯವೇ ಜಾನಪದವಾಗಿದೆ. ಮನುಷ್ಯ ನಾಗರಿಕತೆಯಿಂದ ಮುಂದುವರಿದರೂ ಸಹ ಅವನ ಮೇಲೆ ಈ ಸಂಸ್ಕೃತಿಯ ಪ್ರಭಾವ ಸಾಕಷ್ಟು ಇರುತ್ತದೆ. ನಮ್ಮ ಸಂಸ್ಕೃತಿಯ ಪ್ರತೀಕವಾದ ಜಾನಪದವು ಸಾರ್ವಕಾಲಿಕವಾದದ್ದು. ಇದು ನಶಿಸದಂತೆ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ನಮ್ಮೆಲ್ಲರದಾಗಬೇಕು ಎಂದು ತಿಳಿಸಿದರು.

ಮಧ್ಯ ಪ್ರಾಚ್ಯ ಯುದ್ಧ ವಿಶ್ಲೇಷಣೆ

ಇಸ್ರೇಲ್-ಇರಾನ್ ಯುದ್ಧ 3ನೇ ಮಹಾಯುದ್ಧಕ್ಕೆ ನಾಂದಿ

ಕೇಂದ್ರ ಸಚಿವಾಲಯ ನಿವೃತ್ತ ಜಂಟಿ ಕಾರ್ಯದರ್ಶಿ ರವಿಜೋಷಿ ಅಭಿಮತ





ಮೈಸೂರಿನ ವಿಜಯನಗರ ಮೂರನೇ ಹಂತದ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವಾಲಯದ ನಿವೃತ್ತ ಜಂಟಿ ಕಾರ್ಯದರ್ಶಿ ರವಿಜೋಷಿ ಅವರು ಮಾತನಾಡಿದರು. ಬಲಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಭಿಕರನ್ನು ಕಾಣಬಹುದು.

ಮೈಸೂರು,ಮೇ 5(ಆರ್‌ಕೆ)-ಇಸ್ರೇಲ್-ಇರಾನ್ ಯುದ್ಧ ನಡೆದರೆ ಅದು ವಿಶ್ವದ 3ನೇ ಮಹಾಯುದ್ಧಕ್ಕೆ ನಾಂದಿಯಾಗಲಿದೆ ಎಂದು ಭಾರತ ಸರ್ಕಾರದ ಸಚಿವಾಲಯದ ನಿವೃತ್ತ ಜಂಟಿ ನಿರ್ದೇಶಕ ರವಿಜೋಷಿ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಓಪನ್ ಫೋರಂ (ಎಮ್‌ಓಎಫ್) ವತಿಯಿಂದ ಮೈಸೂರಿನ ವಿಜಯನಗರ ಮೂರನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಆಯೋಜಿಸಿದ್ದ 'ಇಸ್ರೇಲ್-ಇರಾನ್ ಬಿಕ್ಕಟ್ಟು ಯುದ್ಧದತ್ತ ಸಾಗಿದೆ' ಎಂಬ ವಿಷಯ ಕುರಿಯ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುದ್ಧಗಳಿಂದಾಗುವ ಅನಾಹುತ ಹಾಗೂ ಭೀಕರ ಪರಿಣಾಮಗಳನ್ನು ಎಳೆಎಳೆಯಾಗಿ ಬಿಡಿಸಿದರು.

ಇಸ್ರೇಲ್ ಏನಾದರೂ ವಿಶ್ವದ ಇತರ ದೇಶಗಳ ಮೇಲೆ ಯುದ್ಧವನ್ನು ಬೆಂಬಲಿಸುವುದಿಲ್ಲ. ಆದರೆ ಇಸ್ರೇಲ್ ಮೇಲೆ ಇನ್ನಿತರ ರಾಷ್ಟ್ರಗಳು ದಾಳಿ ಮಾಡಿದ್ದಲ್ಲಿ ಇಸ್ರೇಲ್ ಬೆಂಬಲಕ್ಕೆ ಅಮೇರಿಕ ನಿಲ್ಲುತ್ತದೆ. ಇತ್ತೀಚಿನ ದಿನಗಳಲ್ಲಿ ಲಾಭ ಗಳಿಕೆಗಾಗಿಯೂ ಯುದ್ಧ ನಡೆಸಲಾಗುತ್ತಿದೆ. ಈ ಪ್ರವೃತ್ತಿಯಿಂದ ವಿಶ್ವದ ಏಕತೆ, ಸಮಗ್ರತೆಗೆ ಭಾರಿ ಹೊಡೆತ ಬೀಳುತ್ತದೆ ಎಂದರು.

ಯುದ್ಧಗಳು ಅಪಾರವಾದ ಆರ್ಥಿಕ ನಷ್ಟ ಉಂಟು ಮಾಡುತ್ತವೆ. ಅಲ್ಲದೆ ಯುದ್ಧ ಪೀಡಿತ ರಾಷ್ಟ್ರಗಳು ಆರ್ಥಿಕ ಹೊಡೆತದಿಂದ ಚೇತರಿಸಿಕೊಳ್ಳಲು ಬಹಳ ಕಷ್ಟಪಡಬೇಕಾಗುತ್ತದೆ. ಪ್ಯಾಲೆಸ್ಟೈನ್‌ಗಳ ಸಂಕಷ್ಟಗಳಿಗೆ ಎಲ್ಲಾ ಗಲ್ಫ್ ದೇಶಗಳು ನಿರ್ಲಕ್ಷ್ಯ ಧೋರಣೆ ತಾಳಿವೆ. ಅಲ್ಲದೆ, ಇರಾಕ್-ಇರಾನ್ ಮತ್ತು ಸಿರಿಯಾ ದೇಶಗಳ ಬೆಂಬಲವು ಪ್ಯಾಲೆಸ್ಟೈನಿಗಳನ್ನು ಇಸ್ರೇಲಿನ ಶಾಶ್ವತ ಶತ್ರುಗಳನ್ನಾಗಿ ಮಾಡಿವೆ. ಇದು ಅಮೇರಿಕಾ ಈ ಪ್ರದೇಶದಲ್ಲಿ ಶಾಶ್ವತವಾಗಿ ಮಿಲಿಟರಿ ನೆಲೆಯಾಗಲು ಕಾರಣವಾಗಿದೆ ಎಂದು ರವಿಜೋಷಿ ತಿಳಿಸಿದರು.

ಅಲ್ಲದೆ, ರಷ್ಯಾ ಪ್ರಭಾವ ಈ ಪ್ರದೇಶದಲ್ಲಿ ಕುಗ್ಗುತ್ತಿದ್ದು, ಚೀನಾ ದೇಶವು ಇದನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡು ಅಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಿಕೊಳ್ಳಲೆತ್ನಿಸುತ್ತಿದೆ. ಇರಾನ್ ಮುಖವಾಡದತ್ತ ಮೂರು ಪಡೆಗಳಾದ ಸೌದಿ ಅರೇಬಿಯಾದ ಹಮಾಸ್, ಹಿಸ್ಬುಲ್ಲಾ ಮತ್ತು ಹೌತಿ ಹಾಗೂ ತನ್ನದೇ ಆದ ಅಲ್-ಖುದ್ಸ್ ಪಡೆಗಳು ನಿರಂತರವಾಗಿ ಇರಾನ್ ರಾಷ್ಟ್ರವನ್ನು ಸಂಕಷ್ಟಕ್ಕೆ ಸಿಲುಕಿಸಿವೆ ಎಂದು ಅವರು ನುಡಿದರು.

ಮಧ್ಯ ಪ್ರಾಚ್ಯದಲ್ಲಿ ಅಮೇರಿಕಾದ ಪಾತ್ರದ ಬಗ್ಗೆ ಪ್ರಸ್ತಾಪಿಸಿದ ರವಿ ಜೋಷಿ ಅವರು, ಅಮೇರಿಕಾವು ಟರ್ಕಿ, ಸೌದಿ ಅರೇಬಿಯ ಮತ್ತು ಕುವೈತ್‌ನಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಂಡಿದೆ. ಅಮೇರಿಕವು ಅಫ್ಘಾನಿಸ್ತಾನ, ಇರಾಕ್ ಮತ್ತು ಸಿರಿಯಾಗಳಲ್ಲಿ ಯುದ್ಧಗಳನ್ನು ನಡೆಸಿದೆಯಾದರೂ ಅದು ಜಯಗಳಿಸಲಿಲ್ಲ. ಆದರೆ ಅದು ಆ ಪ್ರದೇಶಗಳನ್ನು ವಿನಾಶಗೊಳಿಸಿತು ಎಂದರು.

ಅಲ್ಲದೆ, ಸೌದಿ ಅರೇಬಿಯಾ ಮತ್ತು ಯಮೆನ್ ಹಾಗೂ ಇರಾನ್-ಇರಾಕ್ ನಡುವಿನ ಯುದ್ಧಗಳನ್ನು ಸಹ ತಡೆಯಲಿಲ್ಲ. ಇಸ್ರೇಲ್ ಮೇಲಿನ ಇರಾನ್ ದಾಳಿಯು ನಿಜವಾಗಲೂ ಅಮೇರಿಕಾಗೆ ಸಂಕಷ್ಟ ಉಂಟುಮಾಡಿದೆ ಎಂಬುದರ ಬಗ್ಗೆ ಅವರು ಬೆಳಕು ಚೆಲ್ಲಿದರು.

ಇದಲ್ಲದೆ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ತಮ್ಮ ಯುದ್ಧ ಟ್ಯಾಂಕ್‌ಗಳನ್ನು ಗಾಜಾದ ಕಡೆಯ ನಿರಾಶ್ರಿತರ ತಾಣವಾದ ರಫಾಗೆ ಕಳುಹಿಸಲು ಅನುಮತಿ ನೀಡಲಾಗುತ್ತಿದೆಯೇ ಎಂದು ಪ್ರಶ್ನಿಸಿದಾಗ ಉತ್ತರಿಸಿದ ಅವರು, ನೇತನ್ಯಾಹು ಏನಾದರೂ ರಫಾಗೆ ನುಗ್ಗಿದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿ ಆ ಪ್ರದೇಶದಲ್ಲಿ ಘೋರ ಯುದ್ಧಕ್ಕೆ ನಾಂದಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ನಂತರ ರವಿ ಜೋಷಿ ಅವರು ವಿಷಯದ ಸಂಬಂಧ ನೆರೆದಿದ್ದವರೊಂದಿಗೆ ಸಂವಾದ ನಡೆಸಿದರು. ಡಾ.ವಿ.ಆರ್. ಅನಿಲ್‌ಕುಮಾರ್, 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ, ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ನಿವೃತ್ತ ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ, ಪ್ರೊ.ಉಮಾಪತಿ, ಡಾ.ಮಂಜುಳಾ, ಬದರಿನಾರಾಯಣ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಅಂತಾರಾಷ್ಟ್ರೀಯ ಇಮ್ಯುನಾಲಜಿ ದಿನಾಚರಣೆ



ಮೈಸೂರು, ಮೇ 5-ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸೂಕ್ಷ್ಮಜೀವ ವಿಜ್ಞಾನ ವಿಭಾಗ ಮತ್ತು ಐಕ್ಯೂಎಸಿಯು ನವದೆಹಲಿಯ ಇಂಡಿಯನ್ ಇಮ್ಯುನಾಲಜಿ ಸೊಸೈಟಿ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಇಮ್ಯುನಾಲಜಿ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಸಿಇಓ ಮತ್ತು ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್. ರಮೇಶ್, ಜೆಎಸ್‌ಎಸ್ ಎ.ಎಚ್.ಇ.ಆರ್. ಕಾಲೇಜಿನ ಜೀವತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಕಿರಣ್ ಕುಮಾರ್ ಎಂ.ಎನ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಯುಕ್ತ 'ಏಜಿಂಗ್ ಆಂಡ್ ಇಮ್ಯುನಿಟಿ' ವಿಷಯದ ಮೇಲೆ ವಿದ್ಯಾರ್ಥಿಗಳಿಗೆ ಅಂತರ-ಕಾಲೇಜು ಭಿತ್ತಿಪತ್ರ ರಚನಾಸ್ಪರ್ಧೆ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಜೆಎಸ್‌ಎಸ್ ಎಎಚ್‌ಇಆರ್ ಕಾಲೇಜಿನ ವಿದ್ಯಾರ್ಥಿಗಳಾದ ವಿಜಯಶ್ರೀ, ಸಿದ್ದಾಂತ್ ಯಾದವ್ ಪ್ರಥಮ ಬಹುಮಾನ ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜಿನ ವೀರೇಶ್, ಸಮಿತ್ ದ್ವಿತೀಯ ಬಹುಮಾನ ಪಡೆದರು.

ಈ ವರ್ಷದ ಇಮ್ಯುನಾಲಜಿ ದಿನದ ಧ್ಯೇಯವು 'ಇಮ್ಯುನಿಟಿ ತ್ರೂ ದಿ ಏಜಸ್: ನ್ಯಾವಿಗೇಟಿಂಗ್ ದಿ ಸೈನ್ಸ್ ಆಫ್ ಏಜಿಂಗ್ ಆಂಡ್ ಇಮ್ಯುನಾಲಜಿ' ವೃದ್ಧಾಪ್ಯ ಮತ್ತು ರೋಗನಿರೋಧಕಶಾಸ್ತ್ರದ ನಡುವಿನ ಸೂಕ್ಷ್ಮ ಸಂಬಂಧ ಮತ್ತು ರೋಗಗಳ ವಿರುದ್ಧ ಹೋರಾಡುವ ಪ್ರಾಯೋಗಿಕ ಅನ್ವಯಗಳನ್ನು ತಿಳಿಸುವ ಗುರಿಯನ್ನು ಹೊಂದಿತ್ತು. 'ಏಜಿಂಗ್ ಥೈಮಸ್ ಅಂಡ್ ಇಮ್ಯುನಿಟಿ' ಕುರಿತು ಡಾ.ಎಸ್.ಆರ್.ರಮೇಶ್ ಹಾಗೂ 'ಏಜ್ ರಿಲೇಟೆಡ್ ಇಮ್ಯುನ್ ಡಿಸಾರ್ಡರ್ಸ್' ಕುರಿತು ಡಾ.ಕಿರಣ್‌ಕುಮಾರ್ ಎಂ.ಎನ್. ವಿವರಣೆ ನೀಡಿದರು.



ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ನೆಟ್‌ಬಾಲ್ ಪಂದ್ಯಾವಳಿಯು ಮೇ 4ರಿಂದ 7ರವರೆಗೆ ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಸದರಿ ಪಂದ್ಯಾವಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಮಹಿಳೆಯರ ನೆಟ್‌ಬಾಲ್ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ (ನಿಂತಿರುವವರು: ಎಡದಿಂದ ಬಲ): ಸುಚಿತ್ರಾ.ಎಲ್, ಮೇಘಾ, ಹರ್ಷಿತಾ, ರಂಜಿತ.ಬಿ, ಶಿವಲೀಲಾ.ಎಸ್, ಐಶ್ವರ್ಯ ಎಸ್.ಎಂ, ಪವಿತ್ರ ಕೆ, ಯಶಸ್ವಿನಿ ಎಂ, ಪ್ರಿಯಾ.ಆರ್, ಪ್ರಲೀ ಬೋಜಮ್ಮ, ಮಾನ್ಯ.ಎಂ, (ಕುಳಿತಿರುವವರು:) ಸ್ವಾತಿ.ಜಿ (ನಾಯಕಿ), ಶಿವಮೂರ್ತಿ ಈ.ಕೆ (ತರಬೇತುದಾರರು), ಡಾ.ಸಿ.ವೆಂಕಟೇಶ್, ನಿರ್ದೇಶಕರು, ಪ್ರತಿಮಾ (ವ್ಯವಸ್ಥಾಪಕರು) ಲೋಕೇಶ್ (ತರಬೇತುದಾರರು) ಇದ್ದಾರೆ.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ



ಮೈಸೂರು, ಮೇ 5- ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಪಠ್ಯದ ಜೊತೆಗೆ ದೈಹಿಕ ಕ್ರೀಡೆಗಳು ಅತ್ಯಂತ ಮುಖ್ಯವೆಂದು ಖ್ಯಾತ ಅರವಳಿಕೆ ತಜ್ಞ ಹಾಗೂ ಅಲ್ಟ್ರಾ ಮ್ಯಾರಥಾನ್ ಓಟಗಾರರಾದ ಡಾ.ಚಿಂತನಾ ಎಂ.ಪಾಟ್ಕರ್ ತಿಳಿಸಿದರು.

ಓವಲ್ ಕ್ರೀಡಾ ಮೈದಾನದಲ್ಲಿ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಏರ್ಪಡಿಸಿದ್ದ ವಾರ್ಷಿಕ ಕ್ರೀಡಾಕೂಟವನ್ನು ಕ್ರೀಡಾಜ್ಯೋತಿ ಬರಮಾಡಿಕೊಳ್ಳುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ವಿದ್ಯಾರ್ಥಿಗಳು ದೈಹಿಕವಾಗಿ ಸಮರ್ಥರಾಗಿರಲು ಕನಿಷ್ಠ ಪಕ್ಷ ದಿನವೊಂದಕ್ಕೆ ಒಂದು ಗಂಟೆಯಾದರೂ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ದೈಹಿಕ ಸದೃಢತೆಯನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡಿದರು. ಪ್ರೊ.ಕುಮುದಾ ಸ್ವಾಗತಿಸಿದರೆ, ಪ್ರೊ.ಮಂಜು ನಾಡಗೀತೆ ಹಾಡಿದರು. ಗೌರವ ಖಜಾಂಚಿ ಶ್ರೀಶೈಲ ರಾಮಣ್ಣವರ್, ಪ್ರಾಂಶುಪಾಲ ಡಾ.ಮರೀಗೌಡ, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥೆ ಡಾ.ಪೂರ್ಣಿಮಾ, ಬೋಧಕ, ಬೋಧಕೇತರ ಸಿಬ್ಬಂದಿ ಇದ್ದರು.

'ಕದಂಬ ರಜತ ಮಾಲೆ' ಲೋಕಾರ್ಪಣೆ



ಮೈಸೂರು,ಮೇ5-ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ.ವಿಜಯಲಕ್ಷ್ಮಿ ಇತಿಹಾಸ ವಿಭಾಗದ 'ಕದಂಬ ರಜತ ಮಾಲೆ: ಸಂಪುಟ -01' ಅನ್ನು ಲೋಕಾರ್ಪಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ಈ ಸಂಚಿಕೆಯು ಅತ್ಯುತ್ತಮವಾದ ಲೇಖನಗಳು, ವರದಿಗಳು, ಪತ್ರಿಕಾ ಪ್ರಕಟಣೆಗಳು, ವಿವಿಧ ಚಟುವಟಿಕೆಗಳ ಛಾಯಾಚಿತ್ರಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳು ಬರೆದಿರುವ ಲೇಖನಗಳಲ್ಲಿ ವಿಮರ್ಶೆ, ವಿಶ್ಲೇಷಣೆಯ ಪ್ರಬುದ್ಧತೆಯು ಎದ್ದು ಕಾಣುತ್ತದೆ. ಜೊತೆಗೆ ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಕ್ರಿಯಾಶೀಲ ಬರವಣಿಗೆಯ ಆಸಕ್ತಿಯನ್ನು ಕಾಣಬಹುದು. ಇಂತಹ ವಿಭಿನ್ನವಾದ ಶೈಕ್ಷಣಿಕ ಕಾರ್ಯಚಟುವಟಿಕೆಗಳು ನಿರಂತರವಾಗಿ ಮೂಡಿಬರಲಿ ಎಂದು ಶುಭ ಹಾರೈಸಿದರು.

'ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲಾರ' ಧ್ಯೇಯದೊಂದಿಗೆ ಸಾಮಾನ್ಯ ವಿಷಯ ಜ್ಞಾನ, ಐತಿಹಾಸಿಕ ಅರಿವು ಹಾಗೂ ಸೃಜನಶೀಲ ಬರವಣಿಗೆಯ ಆಸಕ್ತಿ ಮತ್ತು ಕೌಶಲವನ್ನು ಮುನ್ನೆಲೆಗೆ ತಂದು ಅದನ್ನು ಅನಾವರಣಗೊಳಿಸುವ ಹಾಗೂ ಪ್ರಕಟಿಸುವ ಇತಿಹಾಸ ವಿಭಾಗದ ಮಾಸಿಕ ಸಂಚಿಕೆಯೇ 'ಕದಂಬ'. ಕಳೆದ 2015 ರಿಂದ ಇಲ್ಲಿಯವರೆಗೂ ಸುಮಾರು 42 ಮಾಸಿಕ ಸಂಚಿಕೆಗಳನ್ನು ಪ್ರಕಟಿಸಲಾಗಿದೆ.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಶೈಕ್ಷಣಿಕ ಡೀನ್ ಡಾ.ಶ್ರೀಧರ ಹೆಚ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ವಿಭಾಗದ ಅಧ್ಯಾಪಕ ನಂದೀಶ, ಜಯಲಕ್ಷ್ಮೀ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮೈಸೂರಿನ ಜಯನಗರ ಶ್ರೀರಾಮಮಂದಿರದಲ್ಲಿ ಶನಿವಾರ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವದ ಮಹಾಗಣಪತಿ ಪೂಜೆ, ಪುಣ್ಯಾಹ ಅಂಗವಾಗಿ ನಾಂದಿರಾಮತಾರಕ ಹೋಮ, ಚತುರ್ವೇದ ಪಾರಾಯಣ, ರುದ್ರಾಭಿಷೇಕ, ಸಹಸ್ರನಾಮ ಪೂಜೆ, ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಮಾಡಲಾಯಿತು.

ಜೆಡಿಎಸ್‌ಗೆ ನೇಮಕ



ಮೈಸೂರು, ಮೇ 5-ಕರ್ನಾಟಕ ಪ್ರದೇಶ ಜನತಾದಳ (ಜಾತ್ಯಾತೀತ)ದ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿಯನ್ನಾಗಿ ಎನ್.ಆರ್.ಮೊಹಲ್ಲಾದ ಎನ್.ಸಿ.ಉಮೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪಾಲಿಕೆಯಲ್ಲಿ ವಾರ್ಡ್ ಸಮಿತಿ ರಚನೆಗೆ ಆಯುಕ್ತರ ಒತ್ತಾಯಿಸಲು ನಿರ್ಧಾರ



ಮೈಸೂರು ಗ್ರಾಹಕರ ಪರಿಷತ್ ಕಚೇರಿಯಲ್ಲಿ ನಡೆದ ಮಾಸಿಕ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡಿದ್ದ ಸದಸ್ಯರು.

ಮೈಸೂರು, ಮೇ 5(ಎಸ್‌ಪಿಎನ್)- ಮೈಸೂರು ನಗರಪಾಲಿಕೆಯ 65 ವಾರ್ಡ್‌ಗಳ ಪೈಕಿ ಪ್ರಾಯೋಗಿಕವಾಗಿ ಹತ್ತು ವಾರ್ಡ್‌ಗಳಲ್ಲಿ ಸ್ಥಳೀಯರನ್ನೊಳಗೊಂಡ ವಾರ್ಡ್ ಸಮಿತಿ ರಚಿಸುವಂತೆ ಪಾಲಿಕೆ ಆಯುಕ್ತರನ್ನು ಒತ್ತಾಯಿಸಲು ಮೈಸೂರು ಗ್ರಾಹಕರ ಪರಿಷತ್ ಸದಸ್ಯರು ತೀರ್ಮಾನ ಮಾಡಿದ್ದಾರೆ.

ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿನ ಮೈಸೂರು ಗ್ರಾಹಕರ ಪರಿಷತ್ ಕಚೇರಿ ಆವರಣದಲ್ಲಿ ಶನಿವಾರ ನಡೆದ ಮಾಸಿಕ ಸಾಮಾನ್ಯ ಸಭೆಯಲ್ಲಿ ಮೈಗ್ರಾಪ ಸದಸ್ಯರು ಈ ತೀರ್ಮಾನ ಕೈಗೊಂಡರು. ಬೆಂಗಳೂರು ಜನಾಗ್ರಹ ಸಂಸ್ಥೆಯ ಮಂಜುನಾಥ್ ಮಾತನಾಡಿ, ಹಲವು ವರ್ಷಗಳಿಂದ ವಾರ್ಡ್ ಸಮಿತಿ ರಚಿಸುವಂತೆ ರಾಜ್ಯದ ವಿವಿಧ ಪಾಲಿಕೆಗಳ ಆಯುಕ್ತರಲ್ಲಿ ಒತ್ತಾಯಿಸುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದರು.

ರಾಜ್ಯದ ಬಿಬಿಎಂಪಿ, ಹುಬ್ಬಳ್ಳಿ-ಧಾರವಾಡ, ಬಳ್ಳಾರಿ ಹಾಗೂ ಮಂಗಳೂರು ನಗರಪಾಲಿಕೆ ಸೇರಿದಂತೆ ಇತರೆ ಪಾಲಿಕೆ ವ್ಯಾಪ್ತಿಯಲ್ಲಿ ಸ್ಥಳೀಯರನ್ನೊಳಗೊಂಡ ವಾರ್ಡ್ ಸಮಿತಿ ರಚಿಸುವಂತೆ ಆಯಾಯ ಪಾಲಿಕೆ ಆಯುಕ್ತರಲ್ಲಿ ಮನವಿ ಮಾಡಲಾಗುತ್ತಿದೆ. ಆದರೂ ವಾರ್ಡ್ ಸಮಿತಿ ರಚನೆಗೆ ಅಧಿಕಾರಿಗಳು ಮುಂದಾಗುತ್ತಿಲ್ಲ. ಅದೇ ರೀತಿ ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ಆಯ್ದ ಹತ್ತು ವಾರ್ಡ್‌ಗಳಲ್ಲಿ ಪ್ರಾಯೋಗಿಕ ವಾರ್ಡ್ ಸಮಿತಿ ರಚಿಸುವಂತೆ ಹಲವು ವರ್ಷಗಳಿಂದ ಆಯುಕ್ತರ ಹುದ್ದೆಗೆ ಬಂದ ಎಲ್ಲಾ ಅಧಿಕಾರಿಗಳನ್ನು ಭೇಟಿ ಮಾಡಿ ಒತ್ತಾಯಿಸಿದರೂ ಈಗ-ಆಗ ಎನ್ನುತ್ತಲೇ ಕಾಲ ದೂಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.


ಜನಾಗ್ರಹ ಸಂಸ್ಥೆಯ ಶ್ವೇತ ಮಾತನಾಡಿ, ನಗರ ಪಾಲಿಕೆಯ ವ್ಯಾಪ್ತಿಯ ವಾರ್ಡ್‌ಗಳಲ್ಲಿ 'ವಾರ್ಡ್ ಸಮಿತಿ' ರಚನೆಯಾದರೆ, ಬಡಾವಣೆಗಳ ಅಭಿವೃದ್ಧಿಗೆ, ಸ್ಥಳೀಯರ ಸಮಸ್ಯೆಗೆ ಸ್ಪಂದಿಸಲು ಅಧಿಕಾರಿಗಳಿಗೆ ಈ ಸಮಿತಿ ನೆರವಾಗಲಿದೆ. ಹಾಗಾಗಿ ಕುವೆಂಪುನಗರ, ಗೋಕುಲಂ, ರಾಮಕೃಷ್ಣನಗರ, ಬೋಗಾದಿ ಎರಡನೇ ಹಂತ, ಸರಸ್ವತಿಪುರಂ, ಜಯಲಕ್ಷ್ಮೀಪುರಂ ಸೇರಿದಂತೆ ಇತರೆ ಬಡಾವಣೆಗಳಲ್ಲಿ ಸಾರ್ವಜನಿಕ ಸೇವೆಗಳಲ್ಲಿ ತೊಡಗಿರುವವರನ್ನು ಗುರುತಿಸಿ, ವಾರ್ಡ್ ಸಮಿತಿಯಲ್ಲಿ ಸದಸ್ಯರನ್ನಾಗಿ ನೇಮಕ ಮಾಡುವಂತೆ ಆಯುಕ್ತರಲ್ಲಿ ಮನವಿ ಮಾಡುವ ನಿರ್ಧಾರಕ್ಕೆ ಇತರೆ ಸದಸ್ಯರು ಧ್ವನಿಗೂಡಿಸಿದರು.

ಮೈಗ್ರಾಪ ಸದಸ್ಯ ಬಾಮಿ ವಿ.ಶೆಣೈ ಮಾತನಾಡಿ, ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಸ್ಥಳೀಯರನ್ನೊಳಗೊಂಡ ಸಮಿತಿ ರಚಿಸಿದರೆ, ಮೈಸೂರಿನ ಅಭಿವೃದ್ಧಿ, ಸ್ವಚ್ಛತೆ ಹಾಗೂ ಮೂಲಸೌಕರ್ಯ ಒದಗಿಸಲು ಹೆಚ್ಚಿನ ಆದ್ಯತೆ ನೀಡಿದಂತಾಗುತ್ತದೆ. ಹಾಗಾಗಿ ಪಾಲಿಕೆ ಅಧಿಕಾರಿಗಳಲ್ಲಿ ವಾರ್ಡ್ ಸಮಿತಿ ರಚನೆಯಿಂದ ಮೈಸೂರಿನ ಅಭಿವೃದ್ಧಿಗೆ ಅಧಿಕಾರಿಗಳು ಕೈಗೊಳ್ಳುವ ನಿರ್ಧಾರಕ್ಕೆ ಈ ಸಮಿತಿ ಸಲಹೆಗಳು ನೆರವಿಗೆ ಬರಲಿವೆ ಎಂದು ಸಲಹೆ ನೀಡಿದರು.

ಪ್ರೊ.ರಂಗರಾಜ್ ಮಾತನಾಡಿ, ಸ್ವಚ್ಛನಗರಿ ಮೈಸೂರು ರ್‍ಯಾಂಕ್‌ನಲ್ಲಿ ಪ್ರಸ್ತುತ 27ನೇ ಸ್ಥಾನದಲ್ಲಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ, 52ರಿಂದ 55ನೇ ಸ್ಥಾನಕ್ಕೆ ಹೋಗುತ್ತದೆ. ಹಾಗಾಗಿ ವಾರ್ಡ್ ಸಮಿತಿ ರಚಿಸಿ, ಮೈಸೂರಿನ ಸ್ವಚ್ಛತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವಂತೆ ಮೈಸೂರು ನಗರಪಾಲಿಕೆ ಆಯುಕ್ತರಿಗೆ ವಾರ್ಡ್‌ಸಮಿತಿ ಪ್ರಸ್ತುತತೆ ಕುರಿತು ಮನವರಿಕೆ ಮಾಡಿಕೊಡುವಂತೆ ಸಭೆಗೆ ತಿಳಿಸಿದರು.

ಸಭೆಯಲ್ಲಿ ಮೈಸೂರು ಗ್ರಾಹಕ ಪರಿಷತ್ ಸದಸ್ಯರಾದ ಶೋಭನಾ, ಮಾಳವಿಕಾ ಸೇರಿದಂತೆ ಹಲವು ಸದಸ್ಯರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.05.2024 ಸೋಮವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್.ರಸ್ತೆ, ಬೆಳಗ್ಗೆಯಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ಮೈಸೂರು :** ಸಜ್ಜನ ಹಾಗೂ ಮೌಲ್ಯಯುತ ರಾಜಕಾರಣಿ ಹಿರಿಯ ಮುತ್ಸದ್ದಿ ವಿ.ಶ್ರೀನಿವಾಸಪ್ರಸಾದ್ ಅವರಿಗೆ ನುಡಿ ನಮನ, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಪುಷ್ಪಾರ್ಚನೆ: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷೆ ರೇಣುಕಾರಾಜು, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11 ಗಂಟೆಗೆ.
- **ಕೃಷ್ಣರಾಜ ಯುವ ಬಳಗ:** ಹಿರಿಯ ಮುತ್ಸದ್ದಿ ರಾಜಕಾರಣಿ, ಸಂಸದ ವಿ.ಶ್ರೀನಿ ವಾಸಪ್ರಸಾದ್ ಅವರಿಗೆ ಸಂತಾಪ ಸಭೆ, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮಾಜಿ ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ತಗಡೂರು ರಾಮಚಂದ್ರರಾವ್ ಉದ್ಯಾನವನ, ಚಾಮುಂಡಿಪುರಂ, ಬೆಳಗ್ಗೆ 11ಕ್ಕೆ
- **ಮಹಾರಾಜ ಕಾಲೇಜು:** ಮೈಸೂರು ವಿಶ್ವವಿದ್ಯಾನಿಲಯ, ಕುಟುಂಬ ಸಂಪನ್ಮೂಲ ನಿರ್ವಹಣೆ ವಿಭಾಗ: ಗ್ರಾಹಕರ ಸಮಸ್ಯೆಗಳ ಪರಿಹಾರ ಕುರಿತು ವಿಶೇಷ ಉಪನ್ಯಾಸ, ಮುಖ್ಯ ಅತಿಥಿ: ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಶ್ರೀಮತಿ ಎ.ಕೆ.ನವೀನಕುಮಾರಿ, ಅಧ್ಯಕ್ಷತೆ: ಮಹಾರಾಜ ಕಾಲೇಜು ಪ್ರಾಂಶುಪಾಲರಾದ ಪ್ರೊ.ಹೆಚ್.ಸೋಮಶೇಖರಪ್ಪ, ಸ್ಥಳ: ಜ್ಯೂನಿಯರ್ ಬಿ.ಎ. ಹಾಲ್, ಮಹಾರಾಜ ಕಾಲೇಜು, ಮಧ್ಯಾಹ್ನ 12.30ಕ್ಕೆ.
- **ಉರಿಲಿಂಗಪೆದ್ದಿ ಮಹಾ ಸಂಸ್ಥಾನ ಶಾಖಾ ಮಠ :** ಸಂಸದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಭಾವಪೂರ್ಣ ನಮನ ಗೌರವ ಪ್ರಜ್ಞೆ ಕಾರ್ಯಕ್ರಮ, ಸಾರಥ್ಯ: ಉರಿಲಿಂಗಪೆದ್ದಿ ಮಹಾಸಂಸ್ಥಾನ ಶಾಖಾ ಮಠದ ಪೀಠಾಧಿಪತಿ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ, ಮುಖ್ಯ ಅತಿಥಿಗಳು: ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ಹಿರಿಯ ಪ್ರರ್ತಕರ್ತರಾದ ಅಂಶಿ ಪ್ರಸನ್ನಕುಮಾರ್, ಶಿವಕುಮಾರ್, ಡಾ.ಜೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ರಾಮಸ್ವಾಮಿ, ಅಹಿಂದ ಜವರಪ್ಪ, ಸ್ಥಳ: ಉರಿಲಿಂಗಪೆದ್ದಿ ಮಹಾಸಂಸ್ಥಾನ ಶಾಖಾ ಮಠ, 5ನೇ ಕ್ರಾಸ್, ಗಾಂಧಿನಗರ, ಸಂಜೆ 4.30ಕ್ಕೆ.
- **ರಂಗಾಯಣ :** ಚಿಣ್ಣರ ಮೇಳ-2024, ಸಮರಸತೀ ಜೀವನ, ಚಿಣ್ಣರ ನಾಟಕೋತ್ಸವ, ಮಾಯಾದೀಪ (ತಂಡ-4 ದಾಳಿಂಬೆ) ನಾಟಕ ಹಾಡುಗಳು: ಎಸ್.ರಾಮನಾಥ್, ಸಹ ನಿರ್ದೇಶನ: ರಕ್ಷಿತಾ ಬಿ.ಎಲ್, ರಾಮ್‌ಕುಮಾರ್ ಟಿ., ರಚನೆ-ನಿರ್ದೇಶನ: ಸಚಿನ್ ಮಿತ್ರ, ರಾಮ ರಹೀಮ ನಾಟಕ (ತಂಡ-5 ಪೇರಳೆ), ರಚನೆ-ಎಸ್.ರಾಮನಾಥ್, ಸಹನಿರ್ದೇಶನ: ಸುನೀಲ್, ನಿಶಾಂತ್ ಸಂಜೀವ್ ಪಟೇಲ್, ನಿರ್ದೇಶನ: ನಾಗೇಂದ್ರ ಹೆಗ್ಗವಾಡಿ, ಸ್ಥಳ: ವನರಂಗ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ಆನಂದ್ ಗೋಪಾಲ್, 6.15-ಗೀತಾರಾಧನ, 6.35, 6.10 ವಿಶ್ವ ವಿಖ್ಯಾತ ವಿಜ್ಞಾನಿಗಳು" ಬಾನುಲಿ ಸರಣಿ, ಪ್ರಸ್ತುತಿ-ಶ್ರೀನಿವಾಸಪ್ರಸಾದ್, 6.40-ಪದ ಸಂಸ್ಕೃತಿ-ಪ್ರಸ್ತುತಿ-ಟಿ.ಎಸ್. ಗೋಪಾಲ್, 6.50-ರೈತರಿಗೆ ಸಲಹೆ, 7.15-ಭಾವಗೀತೆಗಳು, 9.05-ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ವಿದ್ವನ್ಮಣಿ ಡಾ.ಕೆ.ಎಸ್.ನಾರಾಯಣಾಚಾರ್ಯ ಅವರೊಂದಿಗೆ ಜಿ. ರಾಜಲಕ್ಷ್ಮೀ ಶ್ರೀಧರ್ ಅವರು ನಡೆಸಿದ್ದ ಸಂವಾದ, 10.00-ಶಾಸ್ತ್ರೀಯ ಸಂಗೀತ-ಹೈದರಾಬಾದ್ ಸಹೋದರರ-ಹಾಡುಗಾರಿಕೆ, 11.00-ಮಿಶ್ರ ಮಾಧುರ್ಯ, 12.30-ದೇವರನಾಮ, 12.45-ನಮ್ಮ ಆರೋಗ್ಯ-ವಿಶ್ವ ಲೂಪಸ್ ಜಾಗೃತಿ ದಿನಾಚರಣೆಯ ಸಂಬಂಧವಾಗಿ 'ಲೂಪಸ್ ಲಕ್ಷಣಗಳು ಮತ್ತು ಚಿಕಿತ್ಸೆ" ಕುರಿತು ಮೈಸೂರಿನ ರುಮೆಟಾಲಜಿಸ್ಟ್ ಡಾ.ಸಂಗೀತಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00 ಚಿತ್ರಗೀತೆಗಳು, 1.20 ಭಾವಗೀತೆಗಳು, 3.00-ಕರ್ನಾಟಕ ಶಾಸ್ತ್ರೀಯ ಸಂಗೀತ, 4.00-ಮಹಿಳಾರಂಗ "ಡಾಕ್ಟರ್ ಸಮಯ", ವಿಷಯ: "ಮೂಳೆ ಸವೆತ ಕಾರಣ ಹಾಗೂ ಚಿಕಿತ್ಸೆ" ಭಾಗವಹಿಸುವ ವೈದ್ಯರು: ಆಯುರ್ವೇದ ವೈದ್ಯೆ ಡಾ.ಚೈತ್ರಾ ಪ್ರಸ್ತುತಿ: ಕೆ.ಬಿ.ಮೀನಾ, 4.45-ಹಿಂದಿ ಪಾಠ-ಪ್ರಸ್ತುತಿ: ಶಾಂತಾ ಡಿ. ಕಿಣಿ, 6.50-ಕೃಷಿರಂಗ ಹಣ್ಣು ಹೊನ್ನು ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ-ಶುಂಠಿ ಉತ್ಪಾದನಾ ತಾಂತ್ರಿಕತೆಗಳು ಈ ಕುರಿತು ತೋಟಗಾರಿಕಾ ಮಹಾವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕ ಡಾ.ಬಿ.ಎಸ್. ಹರೀಶ್ ಅವರೊಂದಿಗೆ ಸಂದರ್ಶನ ಸಂದರ್ಶಕರು: ಎನ್.ಕೇಶವಮೂರ್ತಿ, 10.30 ಸವಿನೆನಪು

ಮೈಸೂರಲ್ಲಿ ಸ್ವಾಮಿ ಚಿನ್ಮಯಾನಂದರ ಜಯಂತಿ ಆಚರಣೆ

ಭಗವದ್ಗೀತೆಯನ್ನು ಮಂಗಳಾರತಿಗೆ ಸೀಮಿತಗೊಳಿಸದೇ ಓದಿ ಅರ್ಥೈಸಿಕೊಳ್ಳಬೇಕು

ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಮಹಾಮೇಧಾನಂದ

ಮೈಸೂರು,ಮೇ 5(ಪಿಎಂ)– ಗುರುದೇವ ಸ್ವಾಮಿ ಚಿನ್ಮಯಾನಂದ ಸರಸ್ವತಿ ಅವರ ಆಶಯದಂತೆ ಭಗವದ್ಗೀತೆಯನ್ನು ದೇವರ ಮುಂದಿಟ್ಟು ಮಂಗಳಾರತಿಗೆ ಸೀಮಿತಗೊಳಿಸದೇ ಓದಿ ಅರ್ಥೈಸಿಕೊಳ್ಳಬೇಕು ಎಂದು ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಮಹಾಮೇಧಾನಂದ ಹೇಳಿದರು.

ಮೈಸೂರಿನ ಗೋಕುಲಂ ಮೂರನೇ ಹಂತದಲ್ಲಿರುವ ಚಿನ್ಮಯ ಮಿಷನ್‌ನ ಶ್ರೀ ಗುರುದೇವ ದತ್ತ ಸನ್ನಿಧಿಯಲ್ಲಿ ಚಿನ್ಮಯ ಮಿಷನ್ ಮೈಸೂರು ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಗುರುದೇವ ಸ್ವಾಮಿ ಚಿನ್ಮಯಾನಂದರ (ಸ್ವಾಮಿ ಚಿನ್ಮಯಾನಂದ ಸರಸ್ವತಿ) 108ನೇ ಜಯಂತಿ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಭಗವದ್ಗೀತೆಗೆ ಮಂಗಳಾರತಿ ಮಾಡುವುದು ನಿಜವಾದ ಭಕ್ತಿಯಲ್ಲ. ಅದಕ್ಕಾಗಿಯೇ ಚಿನ್ಮಯಾನಂದರು ಮಂಗಳಾರತಿ ಪಕ್ಕಕ್ಕೆ ಸರಿಸಿ ಭಗವದ್ಗೀತೆ ತೆಗೆದುಕೊಂಡು ಓದಿ ಎಂಬ ಸಂದೇಶ ನೀಡಿದ್ದಾರೆ. ಅಲ್ಲದೆ, ಓದಿ ಅರ್ಥ ಮಾಡಿಕೊಳ್ಳಿ ಎಂದೂ ಹೇಳಿದ್ದು ಜೊತೆಗೆ ಭಗವದ್ಗೀತೆಯನ್ನು ಸಾಮಾನ್ಯ ಜನರಿಗೆ ಅರ್ಥವಾಗುವಂತೆಯೂ ವ್ಯಾಖ್ಯಾನಿಸಿದ್ದಾರೆ ಎಂದರು.


ಸಜ್ಜನರನ್ನು ಜಾಗೃತಗೊಳಿಸುವುದೇ ಚಿನ್ಮಯಾನಂದರು ಸೇರಿದಂತೆ ನಮ್ಮ ಎಲ್ಲಾ ಮಹಾನೀಯರ ಸಂಕಲ್ಪವಾಗಿದೆ ಸಜ್ಜನರು ಸಮಾಜದಲ್ಲಿ ಹೆಚ್ಚಾಗಬೇಕು. ಭಗವದ್ಗೀತೆಯಲ್ಲಿ ಸಜ್ಜನರು ಹೆಚ್ಚಾಗುವ ಬಗೆಯನ್ನು ಕೃಷ್ಣ ಪರಮಾತ್ಮರು ಹೇಳಿಕೊಟ್ಟಿದ್ದಾರೆ. ಚಿನ್ಮಯಾನಂದರು ತಾವು ತಿಳಿದುಕೊಂಡ ಜ್ಞಾನದ ಅನುಭೂತಿಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ ಎಂದರು.

ಯಾವುದೇ ಶಾಸ್ತ್ರವಾದರೂ ಅದನ್ನು ಅರ್ಥ ಮಾಡಿಕೊಳ್ಳದೇ ಪಾರಾಯಣ ಮಾಡಿದರೆ ಲಾಭವಿಲ್ಲ ಅರ್ಥ ಮಾಡಿಕೊಂಡೇ ಅನುಭೂತಿ ಪಡೆಯಬೇಕು. ಅನುಭೂತಿ ಇಲ್ಲವಾದರೆ ಪ್ರಯೋಜನವಿಲ್ಲ. ಒಮ್ಮೆ ಶ್ರೀ ರಾಮಕೃಷ್ಣರು ನರೇಂದ್ರರನ್ನು (ವಿವೇಕಾನಂದರು) ಕೂಗುತ್ತಾರೆ. ಪಂಚಾಂಗ ತೆಗೆದುಕೊಂಡು ಓದು ಅಂದರು. ವಿವೇಕಾನಂದರು ಜೋರು ಮಳೆ ಬರುತ್ತದೆ ಎಂದಿದೆ ಎಂದು ಓದಿ ಹೇಳಿದರು. ಬಳಿಕ ರಾಮಕೃಷ್ಣರು ಅದನ್ನು ಗಟ್ಟಿಯಾಗಿ ಹಿಂಡು ಎಂದರು. ಅಂತೆಯೇ ನರೇಂದ್ರರು ಮಾಡಿದಾಗ, ಎಲ್ಲೋ ಒಂದು ತೊಟ್ಟು ನೀರೂ ಬರಲಿಲ್ಲ ಎಂದು ರಾಮಕೃಷ್ಣರು ಹೇಳಿದರು. ಅಂದರೆ ಸ್ವತಃ ನಾವು ಸಾಧನೆ ಮಾಡಬೇಕು. ಶಾಸ್ತ್ರದ ಮರ್ಮವು ನಮ್ಮ ಅನುಭೂತಿಯಲ್ಲಿದೆ ಎಂದು ಹೇಳಿದರು.

ಶ್ರೀರಾಮಕೃಷ್ಣರು ಹೇಳುವಂತೆ ಅಹಂಕಾರವನ್ನು ಹೋಗಲಾಡಿಸಲಾಗದು. ಹಾಗಾಗಿ ಭಗವಂತನ ದಾಸ ಎಂಬುದರಲ್ಲಿ ಅಹಂಕಾರ ಇಟ್ಟುಕೊಳ್ಳಬೇಕೆಂದು ಅವರು ಹೇಳುತ್ತಾರೆ. ಅಂತಹ ಗುಣವನ್ನು ಆಂಜನೇಯನಲ್ಲಿ ಕಾಣಬಹುದು. 'ನಾನು ರಾಮನ ದಾಸ' ಎಂಬ ಗರ್ವ ಆಂಜನೇಯಸ್ವಾಮಿಯಲ್ಲಿದೆ. ಎಷ್ಟು ಮತಗಳು ಇವೆಯೋ ಅಷ್ಟು ಪಥಗಳಿವೆ ಎಂದು ಶ್ರೀರಾಮಕೃಷ್ಣರು ಹೇಳಿದ್ದಾರೆ. ಮತ್ತೊಬ್ಬರಲ್ಲಿ ತಪ್ಪು ಕಂಡು ಹಿಡಿಯುವ ಬದಲು ಅವರವರ ಮತಗಳಲ್ಲಿ ಅವರು ಸಾಗಬೇಕೆಂದು ಹೇಳಿದ್ದಾರೆ. ಒಂದರ ಜೊತೆಗೆ ಮತ್ತೊಂದು ಹೋಲಿಕೆ ಮಾಡಿ ತಪ್ಪು ಕಂಡು ಹಿಡಿಯಬೇಡಿ ಎಂದಿದ್ದಾರೆ ಎಂದು ತಿಳಿಸಿದರು.



ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಚಿನ್ಮಯ ಮಿಷನ್‌ನ ಶ್ರೀ ಗುರುದೇವ ದತ್ತ ಸನ್ನಿಧಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗುರುದೇವ ಸ್ವಾಮಿ ಚಿನ್ಮಯಾನಂದರ 108ನೇ ಜಯಂತಿ ಮಹೋತ್ಸವವನ್ನು ಚಿನ್ಮಯಾನಂದರ ಫೋಟೋ ಎದುರು ದೀಪ ಬೆಳಗಿಸುವ ಮೂಲಕ ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಮಹಾಮೇಧಾನಂದ (ಎಡದಿಂದ 3ನೇಯವರು) ಉದ್ಘಾಟಿಸಿದರು. (ಎಡದಿಂದ) ಚಿನ್ಮಯ ಮಿಷನ್ ಮೈಸೂರು ಘಟಕದ ಆಚಾರ್ಯರಾದ ಸ್ವಾಮಿನಿ ಕಾಶಿಕಾನಂದಾಜೀ, ಅಧ್ಯಕ್ಷ ಅಶೋಕ್‌ಕುಮಾರ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರು (ಕೆಬಿಜಿ), ಚಿನ್ಮಯ ಮಿಷನ್ ಮೈಸೂರು ಘಟಕದ ಸಿ.ಎ.ರಂಗನಾಥ್ ಅವರನ್ನು ಚಿತ್ರದಲ್ಲಿ ಕಾಣಬಹುದು.



ಸ್ವಾಮಿ ಚಿನ್ಮಯಾನಂದ

ಇದಕ್ಕೂ ಮುನ್ನ ಚಿನ್ಮಯ ಮಿಷನ್ ಮೈಸೂರು ಘಟಕದ ಆಚಾರ್ಯರಾದ ಸ್ವಾಮಿನಿ ಕಾಶಿಕಾನಂದಾಜೀ ಮಾತನಾಡಿ, ಇಂತಹ ಗುರುಗಳು (ಸ್ವಾಮಿ ಚಿನ್ಮಯಾನಂದರು) ನಮಗೆ ದೊರೆಯಬೇಕಾದರೇ ಅನೇಕ ಜನ್ಮದ ಪುಣ್ಯ ಪ್ರಾಪ್ತಿಯಾಗಿರಬೇಕು. ಅಂತಹ ಪುಣ್ಯದಿಂದ ಮಾತ್ರ ಇಂತಹ ಗುರುಗಳು ದೊರೆತಿದ್ದಾರೆ. ಅಲ್ಲದೆ, ಅವರ ಕೃಪೆಯಿಂದ ಮನಸ್ಸು ಪ್ರಶಾಂತಗೊಳ್ಳುತ್ತದೆ. ಮನಸ್ಸು ಪ್ರಪಂಚದ ಜಂಜಾಟದಲ್ಲಿ ವಿಚಲಿತಗೊಂಡಿರುತ್ತದೆ. ಅದರಿಂದ ಹೊರಬಂದು ಪ್ರಶಾಂತ ಭಾವ ಪಡೆಯಬೇಕಾದರೆ ಇಂತಹ ಗುರುಗಳೇ ಬೇಕು ಎಂದು ಸ್ಮರಿಸಿದರು.

ಭಗವದ್ಗೀತೆ ಮತ್ತು ಉಪನಿಷತ್ ಜ್ಞಾನ ಸಂಪಾದಿಸಿದ ಚಿನ್ಮಯಾನಂದರು, ಈ ಜ್ಞಾನವನ್ನು ಎಲ್ಲರಿಗೂ ಹಂಚಬೇಕೆಂಬ ಇಚ್ಛೆ ಹೊಂದುತ್ತಾರೆ. ನಾನು ಅನುಭವಿಸಿದ ಆನಂದವನ್ನು ಎಲ್ಲರಿಗೂ ಹಂಚಬೇಕೆಂದು ಈ ಕಾರ್ಯದಲ್ಲಿ ಮುಂದುವರೆಯುತ್ತಾರೆ. ಅನೇಕ ಅಡೆತಡೆಗಳ ನಡುವೆ ಛಲಬಿಡದೇ 43 ವರ್ಷಗಳ ಕಾಲ ಅವಿರತವಾಗಿ ಈ ಜ್ಞಾನ ಪ್ರಸಾರ ಮಾಡುತ್ತಾರೆ. ಕೊನೆ ಕೊನೆಗೆ ಅವರ ಆರೋಗ್ಯ ಸ್ಥಿತಿ ಉತ್ತಮವಾಗಿ ಇಲ್ಲವಾದರೂ ಅವರು ಛಲ ಮಾತ್ರ ಕುಗ್ಗುವುದಿಲ್ಲ ಎಂದರು.

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರು (ಕೆಬಿಜಿ) ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಪ್ರಾರಂಭದಲ್ಲಿ ಗುರುದೇವರ ಗೌರವಾರ್ಥ ಭಜನೆ ನಡೆಯಿತು. ಬಳಿಕ ಅವರ ಪಾದುಕಾ ಪೂಜೆ ನೆರವೇರಿಸಲಾಯಿತು. ನಂತರ ಆರತಿ ಸೇರಿದಂತೆ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ಚಿನ್ಮಯ ಮಿಷನ್ ಮೈಸೂರು ಘಟಕದ ಹೆಚ್.ಕೆ.ಅಶೋಕ್‌ಕುಮಾರ್, ಮಾಜಿ ಅಧ್ಯಕ್ಷ ಎ.ಜಿ.ಕೃಷ್ಣಮೂರ್ತಿ, ಉಪಾಧ್ಯಕ್ಷ ಕೆಎಸ್‌ಎನ್ ಪ್ರಸಾದ್, ಸಹಕಾರ್ಯದರ್ಶಿ ಹರಿಪ್ರಸಾದ್, ಕಮಿಟಿ ಸದಸ್ಯರಾದ ರಾಜೇಶ್ ಸಚ್‌ದೇವ, ಸಿ.ಎ.ರಂಗನಾಥ್, ಹಿರಿಯ ಸದಸ್ಯ ರಾಮಪ್ರಸಾದ್, ನಿವೃತ್ತ ಪ್ರಾಧ್ಯಾಪಕಿ ಸುಧಾ ಪ್ರಸಾದ್ ಮತ್ತಿತರರು ಹಾಜರಿದ್ದರು.

> ಗುರುದೇವರು (ಚಿನ್ಮಯಾನಂದರು) ಇಲ್ಲವಾಗಿದ್ದರೆ ನಮ್ಮಂತಹವರಿಗೆ ಉಪನಿಷತ್ ಮತ್ತು ಭಗವದ್ಗೀತೆ ಜ್ಞಾನ ದೊರೆಯುತ್ತಿರಲಿಲ್ಲ. ಹಾಗಾಗಿ ಚಿನ್ಮಯಾನಂದರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು. ಅವರ ಋಣ ತೀರಿಸಲು ಸಾಧ್ಯವಿಲ್ಲ. ಆದರೆ ಅವರ ಇಚ್ಛೆಯಂತೆ ಈ ಜ್ಞಾನವನ್ನು ಹೆಚ್ಚು ಜನರಿಗೆ ತಲುಪಿಸಬೇಕು. ಅವರ ನೀಡಿದ ಉಪದೇಶದಂತೆ ಜೀವನ ಮಾಡಲು ಪ್ರಾಮಾಣಿಕ ಪ್ರಯತ್ನ ನಮ್ಮದಾಗಬೇಕು. ಕಷ್ಟವಾದರೂ ಪ್ರಯತ್ನ ಮಾಡಬೇಕು.
> -ಸ್ವಾಮಿನಿ ಕಾಶಿಕಾನಂದಾಜೀ

> **ಆಧ್ಯಾತ್ಮದ ಮಹಾನ್ ಚಿಂತಕರು**
> ಸ್ವಾಮಿ ಚಿನ್ಮಯಾನಂದರು ಆಧ್ಯಾತ್ಮದ ಮಹಾನ್ ಚಿಂತಕರು ಹಾಗೂ ಅವರೊಬ್ಬ ಆಧ್ಯಾತ್ಮದ ಪ್ರಖರ ಬರಹಗಾರರು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಚಿನ್ಮಯಾನಂದರು ಭಗವದ್ಗೀತೆ ಕುರಿತಂತೆ ಅಪಾರ ಜ್ಞಾನಿಗಳಾಗಿದ್ದರು.
> -ಡಾ.ಕೆ.ಬಿ.ಗಣಪತಿ
> ಸಂಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ'

ಸಂಗೀತ, ನೃತ್ಯಕ್ಕೆ ಕಲಾ ನಗರಿ ಮೈಸೂರು ಸ್ವರ್ಗ

ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು



ಭಗಿನಿ ಸೇವಾ ಸಮಾಜದ ವತಿಯಿಂದ ಆಯೋಜಿಸಿದ್ದ ಏಳು ದಿನಗಳ ಭಗಿನೀ ರಾಮೋತ್ಸವ ಕಾರ್ಯಕ್ರಮವನ್ನು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಉದ್ಘಾಟಿಸಿದರು.

ಮೈಸೂರು, ಮೇ 5(ಎಸ್‌ಪಿಎನ್)– ರಾಜಾಶ್ರಯ ಕಾಲದಿಂದಲೂ ಕಲಾ ನಗರಿ ಮೈಸೂರು ಕಲೆ, ಸಂಗೀತ, ನೃತ್ಯ, ಇತರೆ ಕಲಾ ಚಟುವಟಿಕೆಗಳಿಗೆ ಸ್ವರ್ಗ ಎನಿಸಿಕೊಂಡಿದೆ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ವಿದ್ಯಾಸಂಸ್ಥೆ ಆವರಣದಲ್ಲಿ ಭಗಿನಿ ಸೇವಾ ಸಮಾಜದ ವತಿಯಿಂದ ಆಯೋಜಿಸಿದ್ದ ಏಳು ದಿನಗಳ ಭಗಿನೀ ರಾಮೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ರಾಮದೇವರ ಅನುಗ್ರಹದಿಂದ ದೇಶದೆಲ್ಲೆಡೆ ರಾಮನ ಉತ್ಸವಗಳಾಗುತ್ತಿದೆ. ಅದರಂತೆ ಮೈಸೂರಿನಲ್ಲೂ ರಾಮನ ಉತ್ಸವಗಳು ಜರುಗುತ್ತಿವೆ. ಅಲ್ಲದೆ ಸಾಂಸ್ಕೃತಿಕವಾಗಿ ದೇಶಾದ್ಯಂತ ಹಳೆಯ ಇತಿಹಾಸ ಮರುಕಳಿಸುತ್ತಿದೆ ಎಂದ ಶ್ರೀಗಳು, ಭಗಿನೀ ಸೇವಾ ಸಮಾಜದ ವಿಶೇಷ ಮುತುವರ್ಜಿಯಿಂದ ಶ್ರೀರಾಮ ದೇವರ ಆಚರಣೆ ಮಾಡುತ್ತಿರುವುದು ಸಂತೋಷದ ವಿಷಯ ಎಂದರು.

ಇಂದಿನ ಯುವ ಪೀಳಿಗೆ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಇದರಿಂದ ರಾಮರಾಜ್ಯ ಸ್ಥಾಪಿಸಲು ಸಾಧ್ಯ. ಈ ನಿಟ್ಟಿನಲ್ಲಿ ಸಂಘ–ಸಂಸ್ಥೆಗಳು ಉತ್ತಮ ಸಮಾಜ ನಿರ್ಮಾಣಕ್ಕೆ ಕಲೆ, ಸಾಹಿತ್ಯ, ನೃತ್ಯ, ಸಂಗೀತ ಕಲಿಕೆಗೆ ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.


ವೇದಿಕೆ ಕಾರ್ಯಕ್ರಮದ ನಂತರ ವಿದ್ವಾನ್ ಸುಮಂತ್ ಮಂಜುನಾಥ್, ವಿದುಷಿ ಮಾಳವಿ ಮಂಜುನಾಥ್, ವಿದ್ವಾನ್ ಎಂ.ಮಂಜುನಾಥ್, ಮೈಸೂರು ನಾಗರಾಜ್ ಅವರುಗಳು ವಯೋಲಿನ್ ನುಡಿಸಿ ಪ್ರೇಕ್ಷಕರ ಮನಗೆದ್ದರು. ಇವರಿಗೆ ವಿದ್ವಾನ್ ಜಯಚಂದ್ರ ರಾವ್(ಮೃದಂಗ), ವಿದ್ವಾನ್ ರೂಪಕ್ ಕಲ್ಲೂರ್ (ತಬಲ) ಸಾಥ್ ನೀಡಿದರು.

ಮೇ 6ರಂದು ವಿದುಷಿ ಕೃತಿ ಭಟ್ ಗಾಯನ ನಡೆಸಿಕೊಡಲಿದ್ದು, ಇವರಿಗೆ ವಿದ್ವಾನ್ ವಿಠ್ಠಲ್ ರಂಗನ್ (ವಯೋಲಿನ್), ವಿದ್ವಾನ್ ಬಿ.ಎಸ್. ಪ್ರಶಾಂತ್(ಮೃದಂಗ), ವಿದ್ವಾನ್ ಶಮಿತ್ ಎಸ್ ಗೌಡ (ಘಟಂ) ನುಡಿಸಲಿದ್ದಾರೆ. ಈ ವೇಳೆ ಭಗಿನೀ ಸೇವಾ ಸಮಾಜದ ಅಧ್ಯಕ್ಷ ಶ್ರೀನಿವಾಸ, ಟ್ರಸ್ಟಿಗಳಾದ ವಾಸುದೇವ ಭಟ್, ಕೆ.ಎಸ್. ಗುರುರಾಜ್ ಸ್ವರ್ಣಕುಮಾರ್, ಮುರುಳಿಧರ್ ಭಟ್ ಸೇರಿದಂತೆ ಇತರರಿದ್ದರು.



ವಿದ್ವಾನ್ ಸುಮಂತ್ ಮಂಜುನಾಥ್, ವಿದುಷಿ ಮಾಳವಿ ಮಂಜುನಾಥ್ ವಯೋಲಿನ್ ನುಡಿಸಿ, ಪ್ರೇಕ್ಷಕರ ಮನಗೆದ್ದರು.

ವ್ಯಂಗ್ಯಚಿತ್ರ, ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನಕ್ಕೆ ಚಾಲನೆ



ಖ್ಯಾತ ವ್ಯಂಗ್ಯಚಿತ್ರಕಾರ ಎಂ.ವಿ.ನಾಗೇಂದ್ರಬಾಬು ರಚಿತ ವ್ಯಂಗ್ಯಚಿತ್ರ ಹಾಗೂ ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನಕ್ಕೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಭಾನುವಾರ ಚಾಲನೆ ನೀಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಶಿಲ್ಪ ಕಲಾವಿದ ಎಲ್.ಶಿವಲಿಂಗಪ್ಪ ಮತ್ತಿತರರಿದ್ದರು.

> **ಆಕರ್ಷಕ ವ್ಯಂಗ್ಯಚಿತ್ರಗಳ ಪ್ರದರ್ಶನ...**
> ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಖ್ಯಾತ ವ್ಯಂಗ್ಯಚಿತ್ರಕಾರ ಎಂ.ವಿ.ನಾಗೇಂದ್ರಬಾಬು ರಚಿತ ಆಕರ್ಷಕ ವ್ಯಂಗ್ಯಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ. ಐಪಿಎಲ್‌ನಲ್ಲಿ ಒಂದು ಬಾರಿಯೂ ಕಪ್ ಗೆಲ್ಲದ ಆರ್‌ಸಿಬಿ ತಂಡದ ಸ್ಥಿತಿ, ಮೈಸೂರು ರಾಜಮಾರ್ಗದ ದುಸ್ಥಿತಿ, ಮೈಸೂರಿನಲ್ಲಿರುವ ಸೈಕಲ್ ಪಾತ್‌ಗಳ ಅವಸ್ಥೆ, ಮತದಾನ, ರಾಜ್ಯ ಸರ್ಕಾರ ಗ್ಯಾರಂಟಿ ಕೀ, ಬಿಸಿಲಿನ ತಾಪ ಸೇರಿದಂತೆ ಗಣ್ಯ ವ್ಯಕ್ತಿಗಳ ವ್ಯಂಗ್ಯಚಿತ್ರಗಳ ನೋಡಲು ಆಕರ್ಷಣೀಯವಾಗಿವೆ.

ಮೈಸೂರು, ಮೇ 5(ಎಂಕೆ)– ನಗರದ ರಾಮಾನುಜ ರಸ್ತೆಯಲ್ಲಿರುವ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಖ್ಯಾತ ವ್ಯಂಗ್ಯಚಿತ್ರಕಾರ ಹಾಗೂ ಫುಲ್‌ಬ್ರೈಟರ್ ಎಂ.ವಿ.ನಾಗೇಂದ್ರಬಾಬು(ಬ್ಯಾಂಟರ್ ಬಾಬು) ರಚಿತ ವ್ಯಂಗ್ಯಚಿತ್ರ ಹಾಗೂ ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನಕ್ಕೆ ಭಾನುವಾರ ಚಾಲನೆ ನೀಡಲಾಯಿತು.

ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ಬೆಂಗಳೂರು ಪ್ರೆಸ್ ಕ್ಲಬ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಆಯೋಜಿಸಿರುವ ವ್ಯಂಗ್ಯಚಿತ್ರಗಳ ಪ್ರದರ್ಶನಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪ್ರತಿಭೆಯಲ್ಲಿ ಅಡಗಿರುವ ಪ್ರತಿಭೆ ವ್ಯಂಗ್ಯಚಿತ್ರಕಾರ ಹಾಗೂ ಫುಲ್‌ಬ್ರೈಟರ್ ಎಂ.ವಿ.ನಾಗೇಂದ್ರಬಾಬು. ಪ್ರಚಲಿತ ವಿದ್ಯಮಾನಗಳನ್ನು ವ್ಯಂಗ್ಯಚಿತ್ರದ ಮೂಲಕ ಅರ್ಥವತ್ತಾಗಿ ಚಿತ್ರಿಸಿದ್ದಾರೆ. ಅವರಲ್ಲಿನ ಕಲೆ ನೋಡಿದರೆ ಬಹಳ ಸಂತೋಷವಾಗುತ್ತದೆ. ಐಪಿಎಲ್‌ನ ಆರ್‌ಸಿಬಿ ಮಹಿಳಾ ತಂಡಕ್ಕೆ ಕಪ್ ಕೊಟ್ಟು, ಪುರುಷರ ತಂಡ ಅಡುಗೆ ಮಾಡುವಂತೆ ಚಿತ್ರಿಸುವ ಮೂಲಕ ಹಾಸ್ಯದೊಂದಿಗೆ ವಾಸ್ತವ ಸಂಗತಿಯನ್ನು ತಿಳಿಸಿದ್ದಾರೆ. ಹಾಗೆಯೇ ಮೈಸೂರಿನ ರಾಜಮಾರ್ಗದ ದುಸ್ಥಿತಿ, ಸೈಕಲ್‌ಪಾತ್, ಪರಿಸರ ದಿನಾಚರಣೆ ನಡುವೆ ಪರಿಸರ ಮಾಲಿನ್ಯ ಇತ್ಯಾದಿ ಗಂಭೀರ ಸಮಸ್ಯೆಗಳ ಬಗ್ಗೆ ತಿಳಿಸುವ ಮೂಲಕ ತಮ್ಮಲ್ಲಿರುವ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುವ ಸೂಕ್ಷ್ಮ ಸಂವೇದಿಯುಳ್ಳ ವ್ಯಕ್ತಿ ಎಂದರು.

ಅಮೇರಿಕಾದಲ್ಲಿಯೂ ತಮ್ಮ ವ್ಯಂಗ್ಯಚಿತ್ರ ಕಲೆಯನ್ನು ಪ್ರದರ್ಶನ ನೀಡಿ ಪ್ರಸಿದ್ಧಿ ಪಡೆದಿರುವ ಅವರು ಅವರಲ್ಲಿರುವ ಆಲೋಚನೆಗಳು ಕೃತಿಯ ರೂಪದಲ್ಲಿ ವ್ಯಕ್ತವಾಗಬೇಕಾಗಿರುವುದು ಬಹಳಷ್ಟಿದೆ. ಪ್ರಸ್ತುತ ಸಮಾಜದಲ್ಲಿ ತಾತ್ಕಾಲಿಕವಾಗಿ ಸೆಳೆಯುವ ವಿಚಾರಗಳನ್ನು ಸಮಾಜ ಹೆಚ್ಚಾಗಿ ಗಮನಿಸುತ್ತಿದೆ. ಆದರೆ, ದೀರ್ಘಕಾಲದವರೆಗೂ ಪ್ರಸ್ತುತವೆನಿಸುವ ವ್ಯಂಗ್ಯಚಿತ್ರಗಳನ್ನು ರಚನೆ ಮಾಡುವ ಅವರಿಗೆ ಪೂರ್ಣ ಪ್ರಮಾಣ ಬೆಂಬಲ ಅವಶ್ಯವಾಗಿದೆ. ಬಾಬು ವ್ಯಂಗ್ಯಚಿತ್ರ ಪಯಣ ಇದೇ ರೀತಿಯಾಗಿ ಮುಂದುವರೆಯಲಿ ಎಂದು ಆಶಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ಆರ್ಟ್ ಗ್ಯಾಲರಿಯ ಎಲ್.ಶಿವಲಿಂಗಪ್ಪ, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಖ್ಯಾತ ವ್ಯಂಗ್ಯಚಿತ್ರಕಾರ ಎಂ.ವಿ.ನಾಗೇಂದ್ರಬಾಬು, ಯೋಗಶಿಕ್ಷಕ ಅನಂತು ಮತ್ತಿತರರಿದ್ದರು.

ನಕಲಿ ಕೀ ಬಳಸಿ ಮನೆಯ ವಸ್ತುಗಳ ಕಳವು

ಮೈಸೂರು, ಮೇ 5(ಎಸ್‌ಬಿಡಿ)– ನಕಲಿ ಕೀ ಬಳಸಿ ಮನೆಯಲ್ಲಿದ್ದ ವಸ್ತುಗಳು ಹಾಗೂ ನಗದು ದೋಚಿರುವ ಘಟನೆ ಮೈಸೂರಿನ ಹೂಟಗಳ್ಳಿಯಲ್ಲಿ ನಡೆದಿದೆ. ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿ ನಿವಾಸಿ ವಸಂತಾ ಅವರ ಮನೆಯಲ್ಲಿ ಈ ಘಟನೆ ನಡೆದಿದೆ. ಖಾಸಗಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿರುವ ಇವರು ಕುಟುಂಬದವರೊಂದಿಗೆ ಏ.30ರಂದು ರಾತ್ರಿ ಪ್ರವಾಸ ತೆರಳಿದ್ದರು. ಮೇ 5ರಂದು ಬೆಳಗಿನ ಜಾವ ವಾಪಸ್ಸಾಗಿ ಮನೆಯೊಳಗೆ ಹೋದಾಗ ಶಾಕ್ ಕಾದಿತ್ತು. ದುಷ್ಕರ್ಮಿಗಳು ಮನೆಯಲ್ಲಿದ್ದ 2 ಯುಪಿಎಸ್, 2 ಸಿಪಿಯು, 2 ಗ್ಯಾಸ್ ಸಿಲಿಂಡರ್, ಸ್ಟೌವ್, ಮಿಕ್ಸರ್, ಇಂಡಕ್ಷನ್ ಸ್ಟೌವ್, ಲ್ಯಾಪ್‌ಟಾಪ್, ಒಂದು ಜೊತೆ ಬೆಳ್ಳಿ ದೀಪದ ಕಂಬ ಹಾಗೂ 35 ಸಾವಿರ ರೂ. ನಗದನ್ನು ದೋಚಿಕೊಂಡು ಹೋಗಿದ್ದರು. ಈ ಸಂಬಂಧ ವಸಂತಾ ಅವರು ನೀಡಿರುವ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು, ಕಳ್ಳರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಮಂತ್ರಗಳ ಉಚ್ಚಾರಣೆಯಿಂದ ನಮ್ಮಲ್ಲಿರುವ ಅಜ್ಞಾನ ನಾಶವಾಗಿ ದೈವಿಗುಣ ಬರಲಿದೆ

ಶ್ರೀ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀ ಭಜನಾನಂದಜೀ ಮಹಾರಾಜ್

ಮೈಸೂರು, ಮೇ 5(ಎಂಕೆ)– ಮಂತ್ರಗಳ ಉಚ್ಚಾರಣೆಯಿಂದ ನಮ್ಮಲ್ಲಿರುವ ಅಜ್ಞಾನ ನಾಶವಾಗಿ ದೈವಿಗುಣ ಸಂಪನ್ನರಾಗಿ ನಮ್ಮೊಳಗಿನ ದೈವತ್ವವನ್ನು ಅನುಭವಿಸಲು ಸಾಧ್ಯವಾಗುತ್ತದೆ ಎಂದು ಶ್ರೀ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀ ಭಜನಾನಂದಜೀ ಮಹಾರಾಜ್ ತಿಳಿಸಿದರು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಮಂತ್ರದ ಶಕ್ತಿ' ಕುರಿತು ಮಾತನಾಡಿದ ಅವರು, ನಾವು ಸಾಮಾನ್ಯವಾಗಿ ಬಳಸುವ ಶಬ್ದಗಳಿಗೂ ಮಂತ್ರಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ ಮುಖ್ಯವಾಗಿ ಮಂತ್ರ ಎಂದರೇನು? ಮಂತ್ರಕ್ಕೂ ಸಾಮಾನ್ಯ ಶಬ್ದಗಳಿಗೆ ಇರುವ ವ್ಯತ್ಯಾಸವೇನು.? ನಾವೇಕೆ ಮಂತ್ರಗಳನ್ನು ಮತ್ತೆ ಮತ್ತೆ ಜಪಿಸಬೇಕು? ಮಂತ್ರಗಳನ್ನು ಜಪಿಸುವುದರಿಂದಾಗುವ ಫಲಿತಾಂಶವೇನು? ಎಂಬ ಪ್ರಶ್ನೆಗಳನ್ನು ನಮಗೆ ನಾವೇ ಹಾಕಿಕೊಂಡು ಚಿಂತನೆ ನಡೆಸಬೇಕು ಎಂದರು.

ಸಾಮಾನ್ಯವಾಗಿ ಬಳಸುವ ಶಬ್ದಗಳು ನಮ್ಮಲ್ಲಿರುವ ಜ್ಞಾನವನ್ನು ಇನ್ನೊಬ್ಬರಿಗೆ ತಲುಪಿಸಲು ಸಹಾಯ ಮಾಡುತ್ತೇವೆ. ಉದಾಹರಣೆಗೆ ಶಿಕ್ಷಕರೊಬ್ಬರು ಪಾಠ ಮಾಡುವಾಗ ಅವರ ಮನಸ್ಸಿನಲ್ಲಿರುವ ಜ್ಞಾನ ಅವರ ಮಾತಿನ ಮೂಲಕ ವಿದ್ಯಾರ್ಥಿಗಳ ಮನಸ್ಸಿಗೆ ಪ್ರವೇಶ ಪಡೆಯುತ್ತದೆ. ಶಬ್ದದಲ್ಲಿರುವ ಶಕ್ತಿಗೂ, ಮಂತ್ರಗಳಲ್ಲಿರುವ ಶಕ್ತಿಗೂ ವ್ಯತ್ಯಾಸಗಳಿವೆ. ಶಬ್ದಗಳಿಗೆ ಜ್ಞಾನ ವರ್ಗಾಯಿಸುವ ಶಕ್ತಿ ಇದ್ದರೆ, ಮಂತ್ರಗಳಲ್ಲಿ ದೇವರನ್ನು ಸಂಪರ್ಕಿಸುವ ವಾಚಕ ಶಕ್ತಿ ಇರಲಿದೆ. ನಾವು ಯಾವ ದೇವರನ್ನು ಕುರಿತು ಮಂತ್ರ ಜಪಿಸುತ್ತೇವೆಯೋ ಆ ದೇವರನ್ನು ಸಾಕ್ಷಾತ್ಕರಿಸುವ ವಾಚಕ ಶಕ್ತಿ ಮಂತ್ರಗಳಿಗಿರಲಿದೆ ಎಂದರು.

ಪತಂಜಲಿ ಮಹರ್ಷಿಗಳು ತಮ್ಮ ಯೋಗಸೂತ್ರದಲ್ಲಿ ದೇವರ ಮಂತ್ರಗಳನ್ನು ಜಪಿಸುವ ಮೂಲಕ ಇಷ್ಟ ದೇವರ ಸಂಪರ್ಕ ಸಾಧ್ಯ ಎಂದು ತಿಳಿಸಿದ್ದಾರೆ. ದೇವರ ದರ್ಶನವೆಂದರೆ ದೇವರು ಎದುರುಗಡೆ ಬಂದು ನಿಲ್ಲುವುದಲ್ಲ. ಮಂತ್ರಗಳ ಉಚ್ಚಾರಣೆಯಿಂದ ನಮ್ಮಲ್ಲಿರುವ ಅಜ್ಞಾನ ನಾಶವಾಗಿ ದೈವಿಗುಣ ಸಂಪನ್ನರಾಗಿ ನಮ್ಮೊಳಗಿನ ದೈವತ್ವವನ್ನು ಅನುಭವಿಸಲು ಸಾಧ್ಯವಾಗುತ್ತದೆ. ಅಂತರಂಗದಲ್ಲಿ ಭಗವಂತನ ದರ್ಶನವಾಗುತ್ತದೆ ಎಂಬುದನ್ನು ಛಾಂದೋಗ್ಯೋಪನಿಷತ್‌ನಲ್ಲಿಯೂ 'ದೌಲಭುತ್ವ ದೇವಾನ್ ಯಾತೀ' ನಾವು ಮೊದಲು ದೈವತ್ವವನ್ನು ಅನುಭವಿಸಿ ನಂತರ ದೇವರನ್ನು ತಲುಪುತ್ತೇವೆ ಎಂದು ತಿಳಿಸಿದೆ. ಇದುವೇ ಮಂತ್ರಗಳಲ್ಲಿರುವ ವಾಚಕ ಶಕ್ತಿಯಾಗಿದೆ ಎಂದು ತಿಳಿಸಿಕೊಟ್ಟರು.

ಚಿಂತನೆ, ಪ್ರಾರ್ಥನೆ ಮಾಡಬೇಕು: ವಂದನಾರ್ಪಣೆ ಮಾತಗಳನ್ನಾಡಿದ ಶ್ರೀ ರಾಮಕೃಷ್ಣ ಆಶ್ರಮಯದ ಅಧ್ಯಕ್ಷರಾದ ಮುಕ್ತಿದಾನಂದಜೀ ಮಹಾರಾಜ್, ನಮ್ಮೆಲ್ಲರ ಜೀವನದಲ್ಲಿಯೂ ಪ್ರತಿನಿತ್ಯ ಜಪ ಮಾಡುವ ಮಂತ್ರಗಳಲ್ಲಿರುವ ವಾಚಕ ಶಕ್ತಿಯ ತಿಳುವಳಿಕೆ, ಅಂತರ್ಯದಲ್ಲಿರುವ ಶಕ್ತಿಯನ್ನು ಅಭಿವ್ಯಕ್ತಗೊಳಿಸಲು ಶಾಸ್ತ್ರಗಳು ಹೇಳುವುದೇನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮಂತ್ರಗಳ ಶಕ್ತಿ ಕುರಿತು ಮಾಹಿತಿ ಜೊತೆಗೆ ನಾವು ಚಿಂತನೆ ಮಾಡಿಯೇ ಇನ್ನಷ್ಟು ಅರ್ಥ ಮಾಡಿಕೊಳ್ಳಬೇಕು. ಮನನ ಮಾಡಬೇಕು. ಪ್ರಾರ್ಥನೆ ಮಾಡಬೇಕು ಎಂದರು. ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಸಾಧುಗಳು, ಭಕ್ತರು ಉಪಸ್ಥಿತರಿದ್ದರು.



ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ನಡೆದ ವಿಶೇಷ ಉಪನ್ಯಾಸದಲ್ಲಿ ಸಾಧುಗಳು, ಸಭಿಕರನ್ನು ಕಾಣಬಹುದು.



ಶ್ರೀ ಭಜನಾನಂದಜೀ ಮಹಾರಾಜ್

ನಕ್ಕರೆ ಅದೇ ಸ್ವರ್ಗ

ತಿಮ್ಮ : ಎಲೆಕ್ಟ್ರಿಕ್ ಅಂಗಡಿ ಮುಂದೆ ಹಾಕಿದ್ದ ಬೋರ್ಡ್ ಓದಿ ಸುಸ್ತಾಗಿ ಬಿಟ್ಟೆ...

ಬೊಮ್ಮ : ಏನಂತ ಹಾಕಿದ್ರು...?

ತಿಮ್ಮ : ನಿಮಗೆ ಯಾರೂ ಫ್ಯಾನ್ ಇಲ್ವಾ ಹಾಗಾದ್ರೆ ನಮ್ಮಲ್ಲಿ ತಗೊಂಡು ಹೋಗಿ!

ಮೈಸೂರು ಮಿತ್ರ

ಸೋಮವಾರ, 6 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಚಪ್ಪಾಳೆ ತಟ್ಟಿದ್ದನ್ನೆಲ್ಲ ಪ್ರಶಂಸೆ ಎಂದುಕೊಳ್ಳಬೇಡಿ,
ಸೋಲೆಯು ಹಾಡಿಗೂ ಜನ ಚಪ್ಪಾಳೆ ತಟ್ಟುತ್ತಾರೆ!'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಜ್ಜಿ ಹೋದರೂ ಕಡಿತ ಹೋಗಲಿಲ್ಲ

ನಿಮ್ಮ ಪತ್ರಗಳು

ಎಲ್ಲರಿಗೂ ಮಾದರಿ ಈ ಪರಿಸರ ಪ್ರೇಮಿ

ಮಾನ್ಯರೆ,

ಮೈಸೂರಿನ ರಘುಲಾಲ್ ಕಂಪನಿ ಮಾಲೀಕರಾದ ರಾಘವನ್ ಅವರು ಬಿಸಿಲಿನ ಬೇಗೆಯಿಂದ ನರಳುತ್ತಿರುವ ಸಸ್ಯಗಳ ಸಂರಕ್ಷಣೆ ಮಾಡುತ್ತಿರುವ ವಿವರವಾದ ವರದಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ರಾಘವನ್ ಅವರಿಂದ ನಾನೂ ಉಪಕೃತನೇ. ಜೆ.ಪಿ.ನಗರ ಲಯನ್ಸ್ ಕ್ಲಬ್‌ನ ವತಿಯಿಂದ ರಸ್ತೆ ಬದಿ ನೆಟ್ಟ ಗಿಡಗಳಿಗೆ ರಕ್ಷಣೆ ಒದಗಿಸಲು ಈಗ್ಗೆ 4-5 ವರ್ಷಗಳ ಹಿಂದೆ ಟ್ರೀ ಗಾರ್ಡ್ ಅಗತ್ಯವಿತ್ತು. ಒಂದೆರಡಾದರೆ ಹೇಗೋ ಮಾಡಬಹುದಿತ್ತು. ಕ್ಲಬ್ಬಿನ ವತಿಯಿಂದ ಕೆಲವು ಬಡಾವಣೆಗಳಿಗೆ, ಜೆ.ಪಿ.ನಗರದ ವಿವಿಧ ರಸ್ತೆಗಳಿಗೆ ಟ್ರೀ ಗಾರ್ಡ್ ಸಿಗದಿದ್ದರೆ ನೆಟ್ಟ ಗಿಡ ಉಳಿಯುವುದಿಲ್ಲವೆಂಬ ಭೀತಿ ನಮಗೆ ಬಂದಿತ್ತು. ನನಗೆ ಸ್ನೇಹಿತರೊಬ್ಬರು ರಾಘವನ್ ಅವರನ್ನು ಸಂಪರ್ಕಿಸಲು ಅವರ ಫೋನ್ ನಂಬರ್ ಕೊಟ್ಟರು. ನನಗೆ ಅವರ ಪರಿಚಯವಿಲ್ಲ. ಧೈರ್ಯ ಮಾಡಿ ಅವರನ್ನು ಸಂಪರ್ಕಿಸಿದೆ. ನಾನು ಮಾಡಲಿರುವ ಕೆಲಸದ ಬಗೆಗೆ ನಂಬಿಕೆ ಬರುವಂತೆ ಮನವರಿಕೆ ಮಾಡಿ ಕೊಟ್ಟ ಮೇಲೆ ಅವರು ಮೊದಲು 600 ಬಿದಿರಿನ ಟ್ರೀಗಾರ್ಡ್‌ಗಳನ್ನು ಕಳುಹಿಸಿ ಕೊಟ್ಟರು. ಅವುಗಳನ್ನು ಬಳಸಿ ಅವರಿಗೆ ಫೋಟೋ ಸಮೇತ ವರದಿ ನೀಡಿದ ಮೇಲೆ ಕಬ್ಬಿಣದ ಮೆಶ್ ಇರುವ ಸುಮಾರು 1200ಕ್ಕೂ ಹೆಚ್ಚು ಟ್ರೀ ಗಾರ್ಡ್‌ಗಳನ್ನು ಅವರು ನನಗೆ ಕಳುಹಿಸಿಕೊಟ್ಟರು. ಇಂದು ಜೆ.ಪಿ.ನಗರದ ಪಾಳ್ಯ ವೃತ್ತದಿಂದ ಸಿಲ್ಕ್ ಫ್ಯಾಕ್ಟರಿಯವರೆಗೆ ಮತ್ತು ಹೆಚ್.ಡಿ.ಕೋಟೆ ರಸ್ತೆಯಿಂದ ಶನಿದೇವರ ರಸ್ತೆ, ನಂಜನಗೂಡು ರಸ್ತೆ ಸೇರುವವರೆಗೂ ಹಾಕಿರುವ ಅಷ್ಟೂ ಟ್ರೀ ಗಾರ್ಡ್‌ಗಳು ಶ್ರೀ ರಾಘವನ್‌ರವರ ಕೃಪೆ. ಅವರು ಖುದ್ದು ಬಂದು ಪರಿಶೀಲಿಸುವ ಗೊಡವೆಗೂ ಹೋಗದೆ ಅಗತ್ಯವಿದ್ದಾಗ ನನ್ನನ್ನು ಸಂಪರ್ಕಿಸಿ ಎಂದದ್ದು, ಅವರ ಪರಿಸರ ಪ್ರೇಮಕ್ಕೆ ಮತ್ತು ಹೃದಯ ವೈಶಾಲ್ಯಕ್ಕೆ ಸಾಕ್ಷಿ. ಹೆಚ್.ವಿ.ರಾಜೀವ್ ಸ್ನೇಹ ಬಳಗ ಮತ್ತು ಮಾಜಿ ಮೇಯರ್ ಭೈರಪ್ಪನವರು ನೆಡಿಸಿದ ಆ ಗಿಡಗಳ ರಕ್ಷಣೆಗೆ ನಿಂತವರು ಶ್ರೀ ರಾಘವನ್. ಮೈಸೂರಿನ ಪರಿಸರ ಜಾಗೃತಿಯ ಕುರಿತಂತೆ ಅವರ ಪರಿಶ್ರಮ ಅಗಾಧ. ಎಲೆಯ ಮರೆಯ ಕಾಯಿಯಂತೆ ಅವರು ಮೈಸೂರನ್ನು ಹಸಿರುಗೊಳಿಸುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಹೃದಯವಂತಿಕೆ, ಮಾನವೀಯ ಮೌಲ್ಯ ಪರಿಸರ ಕಾಳಜಿ ಎಲ್ಲರಿಗೂ ಆದರ್ಶಪ್ರಾಯ. ಅವರನ್ನು ಜೆ.ಪಿ.ನಗರ ಲಯನ್ಸ್ ಕ್ಲಬ್ಬಿನ ವತಿಯಿಂದ ಕರೆದು ನಮ್ಮ ಕೃತಜ್ಞತೆ ಸಲ್ಲಿಸಲು ಅವಕಾಶವಾದುದು ನಮಗೆ ಸಂದ ಸಾರ್ಥಕತೆ. ಶ್ರೀ ರಾಘವನ್‌ರವರು ಮೈಸೂರಿನ ಎಲ್ಲಾ ಕೈಗಾರಿಕೋದ್ಯಮಿಗಳಿಗೆ, ಪರಿಸರ ಪ್ರಜ್ಞೆಯುಳ್ಳ ನಾಗರಿಕರಿಗೆ, ಪರಿಸರಕ್ಕೆ ನಾವೇನಾದರೂ ಕೊಡಬೇಕೆಂಬ ಕಳಕಳಿಯುಳ್ಳವರಿಗೆ ಮಾದರಿ ಪುರುಷ.



-ದೊಡ್ಡಕಮರವಳ್ಳಿ ಸಿದ್ದಲಿಂಗಪ್ಪ, ಜೆ.ಪಿ.ನಗರ, ಮೈಸೂರು.

ಸೌಜನ್ಯಶೀಲ ಪ್ರಸಾದ್



ಮಾನ್ಯರೆ,

ನಾನು ಸಾಮಾನ್ಯವಾಗಿ ಯಾವ ರಾಜಕೀಯ ವ್ಯಕ್ತಿಗಳನ್ನೂ ನೋಡಲು ಹೋಗುವುದಿಲ್ಲ. ಆದರೆ ನಂಜನಗೂಡು ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದಾಗ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಪ್ರಯಾಣಿಕರಿಗೆ ತಡವಾಗಿ ಬರುತ್ತಿದ್ದ ರೈಲಿನಿಂದಾಗಿ ಕಚೇರಿಗೆ ಹೋಗಲು ತಡವಾಗುತ್ತಿತ್ತು. ಸಾಮಾನ್ಯವಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ನಾನು ಸಂಸದರಾಗಿದ್ದ ಪ್ರಸಾದರ ಮನೆಗೆ ಹೋಗಿ ಮನವಿಯೊಂದನ್ನು ಕೊಟ್ಟು ಸಕಾಲದಲ್ಲಿ ರೈಲುಗಳು ಓಡಾಡುವಂತೆ ರೈಲ್ವೆ ಅಧಿಕಾರಿಗಳಿಗೆ ತಾಕೀತು ಮಾಡುವಂತೆ ಮನವಿ ಮಾಡಿಕೊಂಡೆ. ಆ ಸಮಯದಲ್ಲೇ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ನನ್ನ ಪತ್ರಗಳನ್ನು ಗಮನಿಸಿದ್ದ ಪ್ರಸಾದರು ನನ್ನ ಪತ್ರಗಳ ಬಗ್ಗೆ ಮುಕ್ತಕಂಠದಿಂದ ಪ್ರಶಂಸೆ ಮಾಡಿದ್ದೂ ಅಲ್ಲದೇ 'ನಮ್ಮನ್ನೂ ಬಿಡುವುದಿಲ್ಲ, ಕುಟುಕುತ್ತೀರಿ ನೀವು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಯಾರು ಏನೇ ಹೇಳುತ್ತಿದ್ದರೂ ಸಮಾಧಾನವಾಗಿ ಕೇಳುವ ಗುಣ ಪ್ರಸಾದರಲ್ಲಿತ್ತು. ಅಪರೂಪದ ರಾಜಕಾರಣಿ ಪ್ರಸಾದ್. **-ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಮೈಸೂರು.**

ಹದಗೆಟ್ಟ ರಸ್ತೆ ಗುಂಡಿ ಸರಿಪಡಿಸಿ



ಮಾನ್ಯರೆ,

ಮೈಸೂರಿನ (ವಾರ್ಡ್ ನಂಬರ್ 15) ರಾಜೇಂದ್ರನಗರದ ಬಸವೇಶ್ವರ ರಸ್ತೆಯು ಗುಂಡಿ ಬಿದ್ದು, ತೀರಾ ಹದಗೆಟ್ಟಿದೆ. ವಾಹನಗಳು, ಸಾರ್ವಜನಿಕರ ಸಂಚಾರಕ್ಕೆ ತೀವ್ರ ಅಡಚಣೆಯಾಗುತ್ತಿದೆ ಹಾಗೂ ರಾತ್ರಿ ಹೊತ್ತಿನಲ್ಲಿ ಕೆಲವೊಮ್ಮೆ ಕರೆಂಟ್ ಇಲ್ಲದ ಸಮಯದಲ್ಲಿ ಈ ಗುಂಡಿಗೆ ವಾಹನ ಸವಾರರು ಬಿದ್ದು ಸಣ್ಣಪುಟ್ಟ ಗಾಯಗಳಾಗಿವೆ. ಆದ್ದರಿಂದ ಆದಷ್ಟು ಬೇಗ ಸಂಬಂಧಪಟ್ಟ ಅಧಿಕಾರಿಗಳು ಈ ಅವ್ಯವಸ್ಥೆಯನ್ನು ಸರಿಪಡಿಸಿ, ಗುಂಡಿ ಮುಚ್ಚಿ ಡಾಂಬರೀಕರಣ ಮಾಡಬೇಕೆಂದು ಮನವಿ.

-ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು


ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತ ನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.



18) ವೈದ್ಯರತ್ನ ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯ





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮೂರು ತಲೆಮಾರುಗಳಿಂದ ಮೈಸೂರು ಆಸ್ಥಾನದ ರಾಜವೈದ್ಯರಾಗಿದ್ದ ಮನೆತನದಲ್ಲಿ ಜನಿಸಿ, ತಾವೂ ಮೈಸೂರು ದರ್ಬಾರಿನ ವೈದ್ಯರತ್ನರಾಗಿ ರಾಜ್ಯದ ಆಯುರ್ವೇದ ವೈದ್ಯಕ್ಷೇತ್ರದಲ್ಲಿ ರತ್ನಪ್ರಾಯರಾಗಿದ್ದುದರ ಜೊತೆಗೆ, ರತ್ನ ವೈಢೂರ್ಯಗಳ ಪರೀಕ್ಷೆಯಲ್ಲಿ ನಿಷ್ಣಾತರಾಗಿ, ಆಯುರ್ವೇದ ಚಿಕಿತ್ಸೆಯಲ್ಲಿ ಮನೆಮಾತಾಗಿ ಜನಾನುರಾಗಿಗಳಾಗಿದ್ದ ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರನ್ನು ಆಯುರ್ವೇದ ಕ್ಷೇತ್ರ ಮರೆಯುವಂತಿಲ್ಲ.

ಚಾಮರಾಜ ಒಡೆಯರ ಆಸ್ಥಾನದಲ್ಲಿ ಆಯುರ್ವೇದ ವೈದ್ಯರಾಗಿದ್ದ ಪಂಡಿತ ಲಕ್ಷ್ಮಣಾಚಾರ್ಯರು (1854-1930) ಗುಂಡ್ಲು ಪಂಡಿತರ ಮನೆತನಕ್ಕೆ ಸೇರಿದ ವೇದಾಂತಾಚಾರ್ಯರ ಪುತ್ರರು. ಈ ಮನೆತನದವರು ಮೂರು ತಲೆಮಾರುಗಳಿಂದ ಮೈಸೂರಿನ ರಾಜವೈದ್ಯರಾಗಿ ಹೆಸರು ಮಾಡಿದ್ದರು. ಬಾಲ್ಯದಲ್ಲಿಯೇ ಜ್ಞಾನಾರ್ಜನೆಯಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿದ್ದ ಲಕ್ಷ್ಮಣಾಚಾರ್ಯರಿಗೆ ತಂದೆಯವರಿಂದಲೇ ಮಾರ್ಗದರ್ಶನ ದೊರೆಯಿತು. ಅವರಿಂದಲೇ ಸಂಸ್ಕೃತ ಸಾಹಿತ್ಯ, ಜ್ಯೋತಿಷ್ಯ, ವೈದ್ಯಶಾಸ್ತ್ರಗಳಲ್ಲಿ ಜ್ಞಾನಾರ್ಜನೆ ಮಾಡಿದರು. ಜೊತೆಗೆ ರತ್ನಶಾಸ್ತ್ರ, ವೇದ ವೇದಾಂಗ ಮತ್ತು ಕಲೆಗಳಲ್ಲಿ ಸಾಧನೆ ಮಾಡಿ ಪಾಂಡಿತ್ಯವನ್ನೂ ಸಂಪಾದಿಸಿದರು.

ಆಯುರ್ವೇದ ಕ್ಷೇತ್ರಕ್ಕೆ ಆಚಾರ್ಯರ ಕೊಡುಗೆ ಅತ್ಯಮೂಲ್ಯ. ಕೆಲವೇ ವರ್ಷಗಳಲ್ಲಿ ಉತ್ತಮ ಚಿಕಿತ್ಸಕರೆಂದು ಖ್ಯಾತಿ ಪಡೆದರು. ಸ್ತ್ರೀರೋಗಗಳು ಮತ್ತು ಬಾಲರೋಗಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿದ್ದು ವಾಸಿ ಮಾಡುತ್ತಿದ್ದರು. ಮಕ್ಕಳಿಲ್ಲದ ದಂಪತಿಗಳು, ಗರ್ಭಸ್ರಾವದಿಂದ ನರಳುತ್ತಿದ್ದ ಸ್ತ್ರೀಯರು, ಅತಿಸಾರ, ರಾಜಯಕ್ಷ್ಮ, ಘಕ್ಕರೋಗ, ನಾಯಿಕೆಮ್ಮು ಮುಂತಾದ ಖಾಯಿಲೆಗಳಿಂದ ಪೀಡಿತರಾಗಿದ್ದ ಮಕ್ಕಳಿಗೆ ಅವರು ಏಕಮೂಲಿಕಾ ಪ್ರಯೋಗ ಮಾಡಿ ಪರಿಣಾಮಕಾರಿ ಚಿಕಿತ್ಸೆ ಕೊಡುತ್ತಿದ್ದರು. ಇದು ಅವರ ಚಿಕಿತ್ಸೆಯ ವೈಶಿಷ್ಟ್ಯವಾಗಿತ್ತು. ತಮ್ಮ ಯಶಸ್ವೀ ಚಿಕಿತ್ಸೆಯಿಂದಾಗಿ ಖ್ಯಾತಿ ಗಳಿಸಿದ ಇವರ ಹೆಸರನ್ನು ಕೇಳದವರಿರಲಿಲ್ಲ.

ವಿರಾಮ ಕಾಲವನ್ನು ಅವರು ಯಾವುದೇ ಕಾರಣಕ್ಕೆ ವ್ಯರ್ಥ ಮಾಡುತ್ತಿರಲಿಲ್ಲ. ಬದಲಿಗೆ ಸಂಸ್ಕೃತ ಪುರಾಣ ಗ್ರಂಥಗಳನ್ನು ಕನ್ನಡ ಭಾಷೆಗೆ ಪರಿವರ್ತಿಸುವುದು, ಪ್ರಾಚೀನ ಶಾಸ್ತ್ರ ಪದ್ಧತಿಯ ಆಧಾರದ ಮೇಲೆ ದೇವತಾ ಚಿತ್ರಗಳನ್ನು ಬರೆಯುವುದು, ವಜ್ರ-ವೈಢೂರ್ಯಗಳನ್ನು ಪರೀಕ್ಷಿಸಿ ಅವುಗಳ ಉತ್ಕೃಷ್ಟತೆ ಮತ್ತು ಮೌಲ್ಯಗಳನ್ನು ನಿರ್ಧರಿಸುವುದು ಮುಂತಾದ ಕಾರ್ಯಗಳಲ್ಲಿ ನಿರತರಾಗುತ್ತಿದ್ದರು. ಈ ಕ್ಷೇತ್ರದಲ್ಲಿಯೂ ಪರಿಣತಿಯನ್ನೂ ಗಳಿಸಿದರು. ಮೈಸೂರಿನಲ್ಲಿನ ರತ್ನಪಡಿ ವ್ಯಾಪಾರಿಗಳು, ಚಿತ್ರಕಾರರು, ಕಲೋಪಾಸಕರು, ಮುಂತಾದವರೆಲ್ಲ ಆಚಾರ್ಯರ ಅಭಿಪ್ರಾಯ-ಸಲಹೆಗಳನ್ನು ಪಡೆಯಲಾರಂಭಿಸಿದರು. ಆಚಾರ್ಯರು ದಾನ ಶೀಲತೆ, ಸೌಜನ್ಯ, ವಿದ್ಯಾಭಿಮಾನ ಮುಂತಾದ ಆದರ್ಶ ಗುಣಗಳನ್ನು ಹೊಂದಿದ್ದು ಜನರ ಮೆಚ್ಚುಗೆಯನ್ನೂ, ಗೌರವವನ್ನೂ ಸಂಪಾದಿಸಿದ್ದರು.

ಜೊತೆಗೆ ಆಚಾರ್ಯರು ವೈದ್ಯ ಗ್ರಂಥಗಳ ರಚನೆ ಮಾಡುವ ಪ್ರಯತ್ನವನ್ನೂ ಪ್ರಾರಂಭಿಸಿದ್ದರು. ತ್ರುಟಿತವಾಗಿದ್ದ ಕಾಶ್ಯಪ ಸಂಹಿತೆಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಅದರ ಪ್ರಾರಂಭದ ಸ್ಥಾನಗಳನ್ನು ಪರಿಷ್ಕರಿಸಿ ಅದನ್ನು ಮುದ್ರಣ ಮಾಡಲು ಸರ್ಕಾರಕ್ಕೆ ಕೊಟ್ಟಿದ್ದರು. ವನೌಷಧಿಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಅನುಕೂಲವಾಗುವಂತೆ ಅವರು ದೇಶದ ವಿವಿಧ ಭಾಗಗಳಲ್ಲಿನ ಅವುಗಳ ಹೆಸರುಗಳನ್ನು ಸಂಗ್ರಹಿಸಿ ಒಂದು ಸರ್ವಭಾಷಾ ನಿಘಂಟನ್ನು ಸಿದ್ಧಪಡಿಸುವ ಕಾರ್ಯವನ್ನು ಪ್ರಾರಂಭಿಸಿದ್ದರು. ಈ ಕಾರ್ಯ ಅರ್ಧದಷ್ಟು ಪೂರೈಸಿತ್ತು. ಅಲ್ಲದೆ, ಆಯುರ್ವೇದ ಕುರಿತಂತೆ ವೈದ್ಯ ಸಮ್ಮೇಳನಗಳಲ್ಲಿ ಓದಲು ಹಸ್ತಪ್ರತಿಗಳನ್ನೂ ಅವರು ಸಿದ್ಧಗೊಳಿಸಿದ್ದರು.

ಆಯುರ್ವೇದ ಕಾಲೇಜು ಮೊದಲಿಗೆ ಮಹಾರಾಜ ಸಂಸ್ಕೃತ ಪಾಠಶಾಲೆಯ ಒಂದು ಭಾಗವಾಗಿತ್ತು. ಆಯುರ್ವೇದ ವೇದದ ಒಂದು ಭಾಗವೆಂದು ಪರಿಗಣಿಸಲ್ಪಟ್ಟು ಅದನ್ನು ಅಲ್ಲಿ ಬೋಧಿಸಲಾಗುತ್ತಿತ್ತು. ಮಹಾರಾಜ ಚಾಮರಾಜ ಒಡೆಯರ ಕಾಲದಲ್ಲಿ ದಿವಾನ್ ರಂಗಾಚಾರ್ಲು ಅವರು ಮಹಾರಾಜರವರ ಹೆಸರಿನಲ್ಲಿ ನಡೆಯುತ್ತಿದ್ದ ಅನ್ನಛತ್ರದಲ್ಲಿ 'ಸರಸ್ವತೀ ಪ್ರಸಾದ' ಎಂಬ ಈ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದ್ದರು. ಮೊದಲಿಗೆ ತರ್ಕ ಮತ್ತು ವ್ಯಾಕರಣ ಶಾಸ್ತ್ರಗಳ ಬೋಧನೆಯಿಂದ ಪ್ರಾರಂಭವಾದ ಈ ಶಾಲೆಯಲ್ಲಿ ಆಯುರ್ವೇದದ ಭವ್ಯ ಪರಂಪರೆಯನ್ನು ಉಳಿಸಿಕೊಳ್ಳಲು ಆಯುರ್ವೇದ ವಿಭಾಗವನ್ನೂ ನಂತರ ಪ್ರಾರಂಭಿಸಲಾಯಿತು. ರಾಜಾಶ್ರಯದಲ್ಲಿ ಸ್ಥಾಪಿಸಲ್ಪಟ್ಟ ಮೊದಲ ಆಯುರ್ವೇದ ಅಧ್ಯಯನ ಸಂಸ್ಥೆ ಇದಾಗಿತ್ತು.

ಆಯುರ್ವೇದ ಶಾಲೆಯನ್ನು 1907ರಲ್ಲಿ ಅಲ್ಲಿಂದ ಬೇರ್ಪಡಿಸಿ ದೇವರಾಜ ಮಾರುಕಟ್ಟೆಯ ಉತ್ತರ ಭಾಗದ ಒಂದು ಸಣ್ಣ ಜಾಗಕ್ಕೆ ವರ್ಗಾಯಿಸಲಾಯಿತು. ಆದರೆ ಅಲ್ಲಿ ಜಾಗದ ಸೌಕರ್ಯ ಅಗತ್ಯ ಮಟ್ಟದಲ್ಲಿರಲಿಲ್ಲ. ಸೌಕರ್ಯಗಳೂ ಕಡಿಮೆ. ಶಾಲೆಗೆ ಬೇಕಾದ ಸ್ಥಳಾವಕಾಶ ಮಾರುಕಟ್ಟೆ ಕಟ್ಟಡದಲ್ಲಿ ದೊರೆಯದೇ ಹೋದ ಕಾರಣ 1915ರಲ್ಲಿ ಸರ್ಕಾರ ಶಾಲೆಯನ್ನು ಚಾಮರಾಜೇಂದ್ರ ಕಲಾ ಶಿಕ್ಷಣ ಶಾಲೆಯ ಉತ್ತರ ಭಾಗದ ಮಹಡಿಗೆ ವರ್ಗಾಯಿಸಿತು. ಶಾಲೆಯ ಪರಿಸ್ಥಿತಿಯನ್ನು ಮನಗಂಡ ಅಂದಿನ ಕೆಲ ಹಿರಿಯ ಮತ್ತು ಪ್ರಸಿದ್ಧ ಆಯುರ್ವೇದ ಪಂಡಿತರು ಅದಕ್ಕೊಂದು ಪ್ರತ್ಯೇಕ ಕಟ್ಟಡದ ಅವಶ್ಯಕತೆಯನ್ನು ಮನಗಂಡರು. ಅವರಲ್ಲಿ ಅಂಬಳೆ ಅಣ್ಣಯ್ಯ ಪಂಡಿತರು, ಶಾಲೆಯ ಪ್ರಿನ್ಸಿಪಾಲರಾದ ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು ಸೇರಿದ್ದರು. ಅವರಿಂದ ಶಾಲೆಗೆ ಪ್ರತ್ಯೇಕ ಕಟ್ಟಡದ ಅವಶ್ಯಕತೆ ಯನ್ನು ತಿಳಿದ ಪಂಡಿತ ಲಕ್ಷ್ಮಣಾಚಾರ್ಯರು ಶಾಶ್ವತವಾದ ಕಟ್ಟಡವೊಂದನ್ನು ಕಟ್ಟಲು 15,000 ರೂ.ಗಳನ್ನು ದಾನ ಮಾಡಿದರು. ಸರ್ಕಾರ 1928ನೇ ಇಸವಿಯಲ್ಲಿ ಕಟ್ಟಡದ ಕೆಲಸವನ್ನು ಪ್ರಾರಂಭಿಸಿ ಕೇವಲ ಎರಡು ವರ್ಷಗಳಲ್ಲಿ ಪೂರೈಸಿತು.

ಪಾಠಶಾಲೆಯ ಆಡಳಿತವನ್ನು ನಡೆಸುವ ಸಲುವಾಗಿ ಒಂದು ಆಡಳಿತ ಸಮಿತಿಯನ್ನು ನೇಮಿಸಲಾಯಿತು. ಶಾಲೆಯ ಭವಿಷ್ಯದ ಬಗ್ಗೆ ಆಸಕ್ತಿ ಹೊಂದಿದ್ದ ಆಚಾರ್ಯರು ಕೆಲವು ವರ್ಷಗಳು ಈ ಆಡಳಿತ ಸಮಿತಿಯ ಸದಸ್ಯರಾಗಿದ್ದರು. ಶಾಲೆಯ ಪರೀಕ್ಷಕರಾಗಿಯೂ ಸೇವೆ ಸಲ್ಲಿಸಿದರು. ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಹೊರ ರೋಗಿಗಳ ವಿಭಾಗ ಮತ್ತು ಔಷಧಾಲಯವನ್ನು ಪ್ರಾರಂಭಿಸಲಾಯಿತು. ಶಾಲೆ ಮತ್ತು ಔಷಧಾಲಯಗಳೆರಡೂ ಪ್ರಗತಿ ಸಾಧಿಸುತ್ತಾ ಬಂದವು. ಆಸ್ಪತ್ರೆಯೂ ಪ್ರಾರಂಭವಾಗಿ ರೋಗಿಗಳ ಶುಶ್ರೂಷೆಯನ್ನು ಪ್ರಾರಂಭಿಸಲಾಯಿತು.

ಆಯುರ್ವೇದ ಶಾಸ್ತ್ರಕ್ಕೆ ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರ ಸೇವೆಯನ್ನು ಗುರುತಿಸಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಅವರಿಗೆ 1928ರ ದಸರಾ ಮಹೋತ್ಸವದಲ್ಲಿ "ವೈದ್ಯರತ್ನ" ಎಂಬ ಬಿರುದನ್ನೂ, ಅಮೂಲ್ಯವಾದ ಕಂಠಾಭರಣವನ್ನೂ ಕೊಟ್ಟು ಸನ್ಮಾನ ಮಾಡಿದರು. 1930ರಲ್ಲಿ ಆಚಾರ್ಯರು ತಮ್ಮ 76ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು.

ಸ್ವಂತ ಕಟ್ಟಡವನ್ನು ಹೊಂದಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಇಂದು ಮೈಸೂರಿನ ಪ್ರತಿಷ್ಠಿತ ಸಂಸ್ಥೆಯಾಗಿದೆ. ದೇಶದ ಅತ್ಯಂತ ಹಳೆಯ ಆಯುರ್ವೇದ ಶೈಕ್ಷಣಿಕ ಸಂಸ್ಥೆಯೆಂದು ಅದನ್ನು ಪರಿಗಣಿಸಲಾಗಿದೆ.

ನಗರದ ಮಧ್ಯಭಾಗದಲ್ಲಿರುವ ಇದರ ಸುಂದರ ಕಟ್ಟಡ ಒಂದು ಪ್ರಮುಖ ಸಾಂಪ್ರದಾಯಿಕ ಕಟ್ಟಡವನ್ನಾಗಿ ಗುರುತಿಸಲಾಗಿದೆ. 1930ರಲ್ಲಿ ನಿಧನರಾದ ಆಚಾರ್ಯರ ಪ್ರತಿಮೆಯನ್ನು ಪ್ರವೇಶ ದ್ವಾರದ ಬಳಿ ಸ್ಥಾಪಿಸಲಾಗಿದ್ದು ಅದು ಅವರ ಸೇವೆಯನ್ನು ನೆನಪಿಗೆ ತರುತ್ತದೆ.

ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ನಟಿ ಹರ್ಷಿಕಾ ಪೂಣಚ್ಚ ಆಕ್ರೋಶ

ವೀಡಿಯೋ ಮಾಡಿದವರು, ಅದನ್ನು ಹರಡಿದವರಿಗೂ ಸಮಾನ ಶಿಕ್ಷೆಯಾಗಲಿ

ಬೆಂಗಳೂರು,ಮೇ 5- ನಟಿ ಹರ್ಷಿಕಾ ಪೂಣಚ್ಚ, ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾಗಿರುವ ಸೆಕ್ಸ್ ಸ್ಕ್ಯಾಂಡಲ್ ಬಗ್ಗೆ ಮಾತನಾಡಿದ್ದಾರೆ. ಹಾಸನ ಸಂಸದರ 2976 ವಿಡಿಯೋಗಳ ಪೈಕಿ ದುರದೃಷ್ಟವಶಾತ್ ಒಂದು ವಿಡಿಯೋ ವನ್ನು ನೋಡಿದೆ ಎಂದು ಹರ್ಷಿಕಾ ಪೂಣಚ್ಚ ಬರೆದುಕೊಂಡಿದ್ದಾರೆ. ಅದರೊಂದಿಗೆ ಇಂಥ ಕೆಟ್ಟ ಕೃತ್ಯಗಳನ್ನು ಮಾಡುವ ವ್ಯಕ್ತಿಗಳ ವಿರುದ್ಧ ಕಾನೂನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹರ್ಷಿಕಾ ಪೂಣಚ್ಚ ಆಗ್ರಹಿಸಿದ್ದಾರೆ.



ಈ ಕುರಿತಾಗಿ ಸರಣಿ ಟ್ವೀಟ್ ಮಾಡಿರುವ ಅವರು, ಈ ವಿಡಿಯೋಗಳನ್ನು ಇಟ್ಟುಕೊಂಡು ರಾಜಕಾರಣ ಮಾಡುತ್ತಿರುವ ವ್ಯಕ್ತಿಗಳ ವಿರುದ್ಧವೂ ಹರಿಹಾಯ್ದಿದ್ದಾರೆ. ಕನಿಷ್ಠ ಪಕ್ಷ ಅಲ್ಲಿರುವ ಮಹಿಳೆಯರ ಮುಖವನ್ನಾದರೂ ಬ್ಲರ್ ಮಾಡಬೇಕಿತ್ತು. ಈ ಮಹಿಳೆಯರು ಮುಂದೆ ಸಮಾಜದಲ್ಲಿ ತಮ್ಮ ಮುಖವನ್ನು ಹೇಗೆ ತೋರಿಸುತ್ತಾರೆ? ಎಂದು ಪ್ರಶ್ನೆ ಮಾಡಿದ್ದಾರೆ.

ಹರ್ಷಿಕಾ ಪೂಣಚ್ಚ ಟ್ವೀಟ್ ವಿವರ: ದುರದೃಷ್ಟವಶಾತ್ ಇಂದು ಪ್ರಸ್ತುತ ವೈರಲ್ ಆಗಿರುವ 2976 ವೀಡಿಯೊಗಳಲ್ಲಿ ಒಂದನ್ನು ನಾನು ನೋಡಿದೆ. ಅದನ್ನು ನೋಡುವುದು ನಿಜಕ್ಕೂ ನೋವಿನ ಸಂಗತಿ. ವೀಡಿಯೋಗಳು ನೈಜವಾಗಿದ್ದರೆ ಅಂತಹ ಕೊಳಕು ಕೃತ್ಯಗಳನ್ನು ಸೃಷ್ಟಿಸಿದವರು ಖಂಡಿತವಾಗಿಯೂ ದೇಶದ ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗಬೇಕು ಎಂದು ಅವರು ತಮ್ಮ ಮೊದಲ ಟ್ವೀಟ್‌ನಲ್ಲಿ ಬರೆದಿದ್ದಾರೆ.

ಈ ವೀಡಿಯೊಗಳಲ್ಲಿ ಕಾಣಿಸಿಕೊಂಡಿರುವ ಅಸಂಖ್ಯಾತ ಮಹಿಳೆಯರ ಕುರಿತಾಗಿ ನನ್ನ ನೋವನ್ನು ವ್ಯಕ್ತಪಡಿಸುತ್ತಿದ್ದೇನೆ. ಅವರೆಲ್ಲರೂ ಸಭ್ಯ ಮತ್ತು ಸರಳ ಕುಟುಂಬದ ಸಾಮಾನ್ಯ ಮಹಿಳೆಯರಂತೆ ಕಾಣುತ್ತಾರೆ. ಈ ಸಂತ್ರಸ್ತರ ಮುಖಗಳನ್ನು ವಿವಿಧ ಗುಂಪುಗಳು ರಾಜಕೀಯ ಚರ್ಚೆಗೆ ಬಳಸಿಕೊಳ್ಳುತ್ತಿರುವುದು ಅತ್ಯಂತ ದುರದೃಷ್ಟಕರ ಎಂದು ಅವರು ರಾಜಕಾರಣಿಗಳ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕನಿಷ್ಠ ಪಕ್ಷ ಈ ಜನರು ಅಲ್ಲಿರುವ ಮಹಿಳೆಯರ ಮುಖವನ್ನಾದರೂ ಬ್ಲರ್ ಮಾಡಬಹುದಿತ್ತು. ಭವಿಷ್ಯದಲ್ಲಿ ಅವರು ಸಮಾಜವನ್ನು ಹೇಗೆ ಎದುರಿಸ್ತಾರೆ. ಇನ್ನು ಮುಂದೆ ನಮ್ಮ ಜನ ಅವರನ್ನು ಯಾವ ದೃಷ್ಟಿಕೋನದಲ್ಲಿ ನೋಡಬಹುದು ಎಂದು ವಿವರಿಸಿ ಹೇಳಬೇಕಾಗಿಲ್ಲ. ಅವರ ಕುಟುಂಬ ಮತ್ತು ಮಕ್ಕಳ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ಅವರು ಈಗ ಅನುಭವಿಸುತ್ತಿರುವ ಮಾನಸಿಕ ಆಘಾತವನ್ನೊಮ್ಮೆ ಊಹಿಸಿ ನೋಡಿ ಎಂದು ಅವರು ಬರೆದಿದ್ದಾರೆ.



ಇವುಗಳ ಬಗ್ಗೆ ನೀವು ಎಂದಾದರೂ ಯೋಚನೆ ಮಾಡಿದ್ದೀರಾ? ಈ ವೀಡಿಯೋಗಳನ್ನು ಸಾರ್ವಜನಿಕರಿಗೆ ಹರಡಲು ಕಾರಣರಾದ ವ್ಯಕ್ತಿಗಳಿಗೆ ಈ ಭಯಾನಕ ಕೃತ್ಯಗಳನ್ನು ಎಸಗಿದ ವ್ಯಕ್ತಿಗೆ ಸಮಾನವಾಗಿ ಶಿಕ್ಷೆಯಾಗಬೇಕು. ನಾನು ಯಾವಾಗಲೂ ಗೌರವ, ಸುರಕ್ಷತೆ ಮತ್ತು ಮಹಿಳೆಯರಿಗೆ ಸಮಾನತೆಗಾಗಿ ನಿಂತಿದ್ದೇನೆ ಮತ್ತು ನಾನು ಯಾವಾಗಲೂ ಇದನ್ನು ಮಾಡುತ್ತೇನೆ ಎಂದು ಹೇಳಿದ್ದಾರೆ. ಇಡೀ ಪ್ರಕರಣದಿಂದ ಸಮಸ್ಯೆಗೆ ಒಳಗಾದ ಎಲ್ಲಾ ಅಮಾಯಕ ಕುಟುಂಬಗಳಿಗೆ ಶಕ್ತಿ ಮತ್ತು ಧೈರ್ಯವನ್ನು ನೀಡಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಮೇ 8ರಿಂದ ರಾಜ್ಯದ ಕೆಲವೆಡೆ ಭಾರಿ ಮಳೆ

ಹವಾಮಾನ ಇಲಾಖೆ ಮುನ್ಸೂಚನೆ

ಬೆಂಗಳೂರು, ಮೇ 5-ಮೇ 8ರಿಂದ 2 ದಿನಗಳ ಕಾಲ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಭಾರಿ ಮಳೆ ಬೀಳುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರಲ್ಲಿ ಮೇ 8ರಿಂದ ಮೇ 10ರವರೆಗೆ ಬಿರುಸಾಗಿ ಮಳೆ ಬೀಳುವ ಸಾಧ್ಯತೆ ಇದೆ. ಇನ್ನು ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡದಲ್ಲಿ ಮೇ 9ರಿಂದ ಮುಂದಿನ 2 ದಿನ ಸಾಧಾರಣ ಪ್ರಮಾಣದಲ್ಲಿ ಮಳೆಯಾಗಲಿದೆ.

ವಾಡಿಕೆಗಿಂತ ಹೆಚ್ಚು ತಾಪಮಾನದಿಂದ ಕೆಂಡದಂತಾದ ಕೆಲ ಪ್ರದೇಶಗಳಲ್ಲಿ ಶುಕ್ರವಾರ ವರುಣ ತಂಪೆರೆದಿದ್ದರೂ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬಿಸಿಲಿನ ಝಳ ಮುಂದುವರಿದಿದೆ. ದಕ್ಷಿಣ ಒಳನಾಡಿನ ಕೆಲವೆಡೆ ಮಳೆ ಸುರಿದರೆ ಉತ್ತರ ಕರ್ನಾಟಕ ಭಾಗದ ಬಹುತೇಕ ಜಿಲ್ಲೆಗಳಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಿದ್ದು, ಒಣಹವೆ ಮುಂದುವರಿದಿದೆ. ಶುಕ್ರವಾರ ರಾಯಚೂರಲ್ಲಿ 46.4 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಕಲಬುರಗಿ 45.8, ಯಾದಗಿರಿ 44.9, ಬಳ್ಳಾರಿ 44.8, ವಿಜಯಪುರ 44.7, ಕೊಪ್ಪಳ 43.9, ಗದಗ 43.4, ಬಾಗಲಕೋಟೆ 43.5, ಬೆಳಗಾವಿ 43.1, ಬೀದರ್ 43, ಮಂಡ್ಯ 43, ರಾಮನಗರ 42.6, ಧಾರವಾಡ 42.2, ಚಿತ್ರದುರ್ಗ 42, ಕೋಲಾರ 42, ಹಾವೇರಿ 41.9, ತುಮಕೂರು 41.8, ದಾವಣಗೆರೆ 41.3, ಚಿಕ್ಕಬಳ್ಳಾಪುರ 41.9, ಬೆಂ.ಗ್ರಾಮಾಂತರ 41.3, ಶಿವಮೊಗ್ಗ 40.1, ಬೆಂಗಳೂರು 40.9 ಉಷ್ಣಾಂಶ ದಾಖಲಾಗಿದೆ. ಈ ಜಿಲ್ಲೆಗಳಲ್ಲಿ ಮುಂದಿನ 4 ದಿನ ಉಷ್ಣ ಅಲೆ ಇರಲಿದೆ. ಮಳೆ ಸುರಿದರೂ ಕೆಲ ಜಿಲ್ಲೆಗಳಲ್ಲಿ ತಾಪಮಾನ ಹೆಚ್ಚಳವಾಗಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

3ನೇ ದಿನವೂ 40ರ ಗಡಿ ದಾಟಿದ ಉಷ್ಣಾಂಶ: ಬೆಂಗಳೂರಿನಲ್ಲಿ ಸತತ 3ನೇ ದಿನವೂ ಉಷ್ಣಾಂಶ 40ರ ಗಡಿ ದಾಟಿದೆ. ಮೇ 1ರಂದು 41.3, ಮೇ 2ರಂದು 41.1, ಮೇ 3ರಂದು 40.9 ಉಷ್ಣಾಂಶ ದಾಖಲಾಗಿದೆ. ಸತತ ಎರಡು ದಿನ ನಗರದ ಕೆಲವೆಡೆ ಮಳೆ ಬಿದ್ದರೂ ಬಿಸಿಲಿನ ಪ್ರಖರತೆ ಹೆಚ್ಚಿದೆ. ವಾಡಿಕೆಯಂತೆ 34 ಡಿಗ್ರಿ ಉಷ್ಣಾಂಶ ದಾಖಲಾಗಬೇಕಿತ್ತು. ಆದರೆ, ವಾಡಿಕೆಗಿಂತ 6.6 ಡಿಗ್ರಿ ಹೆಚ್ಚು ತಾಪಮಾನ ದಾಖಲಾಗಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದಲಿತ ಸಮುದಾಯಕ್ಕೆ ಎದೆಗಾರಿಕೆವುಳ್ಳ ನಾಯಕ ಅನಿವಾರ್ಯ

ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ ಆರ್.ಮಹಾದೇವಪ್ಪ ಅಭಿಪ್ರಾಯ



ಮೈಸೂರಿನ ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧವಿಹಾರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ ಶನಿವಾರ ಸಂಜೆ ನಡೆದ ಸಂಸದರಾದ ವಿ.ಶ್ರೀನಿವಾಸಪ್ರಸಾದ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪ್ರಸಾದ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು.

ಮೈಸೂರು, ಮೇ 5– ಹಳ್ಳಿಗಾಡಿನಿಂದ ಬಂದಂತಹ ಅದೆಷ್ಟೋ ವಿದ್ಯಾರ್ಥಿಗಳಿಗೆ ಅಶೋಕಪುರಂ ಆಶ್ರಯ ತಾಣವಾಗಿತ್ತು. ಇದೊಂದು ಸಾಂಸ್ಕೃತಿಕ ಕೇಂದ್ರವೂ ಹೌದು. ಇಲ್ಲಿ ಹುಟ್ಟಿ ಬೆಳೆದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಗಟ್ಟಿಯಾದ ಧ್ವನಿಯನ್ನು ಬಿಟ್ಟು ಹೋಗಿದ್ದಾರೆ ಎಂದು ಕರ್ನಾಟಕ ಬುದ್ಧ ಧಮ್ಮ ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ ಹೇಳಿದರು.

ವಿಜಯನಗರ 1ನೇ ಹಂತದ ಡಿ. ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧವಿಹಾರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ ಶನಿವಾರ ಸಂಜೆ ನಡೆದ ಸಂಸದರಾದ ಶ್ರೀನಿವಾಸ ಪ್ರಸಾದ್‌ರವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಬದನವಾಳು ಗಲಾಟೆ ನಂತರ ದಲಿತರ ಮೇಲಿನ ದೌರ್ಜನ್ಯ ಒಂದಷ್ಟು ಕಡಿಮೆ ಯಾದವು. ಈ ಪ್ರಕರಣವು ವಿ. ಶ್ರೀನಿವಾಸ ಪ್ರಸಾದ್‌ರವರಿಗೆ ದೊಡ್ಡ ನಾಯಕತ್ವ ತಂದು ಕೊಟ್ಟಿತು. ಅಲ್ಲಿಂದ ದಲಿತ ಸಮುದಾಯಕ್ಕೆ ಗಟ್ಟಿಯಾದ ಧ್ವನಿಯಾಗಿದ್ದರು. ದಲಿತ ರಾಜಕಾರಣದಲ್ಲಿ ಪ್ರಸ್ತುತ ಇಂತಹ ಗಟ್ಟಿತನ, ಎದೆಗಾರಿಕೆಯುಳ್ಳ ಧ್ವನಿ ಇರುವ ನಾಯಕ ಅನಿವಾರ್ಯ ಎಂದರು.

ಸಮಿತಿಯ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ ಮಾತನಾಡಿ, ಸಂಸದ ಶ್ರೀನಿವಾಸಪ್ರಸಾದ್ ತಮ್ಮ ರಾಜಕೀಯ ಜೀವನವನ್ನು ಜನಸಂಘದಿಂದ ಪ್ರಾರಂಭಿಸಿ, ಜನ ಸಂಘದಿಂದಲೇ ಅವರು ರಾಜಕೀಯ ನಿವೃತ್ತಿಯನ್ನು ಘೋಷಿಸಿದರು. ಆದರೆ ಅವರ ರಾಜಕೀಯ ಜೀವನದಲ್ಲಿ ದಲಿತ ಸಮುದಾಯಕ್ಕೆ ಹಾಗೂ ಅವರ ಹೆಸರಿನಲ್ಲಿ ಶಾಲೆ–ಕಾಲೇಜು, ಆಸ್ಪತ್ರೆ ಹೀಗೆ ಗುರುತರವಾದಂತಹದನ್ನು ಬಿಟ್ಟು ಹೋಗದಿರುವುದು ನೋವಿನ ಸಂಗತಿ ಎಂದರು.

ಮುಖಂಡ ಬಿ.ಎಂ.ಲಿಂಗರಾಜ್ ಮಾತನಾಡಿ, ವಿ.ಶ್ರೀನಿವಾಸಪ್ರಸಾದ್‌ರವರು ಎದೆಗಾರಿಕೆ ಇದ್ದ ವ್ಯಕ್ತಿ. ಪ್ರಾಮಾಣಿಕವಾಗಿ ರಾಜಕಾರಣ ಮಾಡಿದರು. ಯಾವುದೇ ಭ್ರಷ್ಟಾಚಾರವಿಲ್ಲದೆ ರಾಜಕೀಯ ಜೀವನ ನಡೆಸಿದರು. ಆದರೆ ಅವರ ನಂತರದ ಪರ್ಯಾಯ ರಾಜಕಾರಣಿಯನ್ನು ಹುಟ್ಟು ಹಾಕದಿರುವುದು ಬೇಸರದ ಸಂಗತಿ ಎಂದರು. ಕಾರ್ಯಕ್ರಮಕ್ಕೂ ಮುನ್ನ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಎರಡು ನಿಮಿಷಗಳ ಕಾಲ ಮೌನಾಚರಣೆ ಸಲ್ಲಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದ ಸಮ್ಮುಖವನ್ನು ಬೌದ್ಧ ಬಿಕ್ಕು ಸೋದೆ ಭಂತೇಜಿ ವಹಿಸಿದ್ದರು. ಸಮಿತಿಯ ಸಹ ಕಾರ್ಯದರ್ಶಿ ಎಚ್.ಶಿವರಾಜ್, ಖಜಾಂಚಿ ಎಂ.ಸಾವಕಯ್ಯ, ನಿವೃತ್ತ ಇಂಜಿನಿಯರ್ ಆರ್.ನಟರಾಜು, ರಾಜು ಹಂಪಾಪುರ, ಪುಟ್ಟಸ್ವಾಮಿ, ನಿಸರ್ಗ ಸಿದ್ದರಾಜು, ಮಹದೇವಸ್ವಾಮಿ, ಪತ್ರಕರ್ತ ಕೆ. ದೀಪಕ್, ಮಲ್ಲಿಕಾರ್ಜುನಸ್ವಾಮಿ, ಅಹಿಂದ ಜವರಪ್ಪ, ಸಾಹಿತಿ ಕೃಷ್ಣಮೂರ್ತಿ ಚಮರಂ, ಮಲ್ಲುಂಡಿ ಮಹದೇವಸ್ವಾಮಿ, ಪಿ.ಸಂಬಯ್ಯ, ಹರಕುಮಾರ್, ಬಸವಣ್ಣ, ರಾಘವೇಂದ್ರ ಅಪುರಾ, ಕ್ರಾಂತಿರಾಜ್ ಒಡೆಯರ್, ವಿಜಯ ಕುಮಾರ್, ವಿಶಾಲ್, ವಿವಿಧ ದಲಿತಪರ ಸಂಘಟನೆಗಳ ಮುಖಂಡರು, ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಎಂ.ಮಾದಯ್ಯ ಇನ್ನಿಲ್ಲ




ಮೈಸೂರು, ಮೇ 5– ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎಂ.ಮಾದಯ್ಯ(88) ಅವರು ಅನಾರೋಗ್ಯದಿಂದ ಮೈಸೂರಿನಲ್ಲಿ ಭಾನುವಾರ ನಿಧನರಾದರು.

ಮೂಲತಃ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕು ದುಗ್ಗನ ಹಳ್ಳಿ ಗ್ರಾಮದವರಾದ ಇವರು ಮೈಸೂರಿನ ಸರಸ್ವತಿಪುರಂ 15ನೇ ಮುಖ್ಯರಸ್ತೆಯಲ್ಲಿ ನೆಲೆಸಿದ್ದರು. ಅನಾರೋಗ್ಯದ ಕಾರಣ ಅವರನ್ನು ಮೈಸೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮಾದಯ್ಯ ಅವರು ಪತ್ನಿ, ದಾವಣಗೆರೆ ವಿವಿ ವಿಶ್ರಾಂತ ಕುಲಪತಿ ಪ್ರೊ.ಇಂದುಮತಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ.

ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದ ಎಂ.ಮಾದಯ್ಯ ಅವರು 1991ರಿಂದ 1993 ಹಾಗೂ 1993ರಿಂದ ಮತ್ತು 1997ರವರೆಗೆ ಸತತ ಎರಡು ಬಾರಿ ಮೈಸೂರು ವಿವಿ ಕುಲಪತಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಇವರಿಗೆ ಪ್ರಸಿದ್ಧ ಅರ್ಥಶಾಸ್ತ್ರಜ್ಞರೂ ಆದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರೊಂದಿಗೆ ಉತ್ತಮ ಒಡನಾಟವಿತ್ತು. ಮಾದಯ್ಯ ಅವರ ಪುತ್ರಿ ಅಮೆರಿಕಾದಲ್ಲಿದ್ದು ಅವರು ಮೈಸೂರಿಗೆ ಆಗಮಿಸಿದ ಬಳಿಕ ಮೇ 8 ಬುಧವಾರ ಮೈಸೂರಿನಲ್ಲೇ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ಟಿ.ರವೀಂದ್ರನಾಥ್ ನಿಧನ



ಮೈಸೂರು: ಮೈಸೂರಿನ ವಿಶ್ವೇಶ್ವರನಗರದ ತಪೋವನ್ ಟೆರೇಸಸ್ ಅಪಾರ್ಟ್‌ಮೆಂಟ್ ನಿವಾಸಿ, ನಿವೃತ್ತ ಸಾರ್ಜೆಂಟ್ ಆರ್.ಟಿ. ರವೀಂದ್ರನಾಥ್(62) ಅವರು ಅಲ್ಪಕಾಲಿಕ ಅನಾರೋಗ್ಯದಿಂದ ಮೇ 2ರಂದು ನಿಧನರಾದರು.

ಇವರು ಪತ್ನಿ ಆರ್.ಎಸ್.ಶೋಭಾ, ಪುತ್ರಿ ರಶ್ಮಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೈಸೂರಿನ ಏರ್ ಫೋರ್ಸ್ ಸೆಲೆಕ್ಷನ್ ಬೋರ್ಡ್(AFSB-NO-2) ಅಧಿಕಾರಿಗಳು ಅಂತಿಮ ಗೌರವ ಸಲ್ಲಿಸಿದ ನಂತರ ಶನಿವಾರ ಲಲಿತಾದ್ರಿಪುರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಸೋಮವಾರ 6 ಮೇ 2024

ಕನ್ನಡ ಉಳಿವಿಗೆ ಶಾಲೆಗೊಂದು ಕಸಾಪ ಕಾರ್ಯಕ್ರಮ ನಡೆಯಲಿ

ಕಸಾಪ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾಜಿ ಅಧ್ಯಕ್ಷ ಪ್ರೊ.ಜಿ.ಟಿ.ವೀರಪ್ಪ ಸಲಹೆ

ಮಂಡ್ಯ,ಮೇ 5– ಕನ್ನಡ ಭಾಷೆಯನ್ನು ಉಳಿಸುವ ಹಲವಾರು ಕಾರ್ಯಕ್ರಮಗಳನ್ನು ಕನ್ನಡ ಸಾಹಿತ್ಯ ಪರಿಷತ್ ಮಾಡಿಕೊಂಡು ಬಂದಿದೆ. ಅಂತೆಯೇ ಕನ್ನಡ ಉಳಿದು ಬೆಳೆಯಬೇಕಾದರೆ ಪರಿಷತ್ ವತಿಯಿಂದ ಶಾಲೆಗೊಂದು ಕಾರ್ಯಕ್ರಮ ನಡೆಸಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಪ್ರೊ.ಜಿ.ಟಿ.ವೀರಪ್ಪ ಸಲಹೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ನಗರದ ಬಂದೀಗೌಡ ಬಡಾವಣೆಯಲ್ಲಿರುವ ಪರಿಷತ್ ಭವನದಲ್ಲಿ ಭಾನುವಾರ ಆಯೋಜಿಸಲಾಗಿದ್ದ 110ನೆಯ ಕಸಾಪ ಸಂಸ್ಥಾಪನಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಸಾಪ ಜಿಲ್ಲಾ ಘಟಕ ಮತ್ತು ತಾಲೂಕು ಘಟಕಗಳು ಪ್ರತಿ ಶಾಲೆಯಲ್ಲಿ ಕನ್ನಡ ಕಾರ್ಯಕ್ರಮ ನಡೆಸಿದರೆ ಮಕ್ಕಳಲ್ಲಿ ಭಾಷೆ, ಸಾಹಿತ್ಯದ ಅರಿವು ಮೂಡಿ ಪರಿಷತ್ ಉದ್ದೇಶ ಸಫಲವಾಗುತ್ತದೆ ಎಂದು ಮನವಿ ಮಾಡಿದರು.

ನುಡಿಯ ಸಂಸ್ಥೆಯಾಗಿ ಹುಟ್ಟಿಕೊಂಡ ಕಸಾಪ, ಇಂದು ನಾಡು–ನುಡಿಯ ಸಂಸ್ಥೆಯಾಗಿ ಬೆಳೆದಿದೆ. ಕಸಾಪ ಅಧ್ಯಕ್ಷರಾಗಿದ್ದ ಜಿ.ನಾರಾಯಣ ಅವರ ಕಾಲದಲ್ಲಿ ಪರಿಷತ್ ಬದಲಾವಣೆಗೆ ತೆರೆದುಕೊಂಡಿತು. ಕೇವಲ ಬೆಂಗಳೂರಿಗೆ ಸೀಮಿತವಾಗಿದ್ದ ಪರಿಷತ್ ನಗರ ಮತ್ತು ತಾಲೂಕುಗಳಿಗೆ ವಿಸ್ತರಿಸಿತು. ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ಆಡಳಿತದಲ್ಲಿ ಹಣಕಾಸು ಸಚಿವ ರಾಮಕೃಷ್ಣ ಹೆಗಡೆ, ಶಿಕ್ಷಣ ಸಚಿವ ಕೆ.ವಿ.ಶಂಕರಗೌಡರ ಮನವೊಲಿಸಿ ಅನುದಾನ ಪಡೆದು ಪರಿಷತ್ ಚಟುವಟಿಕೆಗಳನ್ನು ವಿಸ್ತರಿಸಿದರು ಎಂದು ಸ್ಮರಿಸಿಕೊಂಡರು.


ಕಸಾಪ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸುತ್ತಿರುವ ಡಾ.ಮೀರಾ ಶಿವಲಿಂಗಯ್ಯ

ಜನಸಾಮಾನ್ಯರತ್ತ ಕನ್ನಡ ಸಾಹಿತ್ಯ ಪರಿಷತ್ತು ವಿಷಯವಾಗಿ ವಿಶೇಷ ಉಪನ್ಯಾಸ ನೀಡಿದ ಸಾಹಿತಿ ಡಾ.ಶ್ರೀನಿವಾಸ ಶೆಟ್ಟಿ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಭಾರತರತ್ನ ಡಾ. ಸರ್ ಎಂ.ವಿಶ್ವೇಶ್ವರಯ್ಯ ಅವರ ದೂರದೃಷ್ಟಿ ಗುಣದಿಂದ ನಮ್ಮ ನಾಡು ಹಲವು ಆಯಾಮಗಳಲ್ಲಿ ಅಭಿವೃದ್ಧಿ ಕಂಡಿದೆ. ಕನ್ನಡಿಗರ ಏಳಿಗೆಗಾಗಿ ನಾಲ್ವಡಿಯವರು ರಚಿಸಿದ ವಿದ್ಯಾ ಸಮಿತಿಗೆ ಎಚ್.ವಿ.ನಂಜುಂಡಯ್ಯ ಅಧ್ಯಕ್ಷರಾದರು. ಅವರು ನೀಡಿದ ಕನ್ನಡ ಕಟ್ಟುವ 5 ಶಿಫಾರಸುಗಳನ್ನಾಧರಿಸಿ ಕಸಾಪ ರಚಿಸಲಾಯಿತು ಎಂದು ತಿಳಿಸಿದರು.

ಮಂಡ್ಯ ತಾಲೂಕು ಕಸಾಪ ಮಾಜಿ ಅಧ್ಯಕ್ಷ ಎಂ.ಆರ್.ಮಂಜು ಮುತ್ತೇಗೆರೆ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಅಸ್ಮಿತೆ. ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಕನ್ನಡದ ಪೋಷಣೆಯಾಗಬೇಕು. ಈ ನಿಟ್ಟಿನಲ್ಲಿ ಕಸಾಪ ವಿದ್ಯಾರ್ಥಿ ಘಟಕಗಳನ್ನು ಅಸ್ತಿತ್ವಕ್ಕೆ ತಂದು ಅದಕ್ಕೆ ವಿದ್ಯಾರ್ಥಿಗಳನ್ನೇ ಪದಾಧಿಕಾರಿಗಳನ್ನಾಗಿ ಮಾಡಿ ಕನ್ನಡದ ಚಟುವಟಿಕೆ ನಡೆಸಬೇಕು. ಮಂಡ್ಯದಲ್ಲಿ ನಡೆಯುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ನಮ್ಮೆಲ್ಲರ ಸಹಕಾರವಿದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ ಮಾತನಾಡಿ, 86 ಸಮ್ಮೇಳನಗಳಲ್ಲಿ ಕೇವಲ ನಾಲ್ವರು ಮಹಿಳೆಯರು ಮಾತ್ರ ಅಧ್ಯಕ್ಷರಾಗಿದ್ದಾರೆ. ಮಂಡ್ಯದಲ್ಲಿ ನಡೆಯುವ 87ನೇ ಸಮ್ಮೇಳನಕ್ಕೆ ಮಹಿಳೆಯನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು ಎಂದು ಆಶಿಸಿದರು.

ವೇದಿಕೆಯಲ್ಲಿ ಜಿಲ್ಲಾ ಕಸಾಪ ಕೋಶಾಧ್ಯಕ್ಷ ಬಿ.ಎಂ.ಅಪ್ಪಾಜಪ್ಪ, ಕಸಾಪ ನಗರ ಘಟಕ ಅಧ್ಯಕ್ಷೆ ಸುಜಾತ ಕೃಷ್ಣ, ಜಿಲ್ಲಾ ಕಸಾಪ ಪದಾಧಿಕಾರಿಗಳಾದ ಎಲ್.ಕೃಷ್ಣ, ಚಂದ್ರಲಿಂಗು, ಎ.ಸಿ.ಭಾಸ್ಕರ್, ಲೇಖಕಿ ಶುಭಶ್ರೀ ಪ್ರಸಾದ್, ಹಿರಿಯ ಪತ್ರಕರ್ತ ಚಂದ್ರಶೇಖರ ದ.ಕೋ.ಹಳ್ಳಿ, ಉಪನ್ಯಾಸಕ ಮಂಚಶೆಟ್ಟಿ, ಕವಿಗಳಾದ ಡಿ.ಕೆ. ರಾಮಯ್ಯ, ಲೋಕೇಶ್ ಕಲ್ಕುಣಿ, ರೋಷನ್ ಭೋಪ್ರಾ, ಗಾನಾ ಸುಮಾ ಮತ್ತಿತರರು ಹಾಜರಿದ್ದರು.

ಪ್ರಜ್ವಲ್ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ

ಮಂಡ್ಯ, ಮೇ 5– ಲೈಂಗಿಕ ದೌರ್ಜನ್ಯದ ಆರೋಪ ಎದುರಿಸುತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ನಗರದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಪದಾಧಿಕಾರಿಗಳು ಪ್ರತಿಭಟನಾ ಧರಣಿ ನಡೆಸಿ ಪ್ರಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಭಾನುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಉದ್ಯಾನವನದ ಮೈಸೂರು–ಬೆಂಗಳೂರು ಹೆದ್ದಾರಿಯಂಚಿನಲ್ಲಿ ಜಮಾವಣೆಗೊಂಡ ಜಿಲ್ಲಾ ಮಹಿಳಾ ಕಾಂಗ್ರೆಸ್ ಪದಾಧಿಕಾರಿಗಳು ಅಧ್ಯಕ್ಷೆ ಅಂಜನಾ ಶ್ರೀಕಾಂತ್ ನೇತೃತ್ವದಲ್ಲಿ ಧರಣಿ ನಡೆಸಿದರು.

ಬಳಿಕ ಮಾತನಾಡಿದ ಜಿಲ್ಲಾ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ರಾಜ್ಯಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಪ್ರಜ್ವಲ್ ರೇವಣ್ಣ ಅವರನ್ನು ಕೂಡಲೇ ಬಂಧಿಸಿ, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಪೂಜನೀಯ ಸ್ಥಾನವಿದೆ. ಅದರಲ್ಲೂ ಜೆಡಿಎಸ್‌ನಲ್ಲಿ ತೆನೆಹೊತ್ತ ಮಹಿಳೆಯ ಗುರುತಿಗೆ ವಿರುದ್ಧವಾಗಿ ಸಂಸದರು ಹಾಗೂ ಶಾಸಕರು ನಡೆದುಕೊಳ್ಳುತ್ತಿರುವುದು ನಾಚಿಕೇಡಿನ ಸಂಗತಿ ಎಂದು ಕಿಡಿಕಾರಿದರು.

ಜನಪ್ರತಿನಿಧಿಗಳಾದ ಅಪ್ಪ–ಮಗ ಇಬ್ಬರು ಮನೆಯ ಕೆಲಸದಾಕೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದನ್ನು ನೊಂದ ಮಹಿಳೆ ಪ್ರಕರಣ ದಾಖಲಿಸುವ ಮೂಲಕ ಸಾರ್ವಜನಿಕರೆದುರು ಪ್ರಜ್ವಲ್ ಹಾಗೂ ರೇವಣ್ಣ ಹೀನ ಕೃತ್ಯವನ್ನು ಬಹಿರಂಗಪಡಿಸಿದ್ದಾರೆ. ದಿನವೊಂದಕ್ಕೆ ಪ್ರಕರಣ ಗಂಭೀರವಾಗತೊಡಗಿದೆ. ಕೂಡಲೇ ಆತನನ್ನು ಬಂಧಿಸಬೇಕು. ಕಾಮದಾಸೆಗಾಗಿ ಮನೆಕೆಲಸದ ಕೂಲಿಕಾರ್ಮಿಕರು, ರಾಜಕೀಯ ಹಾಗೂ ಸರ್ಕಾರಿ ವೃತ್ತಿಯಲ್ಲಿ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಮಹಿಳೆಯರನ್ನು ಬಳಸಿಕೊಂಡಿರುವುದು ನಾಡಿನ ದೊಡ್ಡ ದುರಂತ. ಶೋಷಣೆಗೆ ಒಳಗಾಗಿರುವ ಮಹಿಳೆಯರನ್ನು ರಕ್ಷಿಸುವ ಸಲುವಾಗಿ ರಾಜ್ಯದ ಮಹಿಳೆಯರು ಒಗ್ಗಟ್ಟಾಗಿ ಕೈ ಜೋಡಿಸಿ ಕಾಮುಕರನ್ನು ಮಟ್ಟ ಹಾಕಲು ಪ್ರಕರಣ ದಾಖಲಿಸಬೇಕು. ನೊಂದ ಮಹಿಳೆಯರ ಪರ ನಮ್ಮ ಸರ್ಕಾರವಿದೆ. ಧೃತಿಗೆಡಬೇಡಿ ಎಂದರು.


ಮಂಡ್ಯದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು

ಜೆಡಿಎಸ್ ಪಕ್ಷದ ವರಿಷ್ಠರು ತೆನೆಹೊತ್ತ ಮಹಿಳೆಯ ಗುರುತನ್ನು ತೆಗೆದುಹಾಕಬೇಕು. ಇಂತಹ ಪ್ರಕರಣದಿಂದ ನಾಡಿನ ಆರೂವರೆ ಕೋಟಿ ಕನ್ನಡಿಗರು ಇಡೀ ದೇಶದ ಮುಂದೆ ತಲೆತಗ್ಗಿಸುವಂತಾಗಿದೆ. ಪ್ರಜ್ವಲ್ ಕುಟುಂಬದ ಸದಸ್ಯರು ನೈತಿಕ ಹೊಣೆ ಹೊತ್ತು ರಾಜಕೀಯ ನಿವೃತ್ತಿ ಘೋಷಿಸಿ ಮಹಿಳೆಯರಿಗೆ ಗೌರವ ಸೂಚಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳಾದ ಇಂದಿರಾ, ವೀಣಾ, ಶಕುಂತಲಾ, ಶಾಂಭವಿ, ನಗರಸಭಾ ಸದಸ್ಯರಾದ ಗೀತಾ, ಶ್ರೀಧರ್, ಮುಖಂಡರಾದ ಪ್ರಶಾಂತ್‌ಬಾಬು, ಸಿ.ಎಂ.ದ್ಯಾವಪ್ಪ, ವಿಜಯಕುಮಾರ್, ಕನ್ನಲಿ ಚನ್ನಪ್ಪ ಮತ್ತಿತರರಿದ್ದರು.

ನಾಳೆ ವಿಶ್ವ ಮಲೇರಿಯಾ ದಿನಾಚರಣೆ

ಮಂಡ್ಯ.ಮೇ 5– ವಿಶ್ವ ಮಲೇರಿಯಾ ದಿನಾಚರಣೆಯ ಅಂಗವಾಗಿ ಮೇ 7 ರಂದು ಬೆಳಿಗ್ಗೆ 10 ಗಂಟೆಗೆ ಮಂಡ್ಯ ಎಸ್.ಡಿ. ಜಯರಾಮ್ ಪ್ಯಾರಮೆಡಿಕಲ್ ವಿಜ್ಞಾನ ಸಂಸ್ಥೆ ವಿದ್ಯಾರ್ಥಿಗಳಿಂದ ನಗರದ ತಮಿಳು ಕಾಲೋನಿಯಿಂದ ಬೆಂಗಳೂರು ಮೈಸೂರು ಮುಖ್ಯ ರಸ್ತೆ ಮುಖಾಂತರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯವರಿಗೆ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಾಥಾವನ್ನು ಮಂಡ್ಯ ಜಿಲ್ಲಾಧಿಕಾರಿ ಅವರು ಉದ್ಘಾಟಿಸಲಿದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಮಂಡ್ಯ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಣಿಕನಹಳ್ಳಿಯಲ್ಲಿ ಶುದ್ಧ ನೀರಿನ ಘಟಕ ಉದ್ಘಾಟನೆ

ಕಿಕ್ಕೇರಿ: ರೋಗಗಳು ಸಾಮಾನ್ಯವಾಗಿ ನಾವು ಸೇವಿಸುವ ನೀರಿನಿಂದ ಬರುತ್ತವೆ ಎಂಬುದನ್ನು ಅರಿತು ಶುದ್ಧವಾದ ನೀರಿನ ಸೇವನೆಗೆ ಮುಂದಾಗಿ ಎಂದು ಕೋರಮಂಡಲ್ ಸಕ್ಕರೆ ಕಾರ್ಖಾನೆ ಹಿರಿಯ ಉಪಾಧ್ಯಕ್ಷ ವಿ.ಜೆ. ರವಿರೆಡ್ಡಿ ಹೇಳಿದರು.

ಹೋಬಳಿಯ ಮಾಣಿಕನಹಳ್ಳಿ ಗ್ರಾಮದಲ್ಲಿ ಕೋರಮಂಡಲ್ ಸಕ್ಕರೆ ಕಾರ್ಖಾನೆಯಿಂದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಮಾತನಾಡಿ, ಹೆಚ್ಚು ಕ್ಷಾರಯುಕ್ತವಾದ ನೀರು ಇರುವ ತಾಲೂಕಿನ ಸ್ಥಳದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಲು ಸಾಮಾಜಿಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಮುಂದಾಗಿದೆ. ಪ್ರಸ್ತುತವಾಗಿ ಕುಪ್ಪಳ್ಳಿ ಗ್ರಾಮ ಸೇರಿದಂತೆ ಒಟ್ಟು 10ಲಕ್ಷ ರೂ. ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಲಾಗಿದೆ ಎಂದರು.


ಹವಾಮಾನ ವೈಪರೀತ್ಯದಿಂದ ಮಳೆ ಇಲ್ಲದೆ ಅಂತರ್ಜಲ ಕುಸಿದಿದೆ. ನೀರಿಗಾಗಿ ತತ್ವಾರ ಉಂಟಾಗಿದೆ. ಅಂತರ್ಜಲ ವೃದ್ಧಿಸಲು ಇಂಗುಗುಂಡಿ, ಸಣ್ಣ ಹಳ್ಳಗಳಿಗೆ ಒಡ್ಡು ನಿರ್ಮಿಸುವ, ಮರಗಿಡಗಳನ್ನು ಬೆಳೆಸಲು ಮುಂದಾಗಿ. ಹಸಿರೀಕರಣದಿಂದ ಸಕಾಲಕ್ಕೆ ಮಳೆ ಬರಲಿದೆ ಎಂಬುದನ್ನು ರೈತಾಪಿ ಜನತೆ ತಿಳಿಯಬೇಕು ಎಂದು ಮನವಿ ಮಾಡಿದರು. ನೀರಿಗಾಗಿ ರಾಜ್ಯ ರಾಜ್ಯಗಳಲ್ಲಿ ಸಂಘರ್ಷ ಉಂಟಾಗಿದೆ. ಜಲಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸಿ. ನೀರಿನ ಮರುಬಳಕೆಗೆ ಕ್ರಮವಹಿಸಿ. ನೀರಿನ ಶುದ್ಧೀಕರಣಕ್ಕಾಗಿ ತಾಲೂಕು ಕೇಂದ್ರಕ್ಕೆ ಆಲಂ, ಕ್ಲೋರಿನ್‌ನಂತಹ ಉಪಯುಕ್ತ ವಸ್ತುಗಳನ್ನು ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.


ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡುತ್ತಿರುವುದು.

ಕಬ್ಬು ವಿಭಾಗ ಹಿರಿಯ ವ್ಯವಸ್ಥಾಪಕ ಕೆ. ಬಾಬುರಾಜ್, ಆರ್.ಇ. ಕುಮಾರ್, ಮೇಯನ್, ನವೀನ್, ಅಶೋಕ್‌ಕುಮಾರ್ ಗ್ರಾಮ ಮುಖಂಡರು ಉಪಸ್ಥಿತರಿದ್ದರು.

ಮದ್ದೂರು–ಮಳವಳ್ಳಿ ಮಾರ್ಗದ ರಸ್ತೆ ನಿರ್ವಹಣೆ ಸರಿಯಿಲ್ಲ

ಭಾರತೀನಗರ, ಮೇ 5– ಮದ್ದೂರು–ಮಳವಳ್ಳಿ, ಮದ್ದೂರು–ತುಮಕೂರು ಮಾರ್ಗದ ರಾಜ್ಯ ಹೆದ್ದಾರಿಯ ರಸ್ತೆಯನ್ನು ಮಧ್ಯೆ ಮಧ್ಯೆ ಬಿಟ್ಟು ಪ್ಯಾಚ್ ಕೆಲಸ ಮಾಡುತ್ತಿರುವುದು ಸರಿಯಲ್ಲ ಎಂದು ಮಾಜಿ ಸಚಿವ ಡಿ.ಸಿ. ತಮ್ಮಣ್ಣ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



2016–17ನೇ ಸಾಲಿನಲ್ಲಿ ಅಂದಿನ ಲೋಕೋಪಯೋಗಿ ಸಚಿವ ಎಚ್.ಡಿ. ರೇವಣ್ಣ ಅವರ ಅವಧಿಯಲ್ಲಿ ಸುಮಾರು 500 ಕೋಟಿ ರೂ. ವೆಚ್ಚದಲ್ಲಿ ಮಳವಳ್ಳಿ, ಮದ್ದೂರು, ಶಿವಪುರ, ಕುಣಿಗಲ್, ತುಮಕೂರು, ಕೊಟಗೆರೆ, ಪಾವಗಡ, ಆಂಧ್ರ ಪ್ರದೇಶದ ಗಡಿವರೆಗೆ ರಾಜ್ಯ ಹೆದ್ದಾರಿಯನ್ನು ಮಾಡಲಾಗಿತ್ತು ಸಂಬಂಧಿಸಿದ ಗುತ್ತಿಗೆದಾರರೇ 6 ವರ್ಷ ನಿರ್ವಹಣೆ ಮಾಡಬೇಕೆಂದು ಸೂಚಿಸಲಾಗಿತ್ತು ಎಂದರು.

ಒಂದು ವೇಳೆ ರಸ್ತೆಯು ಕಿತ್ತು ಹೋದರೆ ಅದನ್ನು ಸರಿಪಡಿಸಬೇಕೆಂದು ಸಂಬಂಧಿಸಿದ ಗುತ್ತಿಗೆದಾರರಿಗೇ ತಿಳಿಸಲಾಗಿತ್ತು. ಲೋಕಸಭೆ ಚುನಾವಣೆಗೂ ಮುನ್ನ ಮದ್ದೂರು ವ್ಯಾಪ್ತಿಯಲ್ಲಿ ಸುಮಾರು 3 ಕಿ.ಮೀ. ರಸ್ತೆಗೆ ಪ್ಯಾಚ್ ಕೆಲಸ ಮಾಡಲಾಗಿತ್ತು ಈಗ ಚುನಾವಣೆ ಅಧಿಸೂಚನೆ ಹೊರಡಿಸಿದ ನಂತರ ಕೆಲಸ ನಿಲ್ಲಿಸಲಾಗಿತ್ತು. ಪ್ರಸ್ತುತ ರಸ್ತೆ ನಿರ್ವಹಣೆ ಕೆಲಸ ನಡೆಯುತ್ತಿದ್ದು, ಕ್ರಮವಾಗಿ ಕೆಲಸ ಮಾಡದೆ, ಮದ್ದೂರು, ಭಾರತೀನಗರ, ಕೆಸ್ತೂರು ಪಟ್ಟಣದಲ್ಲಿ ಮಧ್ಯೆ ಮಧ್ಯೆ ಕೆಲಸ ಮಾಡುತ್ತಿರುವುದು ಸರಿಯಲ್ಲ. ಸಂಪೂರ್ಣವಾಗಿ ನಿರ್ವಹಣೆ ಮಾಡಬೇಕೆಂದು ಆಗ್ರಹಿಸಿದ್ದಾರೆ.


ಮೇ 9 ರಿಂದ ಬೃಹತ್ ಆಹಾರ ಮೇಳ, ವಸ್ತುಪ್ರದರ್ಶನ

ಮಂಡ್ಯ, ಮೇ 5– ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಅಪ್ಪಟ ಚರ್ಮ ವಸ್ತುಗಳ ಮಾರಾಟ ಮಳಿಗೆಯನ್ನು, ಸ್ವರ್ಣ ಟಿವಿ ವತಿಯಿಂದ ಬೃಹತ್ ಆಹಾರ ಮೇಳ ಮತ್ತು ವಸ್ತುಪ್ರದರ್ಶನವನ್ನು ಮೇ 9 ರಿಂದ 13 ರವರೆಗೆ ಮಂಡ್ಯ ನಗರದ ಸರ್ಕಾರಿ ಬಾಲಕಿಯರ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಸ್ತು ಪ್ರದರ್ಶನದಲ್ಲಿ ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಅಪ್ಪಟ ಚರ್ಮ ವಸ್ತುಗಳಿಂದ ಮಾಡಿರುವ ಚರ್ಮ ಪಾದರಕ್ಷೆಗಳು ಮುಂತಾದ ಚರ್ಮ ವಸ್ತುಗಳ ಮೇಲೆ ಆಕರ್ಷಕ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಲಿಡ್ಕರ್ ಮಾರಾಟ ಮಳಿಗೆಯಲ್ಲಿ ಅತ್ಯುತ್ತಮ ಗುಣಮಟ್ಟದ ಚರ್ಮ ಕುಶಲಕರ್ಮಿಗಳಿಂದ ಮಾಡ ಲ್ಪಟ್ಟ ಚರ್ಮದ ಪಾದರಕ್ಷೆ, ಶೂ, ವ್ಯಾನಿಟಿ ಬ್ಯಾಗ್, ಬೆಲ್ಟ್, ವ್ಯಾಲೆಟ್ ಮುಂತಾದ ಚರ್ಮ ವಸ್ತುಗಳನ್ನು ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821 – 2444019/ 9731833307 ಅನ್ನು ಸಂಪರ್ಕಿಸಬಹುದು ಎಂದು ಡಾ.ಬಾಬು ಜಗ ಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಪರವಾಗಿ ಚೇತನ್. ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀಟ್‌ಗೆ 7551 ವಿದ್ಯಾರ್ಥಿಗಳು ಹಾಜರು


ಮೈಸೂರಿನ ನೀಟ್ ಪರೀಕ್ಷಾ ಕೇಂದ್ರವೊಂದರ ಬಳಿ ಪರೀಕ್ಷಾರ್ಥಿಗಳು ಹಾಗೂ ಅವರ ಪೋಷಕರು ನಿಂತಿರುವುದು.

ಮೈಸೂರು, ಮೇ 5(ಎಸ್‌ಬಿಡಿ)– ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ(ನೀಟ್)ಗೆ ಮೈಸೂರು ಜಿಲ್ಲೆಯಲ್ಲಿ 7551 ವಿದ್ಯಾರ್ಥಿಗಳು ಹಾಜರಾಗಿದ್ದರು.

ಪಿಯುಸಿ ನಂತರ ವಿವಿಧ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗೆ ಭಾನುವಾರ ದೇಶಾದ್ಯಂತ ನಡೆದ ನೀಟ್ ಪರೀಕ್ಷೆಗೆ ಜಿಲ್ಲೆಯ 7845 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಆದರೆ ಇವರಲ್ಲಿ 294 ಅಭ್ಯರ್ಥಿಗಳು ಪರೀಕ್ಷೆಗೆ ಗೈರಾಗಿದ್ದು, ಉಳಿದ 7551 ಮಂದಿ ಪರೀಕ್ಷೆ ಬರೆದರು.

ಮೈಸೂರಿನ ಎಕ್ಸೆಲ್ ಪಬ್ಲಿಕ್ ಸ್ಕೂಲ್, ಪೊಲೀಸ್ ಪಬ್ಲಿಕ್ ಸ್ಕೂಲ್, ಮಹಾಜನ ಪಬ್ಲಿಕ್ ಸ್ಕೂಲ್, ಮಹರ್ಷಿ ಪಬ್ಲಿಕ್ ಸ್ಕೂಲ್, ಸಂತ ಅರ್ನಾಲ್ಡ್ ಸೆಂಟ್ರಲ್ ಸ್ಕೂಲ್, ಎಂಎಂಕೆಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಜಯಲಕ್ಷ್ಮಿ ಪುರಂನ ಸೆಂಟ್ ಜೋಸೆಫ್ ಶಾಲೆ, ಪ್ರಮತಿ ಹಿಲ್ ವ್ಯೂವ್ ಅಕಾಡೆಮಿ, ಸದ್ವಿದ್ಯಾ ಸಂಯೋಜಿತ ಪಿಯು ಕಾಲೇಜು, ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್, ಸೆಂಟ್ ಥೋಮಸ್ ಆಂಗ್ಲ ಮಾಧ್ಯಮ ಶಾಲೆ, ಎಸ್‌ವಿಇಐ ಪಬ್ಲಿಕ್ ಸ್ಕೂಲ್, ಆರ್ಕಿಡ್ ಪಬ್ಲಿಕ್ ಸ್ಕೂಲ್, ಸೆಂಟ್ ರೊಸೆಲ್ಲೋ ಸೆಂಟ್ರಲ್ ಸ್ಕೂಲ್, ಶಿಕ್ಷರ್ಣಿ ಸೆಂಟ್ರಲ್ ಸ್ಕೂಲ್, ವಿದ್ಯಾವರ್ಧಕ ಸಂಘ ಬಿಎಂಶ್ರೀ ಶೈಕ್ಷಣಿಕ ಸಂಸ್ಥೆ, ತಾಂಡವಾಪುರದ ಕ್ರೈಸ್ಟ್ ಶಾಲೆ ಸೇರಿದಂತೆ 18 ಕೇಂದ್ರಗಳಲ್ಲಿ ಸುಸೂತ್ರವಾಗಿ ಪರೀಕ್ಷೆ ನಡೆಯಿತು. ಪರೀಕ್ಷಾ ಕೇಂದ್ರಗಳ ಸುತ್ತ ನಗರ ಪೊಲೀಸ್ ಆಯುಕ್ತರು ನಿಷೇಧಾಜ್ಞೆ ಜಾರಿಗೊಳಿಸಿದ್ದರು.

‘ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್’ಗೆ ಸೇರಿದ ಬಂಡೀಪುರದ ‘ಯುವ ಮಿತ್ರ’ ಕಾರ್ಯಕ್ರಮ

ಮೈಸೂರು, ಮೇ 5(ಎಂಟಿವೈ)–ವನ್ಯಜೀವಿ ಸಂರಕ್ಷಣೆ ಹಾಗೂ ಅರಣ್ಯದ ಮಹತ್ವ ತಿಳಿಸುವ ನಿಟ್ಟಿನಲ್ಲಿ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಶಾಲಾ ವಿದ್ಯಾರ್ಥಿಗಳಿಗಾಗಿ ಆರಂಭಿಸಲಾದ ‘ಯುವ ಮಿತ್ರ’ ಕಾರ್ಯಕ್ರಮವು ‘ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್’ ಗೌರವಕ್ಕೆ ಪಾತ್ರವಾಗಿದೆ.

ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಸರ್ಕಾರಿ ಶಾಲೆಗಳ ಪ್ರೌಢಶಾಲಾ ಮಕ್ಕಳಿಗಾಗಿ ಪರಿಸರ ಶಿಕ್ಷಣ ನೀಡುವ ನಿಟ್ಟಿನಲ್ಲಿ 2023ರ ಮಾ.3ರಂದು ಯುವ ಮಿತ್ರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿತ್ತು. ಅದಕ್ಕಾಗಿ ಎರಡು ಹೊಸ ಬಸ್‌ಗಳನ್ನು ಖರೀದಿಸಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಫಾರಿಗೆ ಕರೆದೊಯ್ಯಲು ವ್ಯವಸ್ಥೆ ಮಾಡಲಾಗಿತ್ತು. ವಾರದಲ್ಲಿ ಐದು ದಿನ ವಿವಿಧ ಶಾಲೆಗಳ ಮಕ್ಕಳನ್ನು ಕರೆತಂದು ಬಂಡೀಪುರದ ಹಳೆ ಕ್ಯಾಂಪಸ್‌ನ ಸಭಾಂಗಣದಲ್ಲಿ ಪರಿಸರ ಶಿಕ್ಷಣ ನೀಡಿ ಬಳಿಕ, ಸಫಾರಿಗೆ ಕರೆದೊಯ್ದು ಪರಿಚಯ ಮಾಡಿಕೊಡಲಾಗುತ್ತಿತ್ತು.

ಈ ಯೋಜನೆಯಲ್ಲಿ ಇದುವರೆಗೆ 162 ದಿನಗಳಲ್ಲಿ 7,019 ವಿದ್ಯಾರ್ಥಿಗಳು, 655 ಶಿಕ್ಷಕರು, 197 ಗ್ರಾಪಂ ಸದಸ್ಯರು ಮತ್ತು ಸಿಬ್ಬಂದಿ, 395 ರೈತರು, 143 ಬುಡಕಟ್ಟು ಸಮುದಾಯದ ನಿವಾಸಿಗಳು ಸೇರಿದಂತೆ 8,410 ಮಂದಿಗೆ ಯುವ ಮಿತ್ರ ಕಾರ್ಯಕ್ರಮದಲ್ಲಿ ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯ ಮಹತ್ವ ಕುರಿತ ಶಿಕ್ಷಣ ಒದಗಿಸಲಾಗಿದೆ. ದೇಶದಲ್ಲಿಯೇ ಯಾವುದೇ ಹುಲಿ ಸಂರಕ್ಷಿತ ಪ್ರದೇಶ ಅಥವಾ ವನ್ಯಧಾಮಗಳಲ್ಲಿ ನಡೆಸದೇ ಇರುವ ಜಾಗೃತಿ ಕಾರ್ಯಕ್ರಮವನ್ನು ಬಂಡಿಪುರದಲ್ಲಿ ನಡೆಸಲಾಗಿದ್ದು, ಇದು ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ (ಐಬಿಆರ್) ದಾಖಲೆಗೆ ಪಾತ್ರವಾಗಿದೆ. ಈ ಬೃಹತ್ ಔಟ್‌ರಿಚ್ ಪ್ರೋಗ್ರಾಂ ಐಬಿಆರ್ ಸಂಸ್ಥೆ ಪ್ರಮಾಣ ಪತ್ರವನ್ನು ನೀಡಲಾಗಿದ್ದು, ಮೇ 2ರಂದು ಬಂಡಿಪುರದ ಈ ಹಿಂದಿನ ನಿರ್ದೇಶಕ ಹಾಗೂ ಹುಲಿ ಯೋಜನೆಯ ಸಿಎಫ್ ಡಾ.ಪಿ.ರಮೇಶ್‌ಕುಮಾರ್ ಯುವ ಮಿತ್ರ ಯೋಜನೆಗೆ ಲಭಿಸಿದ ‘ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್’ ದಾಖಲೆಗಳನ್ನು ಸ್ವೀಕರಿಸಿದ್ದಾರೆ.

● ಶಾಲಾ ವಿದ್ಯಾರ್ಥಿಗಳಿಗೆ ಪರಿಸರ ಶಿಕ್ಷಣ ನೀಡುವ ಕಾರ್ಯಕ್ರಮ
● 162 ದಿನಗಳಲ್ಲಿ 7,019 ವಿದ್ಯಾರ್ಥಿಗಳು, 655 ಶಿಕ್ಷಕರು, 297 ಗ್ರಾಪಂ ಸದಸ್ಯರು, 365 ರೈತರು, 143 ಬುಡಕಟ್ಟು ಸಮುದಾಯದವರು ಭಾಗಿ



ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ಸಭಾಂಗಣದಲ್ಲಿ ಹುಲಿ ಯೋಜನೆಯ ಸಿಎಫ್ ಡಾ. ಪಿ.ರಮೇಶ್‌ಕುಮಾರ್, ಎಸಿಎಫ್ ನವೀನ್‌ಕುಮಾರ್, ಆರ್‌ಎಫ್‌ಓ ದೀಪಾ, ‘ಯುವ ಮಿತ್ರ’ ಕಾರ್ಯಕ್ರಮದ ಶಿಕ್ಷಣಾಧಿಕಾರಿ ಮೋಹನ್, ಸಫಾರಿ ಮಾರ್ಗದರ್ಶಕರಾದ ಧರ್ಮ, ಮಂಜು ಇನ್ನಿತರರು ‘ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್’ ಪ್ರಮಾಣ ಪತ್ರವನ್ನು ಪ್ರದರ್ಶಿಸುತ್ತಿರುವುದು

“ಯುವ ಮಿತ್ರ ಕಾರ್ಯಕ್ರಮವು ಮಹತ್ತರ ಕಾರ್ಯಕ್ರಮವಾಗಿದೆ. ಕಾಡಂಚಿನ ಗ್ರಾಮಗಳ ವಿದ್ಯಾರ್ಥಿಗಳು ಹಾಗೂ ಯುವ ಜನರಲ್ಲಿ ವನ್ಯಜೀವಿ ಸಂರಕ್ಷಣೆಯ ಮಹತ್ವವನ್ನು ತಿಳಿಸುವ ಅನಿವಾರ್ಯತೆ ಇದ್ದು, ಅದಕ್ಕಾಗಿ ಕಳೆದ ವರ್ಷ ಯುವ ಮಿತ್ರ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿತ್ತು. ಈ ಕಾರ್ಯಕ್ರಮವು ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್’ ಗೌರವಕ್ಕೆ ಪಾತ್ರವಾಗಿದೆ. ಇದುವರೆಗೆ 8,410 ಮಂದಿ ಯುವ ಮಿತ್ರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಇದೊಂದು ಶಾಶ್ವತ ಕಾರ್ಯಕ್ರಮವಾಗಿಸುವ ನಿಟ್ಟಿನಲ್ಲಿ ಈ ಹಿಂದೆಯೇ ಪ್ರತ್ಯೇಕ ಸಿಬ್ಬಂದಿ, ಪ್ರತ್ಯೇಕ ಸಫಾರಿ ಬಸ್ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

–ಡಾ.ಪಿ.ರಮೇಶ್‌ಕುಮಾರ್, ಹುಲಿ ಯೋಜನೆಯ ಸಿಎಫ್

ಜಡೇಜಾ ಆಲ್‌ರೌಂಡ್ ಆಟಕ್ಕೆ ಸೋತ ಪಂಜಾಬ್ ಕಿಂಗ್ಸ್

ಧರ್ಮಶಾಲಾ, ಮೇ 5– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ರವೀಂದ್ರ ಜಡೇಜಾ ಅವರ ಆಲ್‌ರೌಂಡ್ ಆಟದ ನೆರವಿನಿಂದ ಪಂಜಾಬ್ ಕಿಂಗ್ಸ್ ಎದುರು ಚೆನ್ನೈ ಸೂಪರ್ ಕಿಂಗ್ಸ್ 28 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಈ ಗೆಲುವಿನೊಂದಿಗೆ ಸಿಎಸ್‌ಕೆ ಲಖನೌ ತಂಡವನ್ನು ಹಿಂದಿಕ್ಕಿ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಲಗ್ಗೆಯಿಟ್ಟಿದೆ.

ಇಲ್ಲಿನ ಹಿಮಾಚಲ ಕ್ರಿಕೆಟ್ ಸಂಸ್ಥೆ ಮೈದಾನದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಮೊದಲ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 167 ರನ್ ಬಾರಿಸಿ, ಪಂಜಾಬ್ ಕಿಂಗ್ಸ್ ತಂಡಕ್ಕೆ ಸ್ಪರ್ಧಾತ್ಮಕ ಗುರಿ ನೀಡಿತು. ಈ ಗುರಿ ಬೆನ್ನಟ್ಟಿದ ಪಂಜಾಬ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 139 ರನ್ ಗಳಿಸಿ ಚೆನ್ನೈಗೆ ಶರಣಾಯಿತು.

ಚೆನ್ನೈ ಪರ ಆರಂಭಿಕರಾಗಿ ಕಣಕ್ಕಿಳಿದ ಅಜಿಂಕ್ಯಾ ರಹಾನೆ ಪಂದ್ಯದ ಎರಡನೇ ಓವರ್‌ನಲ್ಲೇ 9 ರನ್‌ಗಳಿಗೆ ಅರ್ಶದೀಪ್ ಸಿಂಗ್‌ಗೆ ವಿಕೆಟ್ ಒಪ್ಪಿಸಿದರು. ಇದಾದ ಬಳಿಕ ಎರಡನೇ ವಿಕೆಟ್‌ಗೆ ನಾಯಕ ಋತುರಾಜ್ ಗಾಯಕ್ವಾಡ್ ಹಾಗೂ ಡೇರಿಲ್ ಮಿಚೆಲ್ 32 ಎಸೆತಗಳಲ್ಲಿ 57 ರನ್‌ಗಳ ಉತ್ತಮ ಜತೆಯಾಟವಾಡಿದರು. ಗಾಯಕ್ವಾಡ್ 32 ರನ್ ಗಳಿಸಿ ರಾಹುಲ್ ಚಹಾರ್‌ಗೆ ವಿಕೆಟ್ ಒಪ್ಪಿಸಿದರೆ, ಇದರ ಬೆನ್ನಲ್ಲೇ ಕ್ರೀಸ್‌ಗಿಳಿದ ಶಿವಂ ದುಬೆ



ಮೊದಲ ಎಸೆತದಲ್ಲೇ ಶೂನ್ಯಕ್ಕೆ ಔಟಾಗಿ ಪೆವಿಲಿಯನ್‌ಗೆ ಮರಳಿದರು. ಡೇರಿಲ್ ಮಿಚೆಲ್ 30 ರನ್ ಗಳಿಸಿ ಹರ್ಷಲ್ ಪಟೇಲ್‌ಗೆ ವಿಕೆಟ್ ಒಪ್ಪಿಸಿದರು.

ಮಧ್ಯಮ ಕ್ರಮಾಂಕದಲ್ಲಿ ಕಣಕ್ಕಿಳಿದ ಮೊಯಿನ್ ಅಲಿ 17 ರನ್ ಗಳಿಸಿ ಔಟಾದರು. 11 ರನ್ ಗಳಿಸಿದ್ದ ಮಿಚೆಲ್ ಸ್ಯಾಂಟ್ನರ್‌ಗೆ ರಾಹುಲ್ ಚಹಾರ್ ಪೆವಿಲಿಯನ್ ಹಾದಿ ತೋರಿಸಿದರು. ಶಾರ್ದೂಲ್ ಠಾಕೂರ್ 17 ರನ್ ಗಳಿಸಿ ವಿಕೆಟ್ ಕೈಚೆಲ್ಲಿದರು. ಕ್ರೀಸ್‌ಗಿಳಿದು ಮೊದಲನೇ ಬಾಲ್‌ಗೆ ಗೋಲ್ಡನ್ ಡಕ್ ಆಗಿ ಎಂ.ಎಸ್.ಧೋನಿ 18 ವರ್ಷಗಳ ಬಳಿಕ ಕೆಟ್ಟ ದಾಖಲೆ ಬರೆದರು. ಕೊನೆಯಲ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ರವೀಂದ್ರ ಜಡೇಜಾ 26 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಒಳಗೊಂಡ 43 ರನ್ ಬಾರಿಸಿ, ಸವಾಲಿನ ಮೊತ್ತ ದಾಖಲಿಸಲು ತಂಡಕ್ಕೆ ನೆರವಾದರು.

ಪಂಜಾಬ್ ಕಿಂಗ್ಸ್ ಪರ ರಾಹುಲ್ ಚಹಾರ್, ಹರ್ಷಲ್ ಪಟೇಲ್ ತಲಾ 3, ಅರ್ಶದೀಪ್ ಸಿಂಗ್ 2 ಹಾಗೂ ನಾಯಕ ಸ್ಯಾಮ್ ಕರ್ರನ್ ಒಂದು ವಿಕೆಟ್ ಕಬಳಿಸಿದರು.

ಚೆನ್ನೈ ನೀಡಿದ 168 ರನ್ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ ಆರಂಭದಲ್ಲೇ ಜಾನಿ ಬೇರ್‌ಸ್ಟೋವ್ ಹಾಗೂ ರಿಲೇ ರೂಸ್ಸೊ ವಿಕೆಟ್ ಕಳೆದುಕೊಂಡಿತು. ಆರಂಭಿಕರಾಗಿ ಕ್ರೀಸ್‌ಗಿಳಿದಿದ್ದ ಪ್ರಭಾಸಿಮ್ರಾನ್ ಸಿಂಗ್ ತಂಡಕ್ಕೆ ಗೆಲುವಿನ ಭರವಸೆ ಮೂಡಿಸಿದ್ದರು. ಆದರೆ 30 ರನ್ ಗಳಿಸಿದ್ದ ವೇಳೆ ಜಡೇಜಾಗೆ ವಿಕೆಟ್ ಒಪ್ಪಿಸಿದರು. ಉಳಿದಂತೆ ಶಶಾಂಕ್ ಸಿಂಗ್ 27, ಹರ್‌ಪ್ರೀತ್ ಬ್ರಾರ್ 17, ಹರ್ಷಲ್ ಪಟೇಲ್ 12, ರಾಹುಲ್ ಚಹಾರ್ 16 ಹಾಗೂ ಕಗಿಸೊ ರಬಾಡ ಔಟಾಗದೇ 11 ರನ್ ಗಳಿಸಲಷ್ಟೇ ಶಕ್ತರಾದರು. ಚೆನ್ನೈ ಪರ ರವೀಂದ್ರ ಜಡೇಜಾ 3, ತುಷಾರ್ ದೇಶಪಾಂಡೆ, ಸಿಮರ್ಜೀತ್ ಸಿಂಗ್ ತಲಾ 2, ಮಿಚೆಲ್ ಸ್ಯಾಂಟ್ನರ್ ಹಾಗೂ ಶಾರ್ದೂಲ್ ಠಾಕೂರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಚೆನ್ನೈ ಪರ ರವೀಂದ್ರ ಜಡೇಜಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಲಕ್ನೋ ವಿರುದ್ಧ ಗೆಲುವು: ಅಂಕಪಟ್ಟಿಯಲ್ಲಿ ಕೆಕೆಆರ್ ಅಗ್ರಸ್ಥಾನಕ್ಕೆ

ಲಕ್ನೋ, ಮೇ 5– ಸುನೀಲ್ ನರೇನ್ ಅವರ ಸ್ಫೋಟಕ ಅರ್ಧಶತಕದ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 98 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಆಡಿರುವ 11 ಪಂದ್ಯಗಳಲ್ಲಿ 8 ಗೆಲುವು, 3 ಸೋಲಿನೊಂದಿಗೆ 16 ಅಂಕ ಗಳಿಸಿರುವ ಕೆಕೆಆರ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಮೂಲಕ ಪ್ಲೇ ಆಫ್ ಪ್ರವೇಶಿಸಿದೆ.

ಇಲ್ಲಿನ ಭಾರತ್‌ರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ಪರ ಸುನೀಲ್ ನರೇನ್ ಹಾಗೂ ಫಿಲಿಪ್ ಸಾಲ್ಟ್ ಮೊದಲ ವಿಕೆಟ್‌ಗೆ 61 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಸಾಲ್ಟ್ 32 ರನ್ ಸಿಡಿಸಿ ಔಟಾದರು. ಈ ವೇಳೆ ಜೊತೆಯಾದ ನರೈನ್ ಹಾಗೂ ಅಂಗ್ಕ್ರಿಶ್ ರಘುವಂಶಿ 2ನೇ ವಿಕೆಟ್‌ಗೆ 79ರನ್ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಅಡಿಪಾಯ ಹಾಕಿದರು. ಪಂದ್ಯದಲ್ಲಿ ಅರ್ಧಶತಕ ಸಿಡಿಸಿ ಅಬ್ಬರಿಸಿದ 39 ಎಸೆತಗಳಲ್ಲಿ 6 ಬೌಂಡರಿ, 7 ಸಿಕ್ಸರ್ ಒಳಗೊಂಡ 81 ರನ್ ಗಳಿಸಿ ನಿರ್ಗಮಿಸಿದರು. ಇತ್ತ ರಘುವಂಶಿ 32 ರನ್ ಕಾಣಿಕೆ ನೀಡಿದರು. ನಂತರ ಬಂದ ಆಂಡ್ರೆ ರಸೆಲ್ 12, ರಿಂಕು

ಪ್ಲೇ ಆಫ್‌ಗೆ ಎಂಟ್ರಿ ಕೊಟ್ಟ ಶ್ರೇಯಸ್ ಬಳಗ




ಸಿಂಗ್ 16 ರನ್ ಗಳಿಸಿ ಔಟಾದರು. ಇನ್ನು ನಾಯಕ ಶ್ರೇಯಸ್ ಅಯ್ಯರ್ 23 ರನ್ ಗಳಿಸಿದರೇ, ಅಂತಿಮ ಹಂತದಲ್ಲಿ ರಮನದೀಪ್ ಕೇವಲ 6 ಎಸೆತದಲ್ಲಿ 25 ರನ್ ಸಿಡಿಸಿದರು. ಅಂತಿಮವಾಗಿ ಕೋಲ್ಕತ್ತಾ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 235 ರನ್ ಗಳಿಸಿತು. ಲಕ್ನೋ ಪರ ನವೀನ್ ಉಲ್ ಹಕ್ 3, ಯಶ್ ಠಾಕೂರ್, ರವಿ ಬಿಷ್ಣೋಯಿ ಹಾಗೂ ಯುದ್ವೀರ್ ಸಿಂಗ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

236 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಲಕ್ನೋ ಸೂಪರ್ ಜೈಂಟ್ಸ್ 16.1 ಓವರ್‌ಗಳಲ್ಲಿ 137ರನ್‌ಗಳಿಗೆ ಆಲೌಟಾಗುವ ಮೂಲಕ 98 ರನ್‌ಗಳ ಸೋಲು ಅನುಭವಿಸಿತು. ತಂಡದ ಪರ ನಾಯಕ ಕೆ.ಎಲ್.ರಾಹುಲ್ 25, ಅರ್ಶಿನ್ ಕುಲಕರ್ಣಿ 9, ಮಾರ್ಕಸ್ ಸ್ಟೋಯ್ನಿಸ್ 36, ದೀಪಕ್ ಹೂಡಾ 5, ನಿಕೋಲಸ್ ಪೂರನ್ 10, ಆಯುಷ್ ಬದೋನಿ 15, ಆಷ್ಟನ್ ಟರ್ನರ್ 16, ಕೃನಾಲ್ ಪಾಂಡ್ಯ 5, ಯದ್ವೀರ್ ಸಿಂಗ್ 7 ರನ್ ಗಳಿಸಿದರು. ತಂಡದಲ್ಲಿ ಘಟಾನುಘಟಿ ಬ್ಯಾಟ್ಸ್‌ಮನ್‌ಗಳಿದ್ದರೂ ಲಕ್ನೋ ಪರ ಯಾರೊಬ್ಬರೂ ದೊಡ್ಡ ಇನ್ನಿಂಗ್ಸ್ ಆಡುವಲ್ಲಿ ವಿಫಲವಾದರು. ಕೋಲ್ಕತ್ತಾ ನೈಟ್ ರೈಡರ್ಸ್ ಪರ ಬೌಲಿಂಗ್‌ನಲ್ಲಿ ಹರ್ಷಿತ್ ರಾಣ ಹಾಗೂ ವರುಣ್ ಚಕ್ರವರ್ತಿ ತಲಾ 3, ಆಂಡ್ರೆ ರಸೆಲ್ 2, ಮಿಚೆಲ್ ಸ್ಟಾರ್ಕ್, ಸುನೀಲ್ ನರೇನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಸುನೀಲ್ ನರೇನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಬಿಸಿಲಿನ ಬೇಗೆಗೆ ಕಳೆಗುಂದಿದ ಇರ್ಪು ಜಲಕನ್ಯೆ

ಜಲಪಾತದಲ್ಲಿ ನೀರಿನ ಹರಿವು ಕಡಿಮೆಯಿಂದ ಕೃಷಿ ಚಟುವಟಿಕೆಗೂ ತೊಡಕು



ಮಡಿಕೇರಿ, ಮೇ.5– ದಕ್ಷಿಣ ಕೊಡಗಿನ ಪ್ರಮುಖ ಪ್ರವಾಸಿ ತಾಣಗಳಲ್ಲೊಂದಾದ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಬಳಿಯ ಇರ್ಪು ಜಲಪಾತ ಬಿಸಿಲಿನ ಬೇಗೆಗೆ ಕಳೆಗುಂದಿದೆ.

ಹಚ್ಚ ಹಸಿರಿನ ಪ್ರಕೃತಿಯ ರಮಣೀಯ ತಾಣ ಬ್ರಹ್ಮಗಿರಿಯ ತಪ್ಪಲಿನಲ್ಲಿ ಲಕ್ಷ್ಮಣ ತೀರ್ಥ ನದಿಯಿಂದ ಸೃಷ್ಟಿಯಾದ ಇರ್ಪು ಜಲಪಾತ ಸುಮಾರು 51.8 ಮೀಟರ್ ಎತ್ತರದಿಂದ ಮಳೆಗಾಲದಲ್ಲಿ ಭೋರ್ಗರೆಯುತ್ತಾ ಹಾಲ್ನೊರೆಯಂತೆ ಧುಮ್ಮಿಕ್ಕುವ ಮೂಲಕ ನೋಡುಗರ ಕಣ್ಮನ ಸೆಳೆಯುತ್ತದೆ. ಆದರೆ, ಇದೀಗ ಬಿಸಿಲಿನ ಬೇಗೆಗೆ ಇರ್ಪು ಜಲ ಕನ್ಯೆಯ ಸೌಂದರ್ಯ ಕಳೆಗುಂದಿದೆ. ಕೊಡದಲ್ಲಿ ನೀರು ಸುರಿದಂತೆ ಕಂಡು ಬರುತ್ತದೆ. ಇರ್ಪು ಜಲಪಾತ ವೀಕ್ಷಣೆಗೆ ರಾಜ್ಯದ ವಿವಿಧೆಡೆಗಳಿಂದ ಬರುತ್ತಿದ್ದ ಪ್ರವಾಸಿಗರ ಸಂಖ್ಯೆಯು ತೀವ್ರ ಪ್ರಮಾಣದಲ್ಲಿ ಕಡಿಮೆಯಾಗಿದೆ.

ಜಲಪಾತದಲ್ಲಿ ನೀರಿನ ಅರಿವು ಕಡಿಮೆ ಇರುವುದರಿಂದ ಪ್ರವಾಸಿಗರು ಜಲಪಾತದ ತಳಭಾಗದಲ್ಲಿ ಮೇಲಿನಿಂದ ಸೊರಗಿದಂತೆ ಬೀಳುವ ನೀರಿನಲ್ಲಿ ಸ್ವಚ್ಛಂದವಾಗಿ ಸ್ನಾನ ಮಾಡುವ ಮೂಲಕ ಬಿಸಿಲ ಧಗೆಯನ್ನು ತಣಿಸಿ ಕೊಳ್ಳುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಮಳೆಗಾಲದಲ್ಲಿ ಜಲಪಾತದ ತಳಭಾಗಕ್ಕೆ ಹೋಗುವುದಕ್ಕೆ ಪ್ರವಾಸಿಗರು ಸೇರಿದಂತೆ ಎಲ್ಲರಿಗೂ ನಿರ್ಬಂಧ ಹೇರಲಾಗುತ್ತದೆ. ಮಳೆಗಾಲ ಕ್ಯೂಸೆಕ್ ಲೆಕ್ಕಾಚಾರದಲ್ಲಿ ರುದ್ರ ರಮಣೀಯವಾಗಿ ಭೋರ್ಗರೆಯುತ್ತಾ ಧುಮ್ಮಿಕ್ಕುವ ಇರ್ಪು ಜಲಪಾತ ನೋಡುಗರನ್ನು ತನ್ನತ್ತ ಸೆಳೆಯುತ್ತದೆ. ಅಲ್ಲದೇ ಜಲಪಾತದ ಭೋರ್ಗರೆಯುವ ಸದ್ದು ಕಿ.ಮೀ. ದೂರಕ್ಕೂ ಕೇಳಿ ಬರುತ್ತದೆ.

ಇರ್ಪು ಜಲಪಾತದ ನೀರನ್ನೇ ಅವಲಂಭಿಸಿ ಸುತ್ತ ಮುತ್ತಲಿನ ಗ್ರಾಮಸ್ಥರು ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಆದರೆ, ಇದೀಗ ಜಲಪಾತದಲ್ಲಿ ನೀರಿನ ಹರಿವು ಕಡಿಮೆಯಾಗಿರುವುದರಿಂದ ಕೃಷಿ ಚಟುವಟಿಕೆಗಳಿಗೆ ತೊಡಕುಂಟಾಗಿದೆ. ಸುಡುಬಿಸಿಲಿನ ತಾಪಕ್ಕೆ ಜಲಪಾತದ ಮೇಲಿನಿಂದ ಬೀಳುವ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ನೀರು ಹರಿದು ಹೋಗದೇ, ಜಲಪಾತದ ಬಂಡೆಗಳು ಬಿಸಿಲಿಗೆ ಸುಡುವ ಕೆಂಡದಂತೆ ಭಾಸವಾಗುತ್ತಿವೆ. ಒಟ್ಟಿನಲ್ಲಿ ಮಳೆಗಾಲದಲ್ಲಿ ಪ್ರವಾಸಿಗರನ್ನು ಕೈಬೀಸಿ ಕರೆಯುವ ಇರ್ಪು ಜಲಕನ್ಯೆಯ ಸೌಂದರ್ಯ ಸುಡು ಬಿಸಿಲಿನ ತಾಪಕ್ಕೆ ಕಳೆಗುಂದಿದ್ದು, ಪ್ರವಾಸಿಗರ ಸಂಖ್ಯೆಯೂ ಜಲಪಾತದ ನೀರಿನಂತೆ ಇಳಿಮುಖಗೊಂಡಿದೆ.

ಜೀವ ಜಲಕ್ಕಾಗಿ ಪರಿತಪಿಸುತ್ತಿರುವ ಚಿಟ್ಟೆಗಳು



ಇರ್ಪು ಜಲಪಾತದ ಹನಿ ನೀರನ್ನು ಪತಂಗಗಳು ಹೀರಿ ದಾಹ ತಣಿಸಿಕೊಳ್ಳುತ್ತಿರುವುದು.

ಕೈಕೊಟ್ಟ ಮಳೆಯಿಂದ ಎದುರಾಗಿರುವ ಬರಗಾಲಕ್ಕೆ ಜನ–ಜಾನುವಾರುಗಳು, ವನ್ಯಪ್ರಾಣಿಗಳು ಹಾಗೂ ಜೀವ ಸಂಕುಲವಾದ ಚಿಟ್ಟೆ ಹಾಗೂ ಕೀಟಗಳು ಸಹ ಜೀವ ಜಲಕ್ಕಾಗಿ ಪರಿತಪಿಸುತ್ತಿವೆ.

ಪೊನ್ನಂಪೇಟೆ ತಾಲೂಕಿನ ಇರ್ಪು ಜಲಪಾತದ ಬಳಿ ಪತಂಗಗಳ ಹಿಂಡು ಬಂಡೆಗಳ ಮೇಲಿದ್ದ ಹನಿ ನೀರನ್ನು ಹೀರಿಕೊಂಡು ದಾಹ ತಣಿಸಿಕೊಳ್ಳುತ್ತಿದ್ದ ಈ ದೃಶ್ಯಗಳೇ ಬರಗಾಲಕ್ಕೆ ಮೂಕ ಸಾಕ್ಷಿ ಹೇಳುತ್ತಿವೆ. ಇರ್ಪು ಜಲಪಾತದ ಮೇಲಿನಿಂದ ಬೀಳುವ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ನೀರು ಹರಿದು ಹೋಗದೇ, ಜಲಪಾತದ ಬಂಡೆಗಳ ನಡುವೆ ಶೇಖರಣೆಗೊಂಡಿದೆ. ಬಂಡೆಗಳ ನಡುವೆ ಶೇಖರಣೆಗೊಂಡ ನೀರಿನಲ್ಲಿ ಪತಂಗಗಳ ಹಿಂಡು ದಾಹ ನೀಗಿಸಿಕೊಳ್ಳುತ್ತಿದ್ದ ದೃಶ್ಯ ಜೀವ ಜಲದ ಮಹತ್ವ ಸಾರುತ್ತದೆ. ನೂರಾರು ಸಂಖ್ಯೆಯಲ್ಲಿದ್ದ ಚಿಟ್ಟೆಗಳ ಗುಂಪು ನೀರಿನ ಬಳಿ ಸುಳಿದಾಡುತ್ತ ಅತ್ತಿಂದಿತ್ತ ಹಾರಾ ಡುತ್ತ, ಏನಾದರಾಗಲೀ ಬಾಯಾರಿಕೆ ನೀಗಿದರೆ ಸಾಕೆಂದು ಕಾದು ಕಬ್ಬಿಣದಂತಾಗಿದ್ದ ಕಲ್ಲಿನ ಮೇಲೆ ಕುಳಿತು ಕದಲದೇ ದಾಹ ನೀಗಿಸಿಕೊಳ್ಳುವಲ್ಲಿ ತಲ್ಲೀನವಾಗಿದ್ದವು. ಸಮರ್ಪಕ ಮಳೆಯಾಗದ ಕಾರಣ ಕಾಡುಗಳಲ್ಲಿ ಹೂವುಗಳು ಅರಳದೇ ಪತಂಗ ಸಂಕುಲ ಕೂಡ ಆಹಾರಕ್ಕಾಗಿ ಪರಿತಪಿಸುತ್ತಿವೆ.

ಶರತ್ ಕಾಂತ್ ಅರಣ್ಯ ಪರಿಸರ ವನ್ಯಜೀವಿ ಸಂರಕ್ಷಣೆ ಬಳಗದ ಅಧ್ಯಕ್ಷ



ಸಿದ್ದಾಪುರ: ಅರಣ್ಯ ಪರಿಸರ ಹಾಗೂ ವನ್ಯಜೀವಿ ಸಂರಕ್ಷಣಾ ಬಳಗದ ಜಿಲ್ಲಾ ಅಧ್ಯಕ್ಷರಾಗಿ ಶರತ್ ಕಾಂತ್ ಆಯ್ಕೆಯಾಗಿದ್ದಾರೆ.

ಅಮ್ಮತಿ ಎಪಿಸಿಎಂಎಸ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಉಪಾಧ್ಯಕ್ಷರಾಗಿ ರಾಘು, ರಾಜ್ಯ ಸಂಘಟನಾ ಕಾರ್ಯ ದರ್ಶಿಯಾಗಿ ರೋಷನ್, ಸಾಮಾಜಿಕ ಜಾಲತಾಣದ ನಿರ್ವಹಣಾ ಜಿಲ್ಲಾಧ್ಯಕ್ಷರಾಗಿ ಸುರೇಶ್ ಪೂಜಾರಿ, ರಾಜ್ಯ ಅಧ್ಯಕ್ಷರಾಗಿ ಶಿವರಾಜ್, ಮಹಿಳಾ ಬಳಗದ ತಾಲೂಕು ಅಧ್ಯಕ್ಷರಾಗಿ ಕುಸುಮ, ಕಾರ್ಯದರ್ಶಿಗಳಾಗಿ ಪವಿತ್ರ ರೋಷನ್, ಶ್ವೇತಾ, ಆರತಿ ಆಯ್ಕೆಯಾದರು.

ಜಿಲ್ಲಾಧ್ಯಕ್ಷ ಶರತ್ ಕಾಂತ್ ಮಾತನಾಡಿ, ಅರಣ್ಯ ಪರಿಸರ ಮತ್ತು ವನ್ಯಜೀವಿ, ಜೀವ ವೈವಿಧ್ಯತೆ ಸೇರಿದಂತೆ ಸಂರಕ್ಷಣಾ ದೃಷ್ಟಿಯಿಂದ ಸ್ಥಾಪಕ ರಾಜ್ಯಾಧ್ಯಕ್ಷರಾದ ಪ್ರಸನ್ನ ಕುಮಾರ್ ಅವರ ನಿರ್ದೇಶನದ ಮೇರೆಗೆ ಪರಿಸರ ಪ್ರೇಮಿಗಳು ಹಾಗೂ ಪ್ರಾಣಿ ಹಾಗೂ ಉರಗ ರಕ್ಷಕರನ್ನು ಒಗ್ಗೂಡಿಸಿ ಬಳಗವನ್ನ ಅಸ್ತಿತ್ವಕ್ಕೆ ತರಲಾಗಿದ್ದು, ಪರಿಸರ, ವನ್ಯಜೀವಿ ಸಂರಕ್ಷಿಸುವ ಮೂಲಕ ಸೇವಾ ಕಾರ್ಯ ಮುಂದುವರಿಸಲಾಗುವುದು ಎಂದರು. ಸರ್ಕಾರ ನಮ್ಮ ಬಳಗವನ್ನು ಗುರ್ತಿಗೆ ಆಧಾರದ ಮೂಲಕ ಪರಿಗಣಿಸಿ ಸರ್ಕಾರದ ಸವಲತ್ತುಗಳನ್ನು ನೀಡುವುದರ ಮೂಲಕ ಬಳಗಕ್ಕೆ ಸಹಕಾರ ನೀಡಬೇಕೆಂದರು. ಈ ಸಂದರ್ಭ ಜಿಲ್ಲೆ ಹಾಗೂ ಹೊರ ಜಿಲ್ಲೆಯ ಪರಿಸರ ಹಾಗೂ ವನ್ಯಜೀವಿ ರಕ್ಷಕರು ಭಾಗವಹಿಸಿದ್ದರು.

ಸೋಲಾರ್ ಅಳವಡಿಕೆ ಮೂಲಕ ಕಾಡುಪ್ರಾಣಿಗಳಿಗೆ ನೀರು



ಕಾಡುಪ್ರಾಣಿಗಳಿಗೆ ನೀರು ಒದಗಿಸಲು ಪಂಪ್‌ಸೆಟ್‌ಗೆ ಸೋಲಾರ್ ಅಳವಡಿಸಿರುವುದು.

> **ಬೇಸಿಗೆ ತೀವ್ರವಾಗಿರುವುದರಿಂದ ಕಾಡು ಪ್ರಾಣಿಗಳಿಗೆ ನೀರಿನ ಲಭ್ಯತೆ ಎಲ್ಲೆಲ್ಲಿದೆ ಎಂದು ಪರಿಶೀಲಿಸಲಾಗಿದೆ. ಕಾವೇರಿ ನದಿ ಮತ್ತು ಹಿನ್ನೀರಿನ ಪ್ರದೇಶಗಳಲ್ಲಿ ಕಾಡುಪ್ರಾಣಿಗಳಿಗೆ ನೀರಿನ ಅಭಾವ ಕಾಡುತ್ತಿಲ್ಲ. ಆದರೆ, ಸೋಮವಾರಪೇಟೆ ಮತ್ತು ಶನಿವಾರಸಂತೆ ಭಾಗದ ಕೆಲ ಅರಣ್ಯ ಪ್ರದೇಶಗಳ ಕೆರೆಗಳು ಪೂರ್ತಿ ಬತ್ತಿ ಹೋಗಿದ್ದು, ಮಾರ್ಚ್‌ನಲ್ಲಿ ಕೊಳವೆ ಬಾವಿ ಕೊರೆಸಿ, ಸೋಲಾರ್ ಅಳವಡಿಕೆ ಮೂಲಕ ನಿರಂತರವಾಗಿ ಕೆರೆಗೆ ನೀರು ತುಂಬಿಸಲಾಗುತ್ತಿದೆ. ವನ್ಯಜೀವಿ ವಲಯದಿಂದ ಹೊರಗಡೆ ಮೊದಲ ಬಾರಿಗೆ ಇಂತಹ ಪ್ರಯತ್ನ ಮಾಡಲಾಗಿದೆ.**
>
> **–ಭಾಸ್ಕರ್, ಮಡಿಕೇರಿ ಉಪ ಅರಣ್ಯ ಸಂರಕ್ಷಣಾಧಿಕಾರಿ**

ಮಡಿಕೇರಿ: ಬಿಸಿಲಿನ ತಾಪಮಾನ ದಿನೇ ದಿನೆ ಹೆಚ್ಚಳವಾಗುತ್ತಿದ್ದು, ಸುಡು ಬಿಸಿಲಿಗೆ ಜಲ ಮೂಲಗಳು ಬತ್ತಿ ಹೋಗುತ್ತಿವೆ. ಇದರಿಂದಾಗಿ ಜನ–ಜಾನುವಾರುಗಳು, ವನ್ಯಜೀವಿಗಳು ಕೂಡ ನೀರಿಗಾಗಿ ಪರಿತಪಿಸುವಂತಾಗಿದೆ.

ಅರಣ್ಯ ಪ್ರದೇಶಗಳಲ್ಲಿ ನೀರಿನ ಮೂಲಗಳು ಬತ್ತಿ ಹೋಗಿದ್ದು, ಕಾಡುಪ್ರಾಣಿಗಳು ನೀರನ್ನು ಅರಸಿ ಕಾಡಿನಿಂದ ಹೊರ ಹೋಗುವಂತಹ ಸನ್ನಿವೇಶ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ಕಾಡುಪ್ರಾಣಿಗಳಿಗೆ ನೀರು ಒದಗಿಸಲು ಅರಣ್ಯ ಇಲಾಖೆಯಿಂದ ಸೋಲಾರ್ ಅಳವಡಿಕೆ ಮೂಲಕ ಪಂಪ್‌ಸೆಟ್‌ನಿಂದ ದಿನದ 24 ಗಂಟೆ ಕಾಡಿನ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದ್ದು, ವನ್ಯಜೀವಿಗಳಿಗೆ ನೀರಿನ ಸಮಸ್ಯೆ ಎದುರಾಗದಂತೆ ಎಚ್ಚರ ವಹಿಸಲಾಗಿದೆ.

ಮರದ ಕೊಂಬೆ ಅಪ್ಪಳಿಸಿ ಕಾರ್ಮಿಕ ಸಾವು

ಮಡಿಕೇರಿ: ಮರ ಕಡಿಯುತ್ತಿದ್ದ ವೇಳೆ ಮರದ ಕೊಂಬೆ ಅಪ್ಪಳಿಸಿ ಕಾರ್ಮಿಕ ಮೃತಪಟ್ಟಿರುವ ಘಟನೆ ಸೋಮವಾರಪೇಟೆ ತಾಲೂಕಿನ ಹಾನಗಲ್ ಬಾಣೆಯಲ್ಲಿ ಭಾನುವಾರ ನಡೆದಿದೆ.

ಸೋಮವಾರಪೇಟೆ ತಾಲೂಕಿನ ಎಡವಾರ ಗ್ರಾಮದ ನಿವಾಸಿ ನಿತೇಶ್ (43) ಮೃತಪಟ್ಟಿದ್ದು, ಮರ ಕಡಿಯುತ್ತಿದ್ದ ಸಂದರ್ಭದಲ್ಲಿ ಮತ್ತೊಂದು ಮರಕ್ಕೆ ಕಟ್ಟಿದ ಹಗ್ಗ ಜಾರಿ ಮರದ ಕೊಂಬೆ ನಿತೇಶ್‌ಗೆ ಅಪ್ಪಳಿಸಿದೆ. ಪರಿಣಾಮ ಈತನಿಗೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತ ನಿತೇಶ್‌ಗೆ ಪತ್ನಿ ಹಾಗೂ ಇಬ್ಬರು ಮಕ್ಕಳು ಇದ್ದಾರೆ.

ಈ ಸಂಬಂಧ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ಎಚ್ಚರಿಕೆ

ಮಡಿಕೇರಿ: ಕೊಡಗು ಜಿಲ್ಲೆಯ ಖಾಸಗಿ ಜಮೀನಿನ ಸರ್ಕಾರಿ ಮರಗಳ ಸರ್ವೇ ಕಾರ್ಯವನ್ನು ತಕ್ಷಣ ಸ್ಥಗಿತಗೊಳಿಸದಿದ್ದಲ್ಲಿ ಬೆಳೆಗಾರರ ಬೆಂಬಲದೊಂದಿಗೆ ಅರಣ್ಯ ಇಲಾಖೆ ವಿರುದ್ಧ ಜಿಲ್ಲಾದ್ಯಂತ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಬಿಜೆಪಿ ಎಚ್ಚರಿಕೆ ನೀಡಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಅರಣ್ಯ ಅಧಿಕಾರಿಗಳು ಖಾಸಗಿ ಜಮೀನಿನ ಮರಗಳ ಪಟ್ಟಿ ಮಾಡಿ ಕಂದಾಯ ಇಲಾಖೆಗೆ ವರದಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಜಿಲ್ಲೆಯ ಬೆಳೆಗಾರರಲ್ಲಿ ಗೊಂದಲ ಸೃಷ್ಟಿಸಿರುವ ಈ ಕಾರ್ಯವನ್ನು ಸರ್ಕಾರ ತಕ್ಷಣ ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸಿದರು.

ಜಿಲ್ಲೆಯ ಬೆಳೆಗಾರರು ಪರಿಸರಕ್ಕೆ ಪೂರಕವಾಗಿ ಮರಗಳನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ. ಯಾವುದೇ ದುರುದ್ದೇಶಕ್ಕೆ ಮರಗಳ ಹನನ ಮಾಡಿಲ್ಲ. ಕೊಡಗಿನ ಜನರ ಪರಿಸರ ಕಾಳಜಿಯಿಂದ ಅರಣ್ಯ ಪ್ರದೇಶ ಮತ್ತು ದೇವರಕಾಡುಗಳು ಸಂರಕ್ಷಿಸಲ್ಪಟ್ಟಿವೆ. ತೋಟ ಮಾಡುವಾಗಲೂ ಮರಗಳನ್ನು ಕಡಿಯುತ್ತಿಲ್ಲ. ಬದಲಿಗೆ ಹಸಿರನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರ ಏಕಾಏಕಿ ಖಾಸಗಿ ಜಮೀನಿನ ಮರಗಳ ಸರ್ವೇ ಕಾರ್ಯಕ್ಕೆ ಆದೇಶ ನೀಡುವ ಮೂಲಕ ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಎಂ.ಪಿ. ಸುನಿಲ್ ಸುಬ್ರಮಣಿ, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್ ಜೈನಿ, ಚಲನ್ ಕುಮಾರ್, ವಿ.ಕೆ.ಲೋಕೇಶ್ ಹಾಗೂ ಜಿಲ್ಲಾ ವಕ್ತಾರ ಬಿ.ಕೆ.ಅರುಣ್ ಕುಮಾರ್ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿದರು.

ಕಾರು, ಟಿಪ್ಪರ್ ಡಿಕ್ಕಿ: ದಂಪತಿಗೆ ಗಾಯ



ಗುಡ್ಡೆಹೊಸೂರು ಬಳಿ ಜಖಂಗೊಂಡಿರುವ ಕಾರು.

ಕುಶಾಲನಗರ, ಮೇ 5– ಸಮೀಪದ ಗುಡ್ಡೆ ಹೊಸೂರು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರು ಮತ್ತು ಟಿಪ್ಪರ್ ನಡುವೆ ಡಿಕ್ಕಿ ಸಂಭವಿಸಿ, ದಂಪತಿಗೆ ಗಾಯಗಳಾಗಿವೆ.

ಅಪಘಾತದಲ್ಲಿ ಕಾರು ಚಾಲಕ ಕುಶಾಲನಗರದ ಜಾನ್ಸನ್ ಹಾಗೂ ಇವರ ಪತ್ನಿಗೆ ಗಂಭೀರ ಗಾಯಗಳಾಗಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಕಾರಿನ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿದೆ. ಕುಶಾಲನಗರ ಸಂಚಾರಿ ಠಾಣೆ ಪೊಲೀಸ್ ಸ್ಥಳ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಾಶವಾದ ಬಾಳೆ ತೋಟಗಳಿಗೆ ಶಾಸಕ ಗಣೇಶ್ ಪ್ರಸಾದ್ ಭೇಟಿ



ಬೆಟ್ಟಹಳ್ಳಿ ಗ್ರಾಮದ ಬಾಳೆ ತೋಟಗಳಿಗೆ ಶಾಸಕ ಗಣೇಶ್‌ಪ್ರಸಾದ್ ಭೇಟಿ ನೀಡಿ, ಪರಿಶೀಲಿಸಿದರು.

ಗುಂಡ್ಲುಪೇಟೆ: ಬಿರುಗಾಳಿ ಮಳೆಗೆ ನೂರಾರು ಎಕರೆಯ ಬಾಳೆ ಬೆಳೆ ನಾಶವಾಗಿರುವ ಗ್ರಾಮಗಳ ಜಮೀನಿಗೆ ಭಾನುವಾರ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಭೇಟಿ ನೀಡಿ, ರೈತರಿಂದ ಮಾಹಿತಿ ಪಡೆದು ಸೂಕ್ತ ಪರಿಹಾರ ನೀಡುವುದಾಗಿ ಭರವಸೆ ನೀಡಿದರು.

ತಾಲೂಕಿನ ಕಂದೇಗಾಲ, ಬೆಟ್ಟಹಳ್ಳಿ, ಹೊಸೂರು ಮುಂತಾದ ಗ್ರಾಮಗಳ ಬಾಳೆ ತೋಟಗಳಿಗೆ ತೆರಳಿ ಪರಿಶೀಲಿಸಿ ಮಾತನಾಡಿದ ಅವರು, ತಹಸೀಲ್ದಾರ್ ಮಂಜುನಾಥ್ ಅವರಿಂದ ಬೆಳೆ ನಾಶದ ಮಾಹಿತಿ ಪಡೆಯಲಾಗಿದೆ. ಕೂಡಲೇ ಪರಿಹಾರ ನೀಡಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಈಗಾಗಲೇ ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಪರಿಶೀಲಿಸಿದ್ದಾರೆ. ಸರ್ಕಾರದ ನಿಯಮದಂತೆ ಪ್ರಕೃತಿ ವಿಪತ್ತು ನಿಧಿಯಲ್ಲಿ ಪ್ರತಿ ಎಕರೆ ಬೆಳೆ ನಾಶಕ್ಕೆ 10 ಸಾವಿರ ರೂ. ಪರಿಹಾರ ನೀಡಿಸಲಾಗುವುದು ಎಂದು ತಿಳಿಸಿದರು.


ಈ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಬೆಟ್ಟಹಳ್ಳಿ ಕೆಂಪರಾಜು, ರಾಜಶೇಖರ್, ರವಿ ಇತರರು ಇದ್ದರು.

ಸೂಕ್ತ ಪರಿಹಾರಕ್ಕೆ ಆಗ್ರಹ: ಗಾಳಿ ಮಳೆಯಿಂದ ಅಪಾರ ಹಾನಿಗೊಳಗಾದ ಮಾಡ್ರಹಳ್ಳಿ ಸೇರಿದಂತೆ ವಿವಿಧ ಗ್ರಾಮಕ್ಕೆ ಭಾನುವಾರ ಮಾಜಿ ಶಾಸಕ ಸಿ.ಎಸ್. ನಿರಂಜನ ಕುಮಾರ್ ಭೇಟಿ ನೀಡಿ, ಪರಿಶೀಲಿಸಿ ರೈತರಿಂದ ನಷ್ಟದ ಮಾಹಿತಿ ಪಡೆದರು.

ತಾಲೂಕಿನ ವೀರನಪುರ, ಮಳವಳ್ಳಿ ಹಾಗೂ ಮಾಡ್ರಹಳ್ಳಿ ಗ್ರಾಮಗಳಲ್ಲಿ ಸಾವಿರಾರು ಎಕರೆ ಬಾಳೆ ಬೆಳೆ ರೈತರ ಕೈಸೇರುವ ಹೊತ್ತಿಗೆ ಗಾಳಿ, ಮಳೆಯಿಂದ ನೆಲಕ್ಕುರುಳಿವೆ. ಕಟಾವಿನ ಹಂತಕ್ಕೆ ಬಂದಿದ್ದ ಬಾಳೆ ಬೆಳೆ ನಾಶವಾಗಿದ್ದು, ಲಕ್ಷಾಂತರ ರೂ. ನಷ್ಟವಾಗಿದೆ. ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ನಿರಂಜನ ಕುಮಾರ್ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲಾಧ್ಯಕ್ಷ ಸಿ.ಮಹದೇವಪ್ರಸಾದ್, ಮಾಜಿ ಅಧ್ಯಕ್ಷ ಎಲ್.ಸುರೇಶ್, ಮಲ್ಲೇಶ್, ನಾಗೇಂದ್ರ ಹಾಗೂ ಇತರರು ಇದ್ದರು.



ಮಾಡ್ರಹಳ್ಳಿ ಗ್ರಾಮದ ಬಾಳೆ ತೋಟಗಳಿಗೆ ಮಾಜಿ ಶಾಸಕ ನಿರಂಜನಕುಮಾರ್ ಭೇಟಿ ನೀಡಿ, ರೈತರಿಂದ ಮಾಹಿತಿ ಪಡೆದರು.



ರಿಯಾಲಿಟಿ ಶೋವೊಂದರಲ್ಲಿ ಮೆಕ್ಯಾನಿಕ್‌ಗಳ ವೃತ್ತಿಯ ಕುರಿತು ಅವಹೇಳನಕಾರಿ ಸಂಭಾಷಣೆ ಪ್ರಸಾರ ಮಾಡಿರುವ ವಾಹಿನಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಯಳಂದೂರು ದ್ವಿಚಕ್ರ ವಾಹನ ಮಾಲೀಕರ ಸಂಘದಿಂದ ಪೊಲೀಸರಿಗೆ ದೂರು ನೀಡಲಾಯಿತು.

ಬೀದಿಬದಿ ಬಾಡಿ ಹೋದ ವ್ಯಾಪಾರಿಗಳು

ಬಿಸಿಲ ಬದುಕಿನ ವ್ಯಾಪಾರಿಗಳಿಗೆ ತರಕಾರಿ ಮಾರುವುದೇ ದೊಡ್ಡ ಸವಾಲು

ಚಾಮರಾಜನಗರ, ಮೇ.5–ಬೀದಿಬದಿ ವ್ಯಾಪಾರದಲ್ಲೇ ಬದುಕು ಕಟ್ಟಿಕೊಂಡಿರುವ ನಾವು, ಈ ಬಿರು ಬಿಸಿಲಲ್ಲೇ ಬೆಂದು ಬೆಂಡಾಗಬೇಕಿದೆ. ಜೊತೆಗೆ ಮಾರಾಟದ ತರಕಾರಿಯೂ ಬಾಡಿ ಹೋಗದಂತೆ ನೋಡಿಕೊಳ್ಳುವುದೇ ನಮಗೆ ದೊಡ್ಡ ಸವಾಲು.

ಹೌದು... ನಗರದ ಚಿಕ್ಕಂಗಡಿ ಹಾಗೂ ದೊಡ್ಡಂಗಡಿ ಬೀದಿ, ನಗರಸಭೆ, ಮಾರಿಗುಡಿ ದೇವಸ್ಥಾನ ಮುಂಭಾಗದ ಬೀದಿ ಬದಿ ವ್ಯಾಪಾರಿಗಳು, ತಮ್ಮ ಬಿಸಿಲ ಬದುಕಿನ ಬಂಡಿಯ ಕುರಿತು ಆಡಿದ ಮಾತುಗಳಿವು.

ಈ ಬಾರಿಯಷ್ಟು ಬಿಸಿಲ ಬೇಗೆಯನ್ನು ಹಿಂದೆಂದೂ ನಾವು ನೋಡಿರಲಿಲ್ಲ. ನೆರಳಿನ ಕೋಣೆಯಲ್ಲಿ ಕೆಲಸ ಮಾಡುವವರಿಗೆ ಸೆಕೆಯ ಚಿಂತೆಯಾದರೆ, ಸುಡು ಬಿಸಿಲು ನಮ್ಮ ವ್ಯಾಪಾರಕ್ಕೆ ಹೊಡೆತ ಕೊಟ್ಟಿದೆ. ಬಿಸಿಲಿನ ಕಾರಣಕ್ಕೆ ಜನರು ಮಾರುಕಟ್ಟೆಗೆ ಬರುವುದನ್ನು ಕಡಿಮೆ ಮಾಡಿದ್ದಾರೆ. ಅದರಲ್ಲೂ ಬೀದಿಬದಿ ವ್ಯಾಪಾರಿಗಳಲ್ಲಿ ಖರೀದಿ ಮಾಡುವವರು ಕಡಿಮೆಯಾಗಿದ್ದಾರೆ. ಯಾವಾಗ ಈ ಬಿಸಿಲು ಹೋಗಿ ಮಳೆರಾಯ ಕೃಪೆ ತೋರುತ್ತಾನೊ ಎಂದು ಕಾಯುತ್ತಿದ್ದೇವೆ ಎಂದು ತಮ್ಮ ಪರಿಸ್ಥಿತಿ ಬಿಚ್ಚಿಟ್ಟರು.



ಚಾ.ನಗರದಲ್ಲಿ ಛತ್ರಿಯ ನೆರಳಿನಲ್ಲಿ ತರಕಾರಿ ಮಾರುತ್ತಿರುವ ಬೀದಿಬದಿ ವ್ಯಾಪಾರಿಗಳು.

ಸುಳಿಯದ ಗ್ರಾಹಕರು: ಬಿಸಿಲ ಕಾರಣಕ್ಕೆ ಮಾರುಕಟ್ಟೆಯಲ್ಲಿ ಗ್ರಾಹಕರ ಸಂಖ್ಯೆ ತೀವ್ರ ಕಡಿಮೆಯಾಗಿದೆ. ಬಂದರೆ ಬೆಳಗ್ಗೆಯೇ ಬರುತ್ತಾರೆ, ಇಲ್ಲವಾದರೆ ಸಂಜೆ 5 ಗಂಟೆ ಬಳಿಕ ಕಾಣಿಸಿಕೊಳ್ಳುತ್ತಾರೆ. ತೀರಾ ಅನಿವಾರ್ಯವಿದ್ದವರಷ್ಟೇ ಬಿಸಿಲ ಹೊತ್ತಲ್ಲಿ ಬರುತ್ತಾರೆ ಎಂದು ಬೀದಿಬದಿ ವ್ಯಾಪಾರಿ ಮಹೇಶ್ ಬೇಸರ ವ್ಯಕ್ತಪಡಿಸಿದರು.

> **"ಸೊಪ್ಪು, ಹೂವು, ತರಕಾರಿ, ಹಣ್ಣುಗಳ ಮೇಲೆ ಐದತ್ತು ನಿಮಿಷಕ್ಕೊಮ್ಮೆ ನೀರು ಎರಚಿ, ಅವು ಒಣಗದಂತೆ ನೋಡಿಕೊಳ್ಳಬೇಕು. ಅವುಗಳಿಗೆ ನೀರು ಎರಚದಿದ್ದರೆ ಬೇಗನೆ ಬಾಡುತ್ತವೆ. ಗ್ರಾಹಕರು ಬಾಡಿದ ತರಕಾರಿಗಳನ್ನು ಖರೀದಿಸಲು ಹಿಂದೇಟು ಹಾಕುತ್ತಾರೆ. ಹಾಗಾಗಿ, ತರಕಾರಿಗಳು ಬಾಡದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹಾಕಿದ ಬಂಡವಾಳ ಕೈ ಸೇರುವುದಿಲ್ಲ.**
>
> **–ರತ್ನಮ್ಮ, ಬೀದಿಬದಿ ವ್ಯಾಪಾರಿ**

ಬಿಸಿಲಿರಲಿ ಬಿಡಲಿ ನಾವು ಬೆಳಗ್ಗೆಯಿಂದ ಸಂಜೆವರೆಗೆ ಮಾರುಕಟ್ಟೆ ಬಿಟ್ಟು ಕದಲುವಂತಿಲ್ಲ. ಅಂದು ಖರೀದಿಸಿ ತರುವ ತರಕಾರಿಯನ್ನು ಅಂದೇ ಖಾಲಿ ಮಾಡಿದರೆ ನಮಗೂ ಮೂರು ಕಾಸು ಉಳಿಯುತ್ತದೆ. ಇಲ್ಲವಾದರೆ, ಅಂದಿನ ದುಡಿಮೆ ನಷ್ಟವಾದಂತೆ ಎಂದು ಅಳಲು ತೋಡಿಕೊಂಡರು.

ತಂಪು ಪಾನೀಯಗಳಿಗೆ ಬೇಡಿಕೆ: ನಗರದಲ್ಲಿ ಈ ಬಾರಿ 35 ರಿಂದ 40 ಡಿಗ್ರಿ ಸೆಲಿಯಸ್‌ನಷ್ಟು ತಾಪಮಾನ ದಾಖಲಾಗುತ್ತಿದ್ದು, ದಾಹ ತಣಿಸಿಕೊಳ್ಳಲು ಜನರು ತಂಪು ಪಾನೀಯಗಳ ಮೊರೆ ಹೋಗುತ್ತಿದ್ದಾರೆ. ಇದರಿಂದ ಕಬ್ಬಿನ ಹಾಲು, ಎಳನೀರು ಸೇರಿದಂತೆ ತಂಪುಪಾನೀಯಗಳಿಗೆ ಭಾರಿ ಬೇಡಿಕೆ ಬಂದಿದೆ.

ಸಾಮಾನ್ಯವಾಗಿ ಜನರಿಗೆ ಕಾಫಿ, ಟೀ ಕುಡಿಯುವುದು ರೂಢಿ. ಆದರೆ, ಬಿಸಿಲಿನ ತಾಪ ನೆತ್ತಿ ಸುಡುತ್ತಿದ್ದು, ಕಾಫಿ, ಟೀ ಕುಡಿಯಲು ಮನಸ್ಸು ಬರುತ್ತಿಲ್ಲ. ಇದರ ಬದಲು ಜನರು ಹಣ್ಣಿನ ರಸ ಹಾಗೂ ಎಳನೀರು ಕುಡಿದರೆ ಒಳಿತು ಎಂದು ಪಾನೀಯಗಳತ್ತ ಮೊರೆ ಹೋಗಿದ್ದಾರೆ. ಇದರಿಂದ ಸಣ್ಣಪುಟ್ಟ ಹೋಟೆಲ್, ಕಾಂಡಿಮೆಂಟ್ಸ್, ಟೀ ವ್ಯಾಪಾರ ಕಡಿಮೆಯಾಗಿದ್ದು, ಸ್ಥಳೀಯ ಡೇರಿ, ಸ್ಟಾಲ್‌ಗಳು, ಸಣ್ಣಪುಟ್ಟ ಹೋಟೆಲ್, ಬೇಕರಿಗಳಲ್ಲಿ ಮಜ್ಜಿಗೆ, ಹಣ್ಣಿನ ರಸ ಮಾರಾಟ ಜೋರಾಗಿದೆ.

ಮಳೆ ಹಾನಿ ಪ್ರದೇಶಗಳಿಗೆ ಮಾಜಿ ಶಾಸಕ ನರೇಂದ್ರ ಭೇಟಿ

ಹನೂರು: ತಾಲೂಕಿನ ವಿವಿಧೆಡೆ ಬಿದ್ದ ಗುಡುಗು ಸಹಿತ ಮಳೆಗೆ ಹಾನಿಯಾಗಿದ್ದ ಪ್ರದೇಶಗಳಿಗೆ ಮಾಜಿ ಶಾಸಕ ಆರ್. ನರೇಂದ್ರ ಭೇಟಿ ನೀಡಿ, ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನ ಶಾಗ್ಯ ಗ್ರಾಪಂ ವ್ಯಾಪ್ತಿಯ ಬೀರೂಟ ಗ್ರಾಮದ ರತ್ನಮ್ಮ ಅವರಿಗೆ ಸೇರಿದ 3 ಎಮ್ಮೆಗಳು ಸಿಡಿಲಿಗೆ ಬಲಿಯಾಗಿವೆ. ಕುರಟ್ಟಿ ಹೊಸೂರು ಗ್ರಾಪಂ ವ್ಯಾಪ್ತಿಯ ಚೆನ್ನೂರು ಗ್ರಾಮದಲ್ಲೂ ಸಿಡಿಲಿಗೆ 3 ಹಸುಗಳು ಮೃತಪಟ್ಟಿವೆ. ಮಾಲೀಕರಿಗೆ ಸೂಕ್ತ ಪರಿಹಾರ ನೀಡುವಂತೆ ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಲಾಗುವುದು ಎಂದರು.

ಗಾಳಿ ಮಳೆಗೆ ತಾಲೂಕಿನ ಪುಷ್ಪಾಪುರ ಗ್ರಾಮದ ಶಾಂತಿ ಸಗಾಯ ಮೇರಿ ಅವರ ಮನೆ ಸಂಪೂರ್ಣವಾಗಿ ಹಾನಿಯಾಗಿದ್ದು, ಸವರಿಯಮ್ಮ, ನಿರ್ಮಲಾ ಮೇರಿ, ಸೆಲ್ವರಾಜ್, ಲೂರ್ದು ಮೇರಿ, ಮೋಕ್ಷ ರಾಕಿಣಿ, ಮರಿಯಮಂಗಲ ಗ್ರಾಮದ ವೆರೋನಿಕಾ, ದೇವದಾಸ್, ಸಾಯುಮೇರಿ, ಜಯ ರಾಕಿಣಿ, ಕೊಳಂದೆಯಮ್ಮ, ಗೋವಿಂದಮ್ಮ, ಮುನಿಯಮ್ಮ, ಕರಿಯಪ್ಪ ಅವರ ಮನೆಗಳು ಚಾವಣಿ ಹಾರಿಹೋಗಿವೆ. ಈ ಬಗ್ಗೆ ಈಗಾಗಲೇ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.

ಹೂಗ್ಯಂ, ಮಿಣ್ಯಂ ಗ್ರಾಪಂ ವ್ಯಾಪ್ತಿ ಸುಮಾರು ನೂರು ಎಕರೆಗೂ ಹೆಚ್ಚು ಬಾಳೆ ಬೆಳೆ ನೆಲ ಕಚ್ಚಿದೆ. ಹೊನ್ನಮ್ಮಗೆ ಸೇರಿದ ಮನೆ ಗೋಡೆ ಕುಸಿದಿದ್ದು, ಮಾದಮ್ಮ, ದುಂಡಮ್ಮ ಅವರ ಮನೆಯ ಚಾವಣಿ ಜಖಂ ಆಗಿವೆ ಎಂದರು.

ಇದೇ ವೇಳೆ ಶಾಗ್ಯ ಗ್ರಾಪಂ ಅಧ್ಯಕ್ಷ ವೀರತಪ್ಪ, ಮಾಜಿ ಅಧ್ಯಕ್ಷ ಜಾನ್ ಪೌಲ್, ಸದಸ್ಯ ಯೋಗೇಶ್, ತಾಪಂ ಮಾಜಿ ಸದಸ್ಯ ಜವಾದ್ ಅಹಮದ್, ಮುಖಂಡರಾದ ಹುಚ್ಚಿರಪ್ಪ ಬಸವರಾಜು, ಮಲ್ಲೇಶ್ ಹಾಜರಿದ್ದರು.



ಹನೂರು ತಾಲೂಕಿನ ಬೀರೂಟ ಗ್ರಾಮದಲ್ಲಿ ಸಿಡಿಲಿಗೆ ಬಲಿಯಾಗಿರುವ ಎಮ್ಮೆಗಳನ್ನು ಮಾಜಿ ಶಾಸಕ ಆರ್.ನರೇಂದ್ರ ಪರಿಶೀಲಿಸಿ, ಮಾಹಿತಿ ಪಡೆದರು.

ಕೆರೆಯಲ್ಲಿ ಈಜಲು ಹೋಗಿದ್ದ ಆಟೋ ಚಾಲಕ ಸಾವು



ಚಾಮರಾಜನಗರ: ಕೆರೆಯಲ್ಲಿ ಈಜಲು ಹೋಗಿದ್ದ ಆಟೋ ಚಾಲಕ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ನಂಜನಗೂಡು ತಾಲೂಕಿನ ಕೋಣನೂರು ಗ್ರಾಮದಲ್ಲಿ ಭಾನುವಾರ ನಡೆದಿದೆ.

ನಗರದ ರಾಮಸಮುದ್ರ ಬಡಾವಣೆಯ ನಂಜುಂಡಯ್ಯ ಅವರ ಪುತ್ರ ಗುಣ (21) ಮೃತಪಟ್ಟ ಆಟೋ ಚಾಲಕ. ಈತ ಮಧ್ಯಾಹ್ನ ಬಡಾವಣೆಯ 8–9 ಯುವಕರೊಂದಿಗೆ ಆಟೋದಲ್ಲಿ ಕೋಣನೂರು ಕೆರೆಗೆ ತೆರಳಿದ್ದಾನೆ. ಈ ವೇಳೆ ಕೆರೆಯಲ್ಲಿ ಈಜುತ್ತಿದ್ದಾಗ ನೀರಿನಲ್ಲಿ ಮುಳುಗಿದ್ದಾನೆ. ಜೊತೆಯಲ್ಲಿದ್ದ ಯುವಕರು ಈತನನ್ನು ಬದುಕಿಸಲು ಮುಂದಾದರೂ ಸಾಧ್ಯವಾಗದೆ ಮೃತಪಟ್ಟಿದ್ದಾನೆ.

ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ಗೆ ನರ್ಸರಿ ಭಸ್ಮ

ಚಾಮರಾಜನಗರ, ಮೇ.5–ಜಮೀನಿನ ಮೇಲೆ ಹಾದು ಹೋಗಿದ್ದ ವಿದ್ಯುತ್ ತಂತಿಯ ಶಾರ್ಟ್‌ಸರ್ಕ್ಯೂಟ್‌ನಿಂದ ನರ್ಸರಿಗೆ ಬೆಂಕಿ ಬಿದ್ದು ಅಪಾರ ನಷ್ಟವಾಗಿರುವ ಘಟನೆ ತಾಲೂಕಿನ ವಡ್ಡರಹಳ್ಳಿ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಗ್ರಾಮದ ಶಿವಮೂರ್ತಿ ಅವರ ಸಚಿನ್ ಐಟೆಕ್ ನರ್ಸರಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ಗೆ ಸಂಪೂರ್ಣವಾಗಿ ಸುಟ್ಟು ಹೋಗಿದೆ. ಬೆಂಕಿ ಕಿಡಿ ನರ್ಸರಿಗೆ ಅಳವಡಿಸಿದ್ದ ಪ್ಲಾಸ್ಟಿಕ್ ಕವರ್‌ಗೆ ಬಿದ್ದು 5 ಸಾವಿರ ಲೀಟರ್ ಸಾಮರ್ಥ್ಯದ 2 ನೀರಿನ ಟ್ಯಾಂಕ್, 10 ಲಕ್ಷಕ್ಕೂ ಹೆಚ್ಚಿನ ಟೊಮ್ಯಾಟೊ, ಮೆಣಸಿನಕಾಯಿ, ಕೋಸು ಪೈರ್‌ಗಳು, ಫಾಲಿಥಿನ್ ಕವರ್ ಸೇರಿದಂತೆ ಅಪಾರ ನರ್ಸರಿ ಸಾಮಗ್ರಿಗಳು ಸುಟ್ಟು ಹೋಗಿದೆ.

ವಿದ್ಯುತ್ ತಂತಿಗಳು ತಗುಲಿ ಬೆಂಕಿ ಕಾಣಿಸಿಕೊಂಡ ತಕ್ಷಣ ಸೆಸ್ಕ್ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಲಿಲ್ಲ. ನಮ್ಮ ಮನವಿಗೆ ಸ್ಪಂದಿಸಿ, ತಕ್ಷಣ ಲೈನ್ ಆಫ್ ಮಾಡಿದ್ದರೆ ನರ್ಸರಿ ಬೆಂಕಿಗಾಹುತಿಗೆ ಆಗುತ್ತಿರಲ್ಲಿಲ್ಲ. ನರ್ಸರಿ ಸಂಪೂರ್ಣವಾಗಿ ಸುಟ್ಟು ಹೋಗಿದ್ದು, ಸೆಸ್ಕ್ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಪರಿಶೀಲಿಸಿ ಸೂಕ್ತ ಪರಿಹಾರ ನೀಡಬೇಕು ಎಂದು ನರ್ಸರಿ ಮಾಲೀಕ ಶಿವಮೂರ್ತಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಡ್ಡರಹಳ್ಳಿ ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ನರ್ಸರಿಗೆ ಅಳವಡಿಸಿದ್ದ ಪ್ಲಾಸ್ಟಿಕ್ ಹೊದಿಕೆ ಸುಟ್ಟುಹೋಗಿರುವುದು.

ಒಂದನೇ ಪುಟದಿಂದ

ರೇವಣ್ಣ ಎಸ್‌ಐಟಿ ವಶಕ್ಕೆ

ಅವರನ್ನು ಎಸ್‌ಐಟಿ ವಶಕ್ಕೆ ನೀಡಬಾರದು ಎಂದು ವಾದ ಮಂಡಿಸಿದರು. ಎಸ್‌ಐಟಿ ಮನವಿ ಹಾಗೂ ರೇವಣ್ಣ ಪರ ವಕೀಲರ ವಾದವನ್ನು ಆಲಿಸಿದ ನ್ಯಾಯಾಧೀಶರು, ಮೇ 8ರವರೆಗೆ 4 ದಿನ ರೇವಣ್ಣ ಅವರನ್ನು ಎಸ್‌ಐಟಿ ವಶಕ್ಕೆ ನೀಡಿ ಆದೇಶ ಹೊರಡಿಸಿದರು. ರೇವಣ್ಣ ಅವರನ್ನು ನ್ಯಾಯಾಧೀಶರ ನಿವಾಸಕ್ಕೆ ಕರೆತರಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಕೋರಮಂಗಲ ಠಾಣೆ ಪೊಲೀಸರು ನ್ಯಾಯಾಧೀಶರ ನಿವಾಸವಿರುವ ರಸ್ತೆಯಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು. ನ್ಯಾಯಾಧೀಶರ ಮುಂದೆ ರೇವಣ್ಣ ಅವರು, ರಾಜಕೀಯ ಷಡ್ಯಂತ್ರ ನಡೆಸಿ ನನ್ನ ಮೇಲೆ ಆಧಾರ ರಹಿತವಾದ ಕೇಸ್ ಅನ್ನು ಹಾಕಲಾಗಿದೆ. ನನ್ನ ರಾಜಕೀಯ ಜೀವನವನ್ನು ಹಾಳು ಮಾಡಲಾಗಿದೆ ಎಂದು ಕಣ್ಣೀರಿಟ್ಟಿದ್ದಾಗಿ ಮೂಲಗಳು ತಿಳಿಸಿವೆ.

ಬ್ಲೂ ಕಾರ್ನರ್ ನೋಟಿಸ್ ಜಾರಿ

ಅವರಿಗೆ ಬ್ಲೂ ಕಾರ್ನರ್ ನೋಟಿಸ್ ನೀಡಲಾಗಿದೆ ಎಂಬ ವರದಿಗಳ ಬಗ್ಗೆ ಕೇಳಿದಾಗ, ಅವರನ್ನು ಹುಡುಕಲು ಬ್ಲೂ ಕಾರ್ನರ್ ನೋಟಿಸ್ ನೀಡಿರುವುದು ನಿಜ. ಸಂಬಂಧಪಟ್ಟ ಅಧಿಕಾರಿಗಳು ಆತನನ್ನು ಪತ್ತೆಹಚ್ಚುತ್ತಾರೆ. ನಾವು ಅವರನ್ನು ದೇಶಕ್ಕೆ ಮರಳಿ ಕರೆತರಲು ಪ್ರಯತ್ನಿಸುತ್ತಿದ್ದೇವೆ. ಎಲ್ಲಾ ಕಾರ್ಯವಿಧಾನಗಳನ್ನು ಅನುಸರಿಸುವ ಮೂಲಕ ಅವರನ್ನು ಭಾರತಕ್ಕೆ ಕರೆತರಲು ಎಸ್‌ಐಟಿ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಅವರು ಮಾಹಿತಿ ನೀಡಿದರು. ಬ್ಲೂ ಕಾರ್ನರ್ ನೋಟಿಸ್ ಇಂಟರ್‌ಪೋಲ್ ಕಲರ್–ಕೋಡೆಡ್ ನೋಟೀಸ್‌ನ ಒಂದು ಭಾಗವಾಗಿದ್ದು, ಇದು ಜಗತ್ತಿನಾದ್ಯಂತ [ಅಪೇಕ್ಷಿತ ವ್ಯಕ್ತಿಗಳು/ಅಪರಾಧಗಳ ಕುರಿತು] ಮಾಹಿತಿಗಾಗಿ ಎಚ್ಚರಿಕೆಗಳು ಮತ್ತು ವಿನಂತಿಗಳನ್ನು ಹಂಚಿಕೊಳ್ಳಲು ದೇಶಗಳನ್ನು ಸಕ್ರಿಯಗೊಳಿಸುತ್ತದೆ ಮತ್ತು ತನಿಖೆ ನೆರವಾಗುತ್ತದೆ ಎಂದು ಹೇಳಲಾಗಿದೆ.

ಅಂತೆಯೇ ಪ್ರಜ್ವಲ್ ರೇವಣ್ಣ ವಿರುದ್ಧ ಸಿಬಿಐ 'ಬ್ಲೂ ಕಾರ್ನರ್ ನೋಟಿಸ್' ಹೊರಡಿಸುವ ಸಾಧ್ಯತೆಯ ಬಗ್ಗೆಯೂ ಎಸ್‌ಐಟಿ ಅಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಹಿಂದೆಯೇ ಮಾಹಿತಿ ನೀಡಿದ್ದಾರೆ. ಪ್ರಜ್ವಲ್ ವಿರುದ್ಧದ ಪ್ರಕರಣಗಳ ಕುರಿತು ಮುಖ್ಯಮಂತ್ರಿ ಎಸ್‌ಐಟಿ ಅಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದ್ದು, ಈ ವೇಳೆ ಪ್ರಜ್ವಲ್ ಅವರನ್ನು ಬಂಧಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪ್ರಜ್ವಲ್ ನನ್ನು ಬಂಧಿಸಿ ಶೀಘ್ರ ವಾಪಸ್ ಕರೆತರುವುದಾಗಿ ಅಧಿಕಾರಿಗಳು ಭರವಸೆ ನೀಡಿದರು ಎಂದು ಹೇಳಲಾಗಿದೆ.

ಸತತ ನೋಟಿಸ್ ನೀಡಿದರೂ ವಿಚಾರಣೆಗೆ ಪ್ರಜ್ವಲ್ ರೇವಣ್ಣ ಗೈರು: ಇನ್ನು ಲೈಂಗಿಕ ಹಗರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣಗೆ ಮಂಗಳವಾರ ನೋಟಿಸ್, ಗುರುವಾರ ಮತ್ತು ಶುಕ್ರವಾರ ಲುಕ್‌ಔಟ್ ನೋಟಿಸ್ ಜಾರಿ ಮಾಡಿದರೂ ಪ್ರಜ್ವಲ್ ಎಸ್‌ಐಟಿ ಮುಂದೆ ಹಾಜರಾಗಿರಲಿಲ್ಲ. ಏಪ್ರಿಲ್ 27ರಂದು ಜರ್ಮನಿಗೆ ತೆರಳಿದ್ದರು ಎನ್ನಲಾಗಿದ್ದು, ರಾಜತಾಂತ್ರಿಕ ಪಾಸ್ ಪೋರ್ಟ್ ಹೊಂದಿರುವ ಪ್ರಜ್ವಲ್‌ಗೆ ವಿದೇಶಕ್ಕೆ ತೆರಳಲು ಯಾವುದೇ ವೀಸಾ ಅಗತ್ಯವಿಲ್ಲ. ಮೊದಲ ನೋಟೀಸ್ ನೀಡಿದ ನಂತರ ಸಂಸದರು ತಮ್ಮ ವಕೀಲರ ಮೂಲಕ ಎಸ್‌ಐಟಿ ಮುಂದೆ ಹಾಜರಾಗಲು ಒಂದು ವಾರ ಕಾಲಾವಕಾಶ ಕೋರಿದ್ದರು. ಆದರೆ, ಅವರ ಅರ್ಜಿಯನ್ನು ತಿರಸ್ಕರಿಸಲಾಯಿತು.

ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು

ಘೋಷಿಸಿದ್ದಾರೆ ಎಂದು ಸುರ್ಜೇವಾಲ ಹೇಳಿದರು. ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ನೂರಾರು ವಿಡಿಯೋಗಳು ಬಹಿರಂಗಗೊಂಡಿದ್ದು, ತನಿಖೆಗಾಗಿ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಬೇಕಾಗಿದೆ ಎಂದ ಅವರು, ಪ್ರಜ್ವಲ್‌ನ ವಿಡಿಯೋಗಳ ಬಗ್ಗೆ ಮಾಹಿತಿ ಇದ್ದರೂ ಜೆಡಿಎಸ್‌ನೊಂದಿಗೆ ಬಿಜೆಪಿ ಮೈತ್ರಿ ಮಾಡಿಕೊಂಡಿದ್ದು ಯಾಕೆ? ಆರೋಪಿ ವಿದೇಶಕ್ಕೆ ಹೋಗುವುದನ್ನು ವಿದೇಶಾಂಗ ಸಚಿವಾಲಯ ಯಾಕೆ ತಡೆಯಲಿಲ್ಲ? ಪ್ರಜ್ವಲ್ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ಅನ್ನು ಯಾಕೆ ರದ್ದುಗೊಳಿಸಿಲ್ಲ? ಪ್ರಜ್ವಲ್ ವಿರುದ್ಧ ಇಂಟರ್‌ಪೋಲ್ ಮೂಲಕ ಬ್ಲೂ ಕಾರ್ನರ್ ನೋಟೀಸನ್ನು ಯಾಕೆ ನೀಡಲಿಲ್ಲ ಎಂದು ಸುರ್ಜೇವಾಲ ಕಿಡಿಕಾರಿದರು.

ರೇವಣ್ಣ ಬಂಧನ ಸರಿಯಾಗಿದೆ

ನಾವು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು. ಬಿಜೆಪಿ ಮತ್ತು ಜೆಡಿಎಸ್ ನಡುವೆ ಕೇಂದ್ರ ಮಟ್ಟದಲ್ಲಿ ಮೈತ್ರಿ ಆಗಿದೆ. ಪ್ರಜ್ವಲ್ ರೇವಣ್ಣ ಪ್ರಕರಣ ಹಾಗೂ ಶಾಸಕ ರೇವಣ್ಣ ಬಂಧನದ ಬಗ್ಗೆ ಅಮಿತ್ ಷಾ ಮತ್ತು ಹೆಚ್.ಡಿ.ಕುಮಾರಸ್ವಾಮಿ ಏನು ಮಾತನಾಡಿದ್ದಾರೆ ಎಂಬುದು ಗೊತ್ತಿಲ್ಲ. ಉಭಯ ಪಕ್ಷಗಳ ನಡುವೆ ಮೈತ್ರಿ ಮುಂದುವರೆಯುವ ಬಗ್ಗೆ ಪಕ್ಷದ ವರಿಷ್ಠರೇ ತೀರ್ಮಾನ ಮಾಡುತ್ತಾರೆ. ಶಿಕ್ಷಕರ, ಪದವೀಧರ ಕ್ಷೇತ್ರಗಳ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್‌ನೊಂದಿಗೆ ಮೈತ್ರಿ ಮುಂದುವರೆಸುವ ಬಗ್ಗೆ ಕೇಂದ್ರ ನಾಯಕರೊಂದಿಗೆ ಮಾತನಾಡಿ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಅಶೋಕ್ ಹೇಳಿದರು. 2016ರಲ್ಲಿ ಸಿದ್ದರಾಮಯ್ಯ ಅವರೇ ಕಡೂರಿನ ಎಪಿಎಂಸಿ ಮೈದಾನದಲ್ಲಿ ಪ್ರಜ್ವಲ್ ಪರ ಪ್ರಚಾರ ಮಾಡಿದ್ದರು. ಪ್ರಜ್ವಲ್ ಯುವಕರಾಗಿದ್ದು, ಉತ್ತಮವಾಗಿ ಓಡಾಡಿ ಕೆಲಸ ಮಾಡುತ್ತಾರೆ. ಅವರನ್ನು ಗೆಲ್ಲಿಸಿಕೊಡಿ ಎಂದು ಸಿದ್ದರಾಮಯ್ಯ ಮನವಿ ಮಾಡಿದ್ದರು ಎಂದು ಮುಖ್ಯಮಂತ್ರಿಗಳಿಗೆ ಟಾಂಗ್ ನೀಡಿದರು.

ವೀಡಿಯೋ ಹಂಚಿದರೆ ಕಠಿಣ ಕ್ರಮ

ಇದು ಸಂಬಂಧಪಟ್ಟ ಬಲಿಪಶು ಮಹಿಳೆಯರ ಘನತೆ ಹಾಗೂ ಗೌಪ್ಯತೆಗೆ ಕುಂದುಂಟು ಮಾಡುವುದಾಗಿದ್ದು, ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಯಾವುದೇ ಸಂತ್ರಸ್ತರ ಗುರುತನ್ನು ಬಹಿರಂಗಪಡಿಸುವ ಕೆಲಸವನ್ನು ಮಾಧ್ಯಮ ಸಂಸ್ಥೆಗಳು, ವ್ಯಕ್ತಿಗಳು ಅಥವಾ ಸಂಘ–ಸಂಸ್ಥೆಗಳು ಹಾಗೂ ಇನ್ನಾರೇ ಮಾಡಬಾರದು ಎಂದು ಸೂಚಿಸಿರುವ ಅವರು, ಹಾಗೇ ಮಾಡಿದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಯಾವುದೇ ಲೈಂಗಿಕ ಹಿಂಸೆ ಅಥವಾ ಅತ್ಯಾಚಾರ ಪ್ರಕರಣಗಳಲ್ಲಿ ನಾಚಿಕೆಪಟ್ಟುಕೊಳ್ಳಬೇಕಾದದ್ದು, ಹಿಂಜರಿಯಬೇಕಾದ್ದು ಹಾಗೂ ಅವಮಾನ ಎಂದು ಭಾವಿಸಬೇಕಾದ್ದು ಅಂತಹ ಪ್ರಕರಣಗಳಲ್ಲಿ ಅಪರಾಧವೆಸಗಿದ ವ್ಯಕ್ತಿಯೇ ಹೊರತು ಶೋಷಣೆಗೊಳಗಾದವರಲ್ಲ ಎಂಬುದನ್ನು ಅರಿಯಬೇಕು ಮತ್ತು ಸೂಕ್ತ ಸಂವೇದನೆಯಿಂದ ಪ್ರವರ್ತಿಸುವುದು ಸಮಾಜದ ಆರೋಗ್ಯದ ದೃಷ್ಟಿಯಿಂದ ಬಹಳ ಮುಖ್ಯ. ಈ ವಿಚಾರದಲ್ಲಿ ಎಸ್‌ಐಟಿ ಅತ್ಯಂತ ಹೆಚ್ಚಿನ ಸಂವೇದನೆಯಿಂದ ನಡೆದುಕೊಳ್ಳಲಿದೆ. ಈಗಾಗಲೇ ಇದಕ್ಕೆ ಅಗತ್ಯವಿರುವ ವೃತ್ತಿಪರ ಕೌನ್ಸಿಲರ್‌ಗಳು, ವೈದ್ಯರುಗಳು, ಇಂತಹ ಕಾರ್ಯದಲ್ಲಿ ಅನುಭವವಿರುವ ಸಂಸ್ಥೆಗಳ ನೆರವನ್ನು ಎಸ್‌ಐಟಿ ಪಡೆದುಕೊಂಡಿದ್ದು, ಸಾರ್ವಜನಿಕರೂ ಈ ವಿಚಾರದಲ್ಲಿ ಸ್ಪಂದಿಸುವುದು ಅಗತ್ಯ ಎಂದು ಬಿ.ಕೆ.ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಂಬೆ ತೆರವುಗೊಳಿಸದ ಅಧಿಕಾರಿಗಳು

ಎನ್‌ಎಸ್ ರಸ್ತೆ, ಬೋಗಾದಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಮಹಾತ್ಮಗಾಂಧಿ ರಸ್ತೆ, ಲಲಿತಮಹಲ್ ರಸ್ತೆ, ಶಿವಾಜಿ ರಸ್ತೆ, ಬನ್ನಿಮಂಟಪ, ಸಿದ್ದಾರ್ಥ ನಗರ, ವಿದ್ಯಾರಣ್ಯಪುರಂ, ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ, ವಿಶ್ವ ಮಾನವ ಜೋಡಿರಸ್ತೆ, ನಿವೇದಿತ ನಗರ, ಗೋಕುಲಂ, ಬೃಂದಾವನ ಬಡಾವಣೆ, ಯಾದವಗಿರಿ ಸೇರಿದಂತೆ ಮೈಸೂರಿನ ಬಹುತೇಕ ಎಲ್ಲಾ ರಸ್ತೆಗಳಲ್ಲಿ ಮರದ ಕೊಂಬೆಗಳು ಮುರಿದು ಬಿದ್ದಿವೆ. ಕೆಲವೆಡೆ ಪುಟ್‌ಪಾತ್ ಮೇಲೆ ಕೊಂಬೆಗಳು ಅಡ್ಡಲಾಗಿ ಬಿದ್ದಿದ್ದರೆ, ಬಹುತೇಕ ರಸ್ತೆಗಳಲ್ಲಿ ಅರ್ಧಂಬರ್ಧ ಮುರಿದು ನೇತಾಡುತ್ತಿದ್ದು, ಯಾವುದೇ ಸಂದರ್ಭ ನೆಲಕ್ಕೆ ಬೀಳುವ ಸ್ಥಿತಿಯಲ್ಲಿರುವುದರಿಂದ ಪ್ರಾಣಾಪಾಯ ಉಂಟಾಗುವ ಸಾಧ್ಯತೆ ಇದೆ. ಫುಟ್‌ಪಾತ್ ಮೇಲೆ ಕೊಂಬೆಗಳು ಬಿದ್ದಿರುವುದರಿಂದ ಪಾದಚಾರಿಗಳು ರಸ್ತೆಗಿಳಿದು ಓಡಾಡಬೇಕಾಗಿದೆ.

ಉಳಿದಂತೆ ಮೈಸೂರಿನ ಬಹುತೇಕ ಎಲ್ಲಾ ಉದ್ಯಾನವನಗಳಲ್ಲಿ ಮರಗಳು ಉರುಳಿ ಬಿದ್ದಿರುವುದರಿಂದ ವಾಯು ವಿಹಾರ ಮಾಡಲು ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ. ಪಾಲಿಕೆ ಅಭಯ ತಂಡ ಶುಕ್ರವಾರ ರಾತ್ರಿ ಮತ್ತು ಶನಿವಾರ ಬೆಳಿಗ್ಗೆ ಕೆಲವೆಡೆ ಸಂಚಾರಕ್ಕೆ ಅಡ್ಡಿಯಾಗಿದ್ದ ಮರ ಮತ್ತು ಕೊಂಬೆಗಳನ್ನು ತೆರವುಗೊಳಿಸಿವೆಯಾದರೂ ಉಳಿದಂತೆ ಹಲವೆಡೆ ಹಾಗೆಯೇ ಫುಟ್‌ಪಾತ್‌ಗಳಲ್ಲಿ ಬಿದ್ದಿವೆ. ಭಾನುವಾರ ಎಲ್ಲಿಯೂ ತೆರವು ಕಾರ್ಯಾಚರಣೆ ಮಾಡಲಿಲ್ಲ. ಅಲ್ಲಲ್ಲಿ ತುಂಡರಿಸಿ ಬಿದ್ದಿರುವ ವಿದ್ಯುತ್ ತಂತಿ, ಟೆಲಿಫೋನ್ ಮತ್ತು ಕೇಬಲ್ ನೆಟ್‌ವರ್ಕ್ ವೈಯರ್‌ಗಳು, ವಿದ್ಯುತ್ ಕಂಬಗಳನ್ನು ಸರಿಪಡಿಸಲಿಲ್ಲ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಡಿತಗೊಂಡಿದ್ದ ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ಬಹುತೇಕ ಯಶಸ್ವಿಯಾಗಿದ್ದಾರಾದರೂ, ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ರಿಪೇರಿ ಮಾಡುವ ಬಗ್ಗೆ ಕ್ರಮ ವಹಿಸುತ್ತಿದ್ದಾರೆ.

2ನೇ ಹಂತದ ಬಹಿರಂಗ ಪ್ರಚಾರ ಅಂತ್ಯ

ಮಹಿಳೆಯರ ಮೇಲೆ ಅತ್ಯಾಚಾರವೆಸಗಿದ್ದಾರೆ ಎಂದು ಆರೋಪಿಸಿರುವ ರಾಹುಲ್ ಗಾಂಧಿ, ಮಾಸ್ ಅತ್ಯಾಚಾರಿ ಪರವಾಗಿ ಮತ ಕೇಳಿದ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಮಹಿಳೆಯರ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದ್ದರು.

ಪ್ರಜ್ವಲ್, ನೂರಾರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿದ್ದು, ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿದೆ. ಏಪ್ರಿಲ್ 26 ರಂದು ಚುನಾವಣೆ ನಡೆದ ಹಾಸನ ಕ್ಷೇತ್ರದಿಂದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ ಸ್ಪರ್ಧಿಸಿದ್ದಾರೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಜೆಡಿಎಸ್, ಬಿಜೆಪಿ ನೇತೃತ್ವದ ಎನ್‌ಡಿಎ ಸೇರಿತ್ತು. ಬಿಜೆಪಿ, ಮಾರ್ಚ್ 1 ರಂದು ಬೆಂಗಳೂರಿನ ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟ, ಏಪ್ರಿಲ್ 18 ರಂದು ಹುಬ್ಬಳ್ಳಿಯ ಕಾಲೇಜು ಕ್ಯಾಂಪಸ್‌ನಲ್ಲಿ 23 ವರ್ಷದ ನೇಹಾ ಹಿರೇಮಠ್ ಹತ್ಯೆ ಪ್ರಕರಣ, ಪಾಕಿಸ್ತಾನ ಪರ ಘೋಷಣೆ ಪ್ರಕರಣಗಳನ್ನು ಉಲ್ಲೇಖಿಸಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದೆ. ಜಿಲ್ಲಾ ಕೇಂದ್ರವಾದ ಬೆಳಗಾವಿಯಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೊದಲ ಹಂತದಲ್ಲಿ ಎಂಟರಿಂದ ಒಂಬತ್ತು ಸ್ಥಾನ ಗೆಲ್ಲುತ್ತೇವೆ, ಎರಡನೇ ಹಂತದಲ್ಲಿ 10 ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ ಎಂದು ಹೇಳಿದ್ದಾರೆ.

ಮಾತೃಭಾಷೆಯಲ್ಲಿ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ನೀಡಬೇಕು

ವಿಮರ್ಶಕ ಪ್ರೊ. ಸಿ.ಪಿ.ಸಿದ್ಧಾಶ್ರಮ ಒತ್ತಾಯ



ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ನಡೆದ ಸಾಹಿತ್ಯ ಪರಿಷತ್ತಿನ 109ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಟಿ.ಎನ್.ನಾಗರತ್ನ, ಸಿ.ಚಾಮಶೆಟ್ಟಿ, ಪ್ರೊ.ಎಸ್.ರಾಮಪ್ರಸಾದ್ ಹಾಗೂ ಇಂದಿರಾ ಪಾಟೀಲ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಮೇ.5(ಎಂಟಿವೈ)– ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ನೀಡುವುದರೊಂದಿಗೆ ಕನ್ನಡವನ್ನು ಆಡಳಿತ ಭಾಷೆಯಾಗಿ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ವಿಮರ್ಶಕ ಪ್ರೊ.ಸಿ.ಪಿ.ಸಿದ್ಧಾಶ್ರಮ ಒತ್ತಾಯಿಸಿದ್ದಾರೆ.

ಮೈಸೂರಿನ ವಿಜಯನಗರದ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಪರಿಷತ್ತಿನ 109ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರಕವಿ ಕುವೆಂಪು ಸೇರಿದಂತೆ ಬಹುತೇಕ ಸಾಹಿತಿಗಳು ಪ್ರಾಥಮಿಕ ಶಿಕ್ಷಣವನ್ನು ಕನ್ನಡದಲ್ಲಿಯೇ ನೀಡಬೇಕು ಎಂದು ಅಭಿಪ್ರಾಯಪಟ್ಟಿದ್ದರೂ ಇದುವರೆಗೂ ಕನ್ನಡ ಮಾಧ್ಯಮದ ಕಡ್ಡಾಯ ಶಿಕ್ಷಣ ಅನುಷ್ಠಾನಗೊಳಿಸಿಲ್ಲ. ಇದಕ್ಕೆ ರಾಜಕಾರಣಿಗಳು ಹಾಗೂ ಅಧಿಕಾರಿಗಳಿಗೆ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣಿಸುತ್ತಿದೆ. 1ನೇ ತರಗತಿಯಿಂದ 7ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರಕ್ಕೆ ಹಕ್ಕೊತ್ತಾಯ ಮಾಡಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಬಳಸಲಾಗುತ್ತಿರುವಂತೆ ವಿಧಾನಸೌಧದಲ್ಲಿಯೂ ಆಡಳಿತ ಭಾಷೆಯಾಗಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕು. ಅಧಿಕಾರಿಗಳು, ರಾಜಕಾರಣಿಗಳು ಕನ್ನಡತನವನ್ನು ಮೆರೆಯುವಂತಾಗಬೇಕು ಎಂದು ಆಗ್ರಹಿಸಿದರು.

ಕನ್ನಡ ಭಾಷೆ ಬೆಳವಣಿಗೆಗೆ ಪ್ರತಿಯೊಬ್ಬರೂ ಶ್ರಮಿಸಬೇಕು. ಪತ್ರಿಕೆಗಳನ್ನು ಕೊಂಡು ಓದುವ, ಪುಸ್ತಕಗಳನ್ನು ಖರೀದಿಸುವ ಕಡೆಗೆ ಗಮನ ಹರಿಸುವ ಮೂಲಕ ಕನ್ನಡ ಮತ್ತು ಕನ್ನಡ ಬರಹಗಾರರನ್ನು ಪ್ರೋತ್ಸಾಹಿಸಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ಭಾಷಿಕರು ಬೇರೆ ಭಾಷೆ ಆಡಳಿತದ ಅಧೀನದಲ್ಲಿದ್ದರು. ಆ ವೇಳೆ ಕನ್ನಡ ಕಟ್ಟುವ ಕಾರ್ಯಕ್ಕೆ ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ನೆರವಾದರು. ಕನ್ನಡ ಸಾಹಿತ್ಯ ಪರಿಷತ್ತು ಏಕತೆ ಹಾಗೂ ಅಸ್ಮಿತೆಯ ಸಂಕೇತ. ಸಾಹಿತ್ಯ ಪರಿಷತ್ತು ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಅನೇಕ ಮಹನೀಯರು, ಹೋರಾಟಗಾರರು ಪರಿಷತ್ತಿನ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ ಎಂದರು.

ನಾಡಿನ ರಾಜಕಾರಣಿಗಳಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತೆ ದೂರದೃಷ್ಟಿ ಇರಬೇಕು. ನಾಲ್ವಡಿಯವರನ್ನು ಸ್ಮರಿಸದೇ ರಾಜ್ಯದ ಶಿಕ್ಷಣ, ಅಭಿವೃದ್ಧಿ, ಕೃಷಿ, ಕೈಗಾರಿಕೆ ಬೆಳವಣಿಗೆ, ಸಾಮಾಜಿಕ ಸುಧಾರಣೆಯ ಬಗ್ಗೆ ಮಾತನಾಡಲು ಸಾಧ್ಯವಿಲ್ಲ. ಅವರಿಂದಲೇ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಕಲೆ, ನೆಲ, ಜಲದ ಸಂರಕ್ಷಣೆ ಹಾಗೂ ಬಲವರ್ಧನೆಗೆ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ರಾಜ್ಯದಲ್ಲಿ ನೂರಾರು ಶಾಲಾ–ಕಾಲೇಜುಗಳನ್ನು ಸ್ಥಾಪನೆ ಮಾಡಿದ ನಾಲ್ವಡಿ ಅವರು, ನಾಡಿಗೆ ಬೆಳಕು ಬೇಕೆಂದರೆ ವಿಶ್ವವಿದ್ಯಾಲಯ ಇರಬೇಕೆಂದು ಪರಿಷತ್ತು ಸ್ಥಾಪನೆಯಾದ ಮರುವರ್ಷವೇ ಮೈಸೂರು ವಿಶ್ವವಿದ್ಯಾಲಯ ಸ್ಥಾಪಿಸಿದರು. ದಲಿತರು, ಆದಿವಾಸಿಗಳು, ಶ್ರಮಿಕರಿಗೆ ಶಿಕ್ಷಣ ಪಡೆಯಲು ಸಾಧ್ಯವಾಯಿತು ಎಂದು ತಿಳಿಸಿದರು.

ಇದೇ ವೇಳೆ ಹಿರಿಯ ಸಾಹಿತಿಗಳಾದ ಪ್ರೊ.ಎಸ್.ರಾಮಪ್ರಸಾದ್, ಟಿ.ಎನ್.ನಾಗರತ್ನ, ಸಿ.ಚಾಮಶೆಟ್ಟಿ, ಇಂದಿರಾ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಬಳಿಕ ನಂತರ ಕವಿಗಳಿಂದ ಕವಿಗೋಷ್ಠಿ ಮತ್ತು ಗಾಯಕರಿಂದ ಕನ್ನಡ ಗೀತ ಗಾಯನ ನೆರವೇರಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಪ್ರೊ ವಿಜಯಕುಮಾರಿ ಎಸ್. ಕರೀಕಲ್, ಕಸಾಪ ಗೌರವ ಕಾರ್ಯದರ್ಶಿ ಲತಾ ಮೋಹನ್, ಡಾ.ಚೀಲೂರು ಚಂದ್ರಶೇಖರ್, ಖಜಾಂಚಿ ಜಿ.ಪ್ರಕಾಶ್, ಜಂಟಿ ಕಾರ್ಯದರ್ಶಿ ಕೆ. ಕೆಂಪಣ್ಣ, ಸಂಘಟನಾ ಕಾರ್ಯದರ್ಶಿ ಮೈ.ನಾ.ಲೋಕೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಕ್ಕಳ ಬೇಸಿಗೆ ಶಿಬಿರಗಳು ಜ್ಞಾನಾರ್ಜನೆ ಕೇಂದ್ರಗಳಾಗಬೇಕು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಅಭಿಮತ



ಮೈಸೂರು ಕಲಾಮಂದಿರದಲ್ಲಿ ನಟನ ಮೈಸೂರು ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಡೆದ ರಜಾಮಜಾ ಸಮಾರೋಪ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ ಮಾತನಾಡಿದರು.

ಮೈಸೂರು, ಮೇ 5(ಎಸ್‌ಪಿಎನ್)– ಮಕ್ಕಳ ಬೇಸಿಗೆ ಶಿಬಿರಗಳು ಹಳೆಬೇರು, ಹೊಸ ಚಿಗುರು ಸಂಧಿಸುವ ವೇದಿಕೆಯಾಗಬೇಕು ಮತ್ತು ಜ್ಞಾನಾರ್ಜನೆಯ ಕೇಂದ್ರಗಳಾಗಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ನಟನ ಮೈಸೂರು ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಡೆದ ರಜಾಮಜಾ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಚಿಕ್ಕ ವಯಸ್ಸಿನಿಂದಲೇ ಮಕ್ಕಳು ನಟನೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ವೃತ್ತಿಪರ ರಂಗಭೂಮಿ ಯಶಸ್ವಿಗೆ ಗಂಭೀರ ಕಲಿಕೆ ಮುಖ್ಯ. ನಟನೆಯಲ್ಲಿ ಮುಕ್ತರಾಗಿರಬೇಕು. ಅಭಿನಯವೆಂಬುದು ಸುಲಭದ ಮಾತಲ್ಲ. ಪರಕಾಯ ಪ್ರವೇಶಕ್ಕೆ ಪಾತ್ರಗಳನ್ನು ಅರಿಯುವ ತಾಳ್ಮೆ ಬೆಳೆಸಿಕೊಳ್ಳಬೇಕು ಎಂದ ಅವರು, ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಸ್ವತಂತ್ರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬೆಳೆಸಿಕೊಳ್ಳಲು ಉತ್ತಮ ವೇದಿಕೆಯಾಗುತ್ತವೆ ಎಂದರು.

ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಇಲಾಖೆ ಸದಾ ಪ್ರೋತ್ಸಾಹಿಸುತ್ತದೆ. ಮಕ್ಕಳ ಕಲಾತ್ಮಕ ಚಟುವಟಿಕೆಗಳ ಬೆಳವಣಿಗೆಗೆ ಸೂಕ್ತ ಮಾರ್ಗದರ್ಶನವೂ ಇದೆ. ಈ ವೇದಿಕೆ ಪ್ರತಿಯೊಬ್ಬರು ಸದುಪಯೋಗಪಡಿಸಿಕೊಳ್ಳಬೇಕು ಸಲಹೆ ನೀಡಿದರು.

ಮಂಡ್ಯ ರಮೇಶ್ ಮಾತನಾಡಿ, ರಜಾಮಜಾ ಬೇಸಿಗೆ ಶಿಬಿರ 20x30 ಜಾಗದಲ್ಲಿ ಆರಂಭವಾಯಿತು. ಇಂದು ಕಲಾಮಂದಿರ ತುಂಬುವಂತಹ ಶಿಬಿರವಾಗಿ ಬೆಳೆದಿದೆ. ಈ ಶಿಬಿರದಲ್ಲಿ ಮಕ್ಕಳು, ಹಾಡುತ್ತಾರೆ. ಕುಣಿಯುತ್ತಾರೆ. ನಾಟಕ, ರಂಗಗೀತೆಗಳ ಕಲಿಕೆ, ಪೌರಾಣಿಕ ನಾಟಕಗಳ ಪ್ರದರ್ಶನ ಸೇರಿದಂತೆ ಹಲವು ಆಯಾಮಗಳಲ್ಲಿ ಈ ಶಿಬಿರದಲ್ಲಿ ಮಕ್ಕಳು ಕಲಿತಿದ್ದಾರೆ. ಈ ಶಿಬಿರವು ಮಕ್ಕಳ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸುವ ವೇದಿಕೆಯಾಗಿದೆ ಎಂದರು.

ಈ ವೇಳೆ ರಂಗಗೀತೆ, ಕಂಸಾಳೆ, ಯಕ್ಷಗಾನ, ಕಂಗೀಲು, ಡೊಳ್ಳು, ಮಲ್ಲಗಂಬ, ಹಗ್ಗದ ಮಲ್ಲಗಂಬ ಪ್ರದರ್ಶನ ನೀಡಿ ನೆರೆದವರನ್ನು ರಂಜಿಸಿದರು. ಮಕ್ಕಳಿಂದ 6 ನಾಟಕಗಳು ಪ್ರದರ್ಶನಗೊಂಡವು. ಪೌರಾಣಿಕ ನಾಟಕ ಪ್ರಸ್ತುತಪಡಿಸಿದ್ದು ಆಕರ್ಷಣೀಯವಾಗಿತ್ತು. ಶಿಬಿರದಲ್ಲಿ ಭಾಗವಹಿಸಿದ್ದ 300 ಮಕ್ಕಳು ವಿವಿಧ ತಂಡಗಳ ಮೂಲಕ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು.

ಅಲ್ಲದೆ, ನಟನ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಎನ್.ಸುಬ್ರಹ್ಮಣ್ಯ ಗೌರವಾರ್ಥ ವೃತ್ತಿ ರಂಗಭೂಮಿ ಕಲಾವಿದೆ ಎಚ್.ಟಿ. ಇಂದಿರಮ್ಮ ಅವರಿಗೆ 'ನಟನ ಪುರಸ್ಕಾರ– 2024' ಪ್ರಶಸ್ತಿ ಪ್ರದಾನ ಮಾಡಲಾಯಿತು. ವೇದಿಕೆಯಲ್ಲಿ ನಟರಾದ ಕುರಿ ಪ್ರತಾಪ್, ಸುದರ್ಶನ್ ರಂಗಪ್ರಸಾದ್, ಸಂಗೀತಾ ಭಟ್, ನಟನದ ಅಧ್ಯಕ್ಷ ಕೆ.ಎಸ್.ಆನಂದ್ ಬಾಬು, ನಟನ ರಂಗಶಾಲೆಯ ಮಂಡ್ಯ ರಮೇಶ್ ಭಾಗವಹಿಸಿದ್ದರು.

ಕರ್ನಾಟಕದಲ್ಲಿ ಮಧ್ಯಂತರ ವಿಧಾನಸಭೆ ಚುನಾವಣೆ

ಸಿ.ಸಿ.ಪಾಟೀಲ್ ಭವಿಷ್ಯ

ಗದಗ, ಮೇ 5– ಲೋಕಸಭಾ ಚುನಾವಣೆ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಇಬ್ಭಾಗವಾಗುತ್ತದೆ. ಕಾಂಗ್ರೆಸ್ ಮುಕ್ತ ಭಾರತ ಆಗುತ್ತೆ ಸೋಲಿನ ಹೊಣೆ ಹೊತ್ತು ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಸಂಗ ಬರುತ್ತೆ ಇದರಿಂದ ರಾಜ್ಯ ವಿಧಾನ ಸಭೆಗೆ ಯಾವುದೇ ಸಂದರ್ಭದಲ್ಲಿ ಮಧ್ಯಂತರ ಚುನಾವಣೆ ಬರಬಹುದು. ಚುನಾವಣೆ ಎದುರಿಸಲು ನಾವು ಸಿದ್ಧರಿದ್ದೇವೆ ಎಂದು ಮಾಜಿ ಸಚಿವ ಸಿ.ಸಿ.ಪಾಟೀಲ್ ಹೇಳಿದರು.

ಗದಗನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಡವರಿಗೆ ಭಾಗ್ಯಗಳನ್ನು ಕೊಡುವುದಕ್ಕೆ ವಿರೋಧವಿಲ್ಲ. ಇದಕ್ಕೆ ತಗಲುವ ವೆಚ್ಚ ಎಷ್ಟು ಎಂದು ಸಿದ್ದರಾಮಯ್ಯ ನೋಡಬೇಕಿತ್ತು. ಬಸವರಾಜ ಬೊಮ್ಮಾಯಿಯವರ ಅವಧಿ ಮುಗಿದಾಗ 25 ಸಾವಿರ ಕೋಟಿ ರೂಪಾಯಿ ಅನುದಾನ ರಾಜ್ಯದ ಖಜಾನೆಯಲ್ಲಿತ್ತು. ಅದು ಖಾಲಿಯಾಗಿ 1 ಲಕ್ಷ 85 ಸಾವಿರ ಕೋಟಿ ಸಾಲ ಮಾಡಿದ್ದಾರೆ. ಬಸ್ ಫ್ರೀ ಆದರೆ, 10 ಬಸ್ ಓಡುವಲ್ಲಿ ನಾಲ್ಕು ಬಸ್ ಓಡುತ್ತಿವೆ. ಕೆಟ್ಟ ಬಸ್‌ಗಳನ್ನು ರಿಪೇರಿ ಮಾಡಲು ಹಣ ಇಲ್ಲ. ಸಿಬ್ಬಂದಿ ಸಂಬಳಕ್ಕೆ ಹಣ ಇಲ್ಲ. ಶಾಸಕರ ಸಂಬಳವೂ 2–3 ತಿಂಗಳಿಗೊಮ್ಮೆಯಾಗುತ್ತಿದೆ. ಸರ್ಕಾರದ ಖಜಾನೆ ಖಾಲಿಯಾಗಿದೆ. ರಾಜ್ಯದ ಆರ್ಥಿಕ ಸ್ಥಿತಿ ಬಗ್ಗೆ ಸರ್ಕಾರ ಶ್ವೇತಪತ್ರ ಹೊರಡಿಸಲಿ ಎಂದರು.

ಬಿಜೆಪಿ 400 ಸ್ಥಾನಗಳತ್ತ ಮುನ್ನಡೆ: ಅಮಿತ್ ಶಾ

ಧರ್ಮಾವರಂ, ಮೇ 5– ಲೋಕಸಭಾ ಚುನಾವಣೆಯ ಮೂರನೇ ಹಂತದ ಮತದಾನ ಮುಗಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು 400 ಸ್ಥಾನಗಳತ್ತ ಮುಂದುವರೆಯಲಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ವಿಶ್ವಾಸ ವ್ಯಕ್ತಪಡಿಸಿದರು. ಚುನಾವಣೆಯ ಮೊದಲ ಎರಡು ಹಂತಗಳಲ್ಲಿ ಪಕ್ಷವು 100 ಸ್ಥಾನಗಳನ್ನು ದಾಟಿದೆ ಎಂದು ಅವರು ಅಭಿಪ್ರಾಯಪಟ್ಟರು.

'ಇಂಡಿಯಾ' ಕೂಟದ ಬಗ್ಗೆ ಲೇವಡಿ ಮಾಡಿದ ಅವರು, ರಾಹುಲ್ ಗಾಂಧಿ ಸೇರಿದಂತೆ ಇಂಡಿಯಾ ಕೂಟದ ಯಾವ ನಾಯಕನೂ ದೇಶವನ್ನು ಮುನ್ನಡೆಸಲು ಅರ್ಹರಲ್ಲ. ಇಡೀ ದೇಶ ಮೋದಿ ಅವರನ್ನು ಮೂರನೇ ಬಾರಿ ಪ್ರಧಾನಿ ಮಾಡಲು ತೀರ್ಮಾನಿಸಿದೆ ಎಂದು ಹೇಳಿದರು.

ಶ್ರೀ ಸತ್ಯಸಾಯಿ ಜಿಲ್ಲೆಯ ಧರ್ಮಾವರಂನಲ್ಲಿ ಚುನಾವಣಾ ರ್‍ಯಾಲಿ ನಡೆಸಿದ ಅವರು, ಆಂಧ್ರಪ್ರದೇಶದ ವೈಎಸ್‌ಆರ್ ಕಾಂಗ್ರೆಸ್ ಭ್ರಷ್ಟಾಚಾರ ಮತ್ತು ಅಪರಾಧಗಳನ್ನು ಬೆಂಬಲಿಸುತ್ತಿದೆ ಎಂದು ಆರೋಪಿಸಿದರು.

ಬರ ಸಮೀಕ್ಷೆ ಲೋಪ ಸರಿಪಡಿಸುವಂತೆ ರೈತ ಸಂಘಟನೆ ಆಗ್ರಹ

ಮೇ 14ರಂದು ಸಿಎಂ ಭೇಟಿ ಮಾಡಿ ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ 5(ಎಂಟಿವೈ)– ರಾಜ್ಯದಲ್ಲಿ ಬರ ಪರಿಹಾರ ನೀಡಲು ಮಾಡಿರುವ ಸಮೀಕ್ಷೆಯಲ್ಲಾಗಿರುವ ಲೋಪ ಸರಿಪಡಿಸುವಂತೆ ಮೇ 14ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸುವುದಾಗಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 70 ಲಕ್ಷ ರೈತರು ಕೃಷಿಯನ್ನೇ ಅವಲಂಬಿಸಿದ್ದಾರೆ. ರಾಜ್ಯದ 224 ತಾಲೂಕುಗಳನ್ನು ಬರ ಪೀಡಿತ ತಾಲೂಕು ಎಂದು ಘೋಷಿಸಲಾಗಿದೆ ಆದರೆ, ಬರ ಸಮೀಕ್ಷೆಯಲ್ಲಿ ಕೇವಲ 27 ಲಕ್ಷ ರೈತರಿಗೆ ಮಾತ್ರ ಬರ ಪರಿಹಾರ ವಿತರಿಸಲು ಉದ್ದೇಶಿಸಲಾಗಿದೆ. ಇದರಿಂದ 40 ಲಕ್ಷ ರೈತರಿಗೆ ಬರ ಪರಿಹಾರ ನೀಡಲು ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರಸ್ತುತ ಬರ ಪರಿಹಾರ ಕೇವಲ 2 ಸಾವಿರ ರೂ. ನೀಡುವುದಾಗಿ ಸರ್ಕಾರ ತಿಳಿಸಿದೆ. ಆದರೆ ರೈತರಿಗೆ 500 ರಿಂದ 600 ರೂ., ಮಾತ್ರ ಬಂದಿದೆ. ಪ್ರತಿ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್‌ವರೆಗೆ ಪರಿಹಾರ ನೀಡಬಹುದು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿ ರೈತರಿಗೆ ನ್ಯಾಯ ಒದಗಿಸುವಂತೆ ಕೋರುವುದಾಗಿ ತಿಳಿಸಿದರು.

ಎರಡು ದಿನ ಹಿಂದಿನ ಮಳೆ, ಗಾಳಿ ಅಬ್ಬರಕ್ಕೆ ಬಾಳೆ, ಮಾವು ತರಕಾರಿ ಇನ್ನಿತರ ಬೆಳೆಗಳು ನೆಲ ಕಚ್ಚಿವೆ. ಅಧಿಕಾರಿಗಳು ತಕ್ಷಣವೇ ಬೆಳೆ ನಾಶ ನಷ್ಟದ ಅಂದಾಜು ಸಮೀಕ್ಷೆ ಮಾಡಿ ಪರಿಹಾರ ವಿತರಿಸಬೇಕು. ಬಿರುಗಾಳಿ, ಮಳೆಗೆ ಫಸಲು ನಷ್ಟವಾಗಿರುವ ರೈತರ ಸಂಪೂರ್ಣ ಸಾಲ ಮನ್ನಾ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಲೋಕಸಭಾ ಚುನಾವಣಾ ಕಣದಲ್ಲಿರುವ ಶೇ.40ರಷ್ಟು ಅಭ್ಯರ್ಥಿಗಳು ಕ್ರಿಮಿನಲ್ ಹಿನ್ನೆಲೆ ಹಾಗೂ ಬಂಡವಾಳಶಾಹಿ, ಕೋಟ್ಯಾಧಿಪತಿಗಳಿದ್ದಾರೆ. ಇವರು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಆಸ್ತಿಗಳ ದಾಖಲಾತಿಗಳು ಮಂಕುಬೂದಿ ಎರಚಿ ವಂಚಿಸುವಂತಿವೆ. ಆದ್ದರಿಂದ ತಕ್ಷಣವೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಿ ತನಿಖೆ ನಡೆಸಿ. ತಪ್ಪಿತಸ್ಥರನ್ನು ಚುನಾವಣೆಯ ಸ್ಥಾನದಿಂದ ಹತ್ತು ವರ್ಷಗಳು ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿ ಅಂಗವಾಗಿ ಮೈಸೂರಿನಲ್ಲಿ ಮೇ9ರಂದು ಕಾಯಕ ನಿಷ್ಠೆ ಪ್ರಾಮಾಣಿಕ ಕಾಯಕ ಮಾಡಿರುವ ವ್ಯಕ್ತಿಗಳನ್ನು ಗುರುತಿಸಿ ಕಾಯಕ ಶ್ರೇಷ್ಠ ಪ್ರಶಸ್ತಿ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಶಿವಶಂಕರ್ ಬಿಲಿಗೆರೆ, ಕಾಟೂರ್ ಮಹದೇವ ಸ್ವಾಮಿ, ಸಾತಗಳ್ಳಿ ಬಸವರಾಜ್, ಸುನಿಲ್ ಕುಮಾರ್ ಇದ್ದರು.

ಮನಸ್ವಿನಿ, ಮೈತ್ರಿ ಯೋಜನೆ ಅನುಷ್ಠಾನಕ್ಕೆ ಶ್ರೀನಿವಾಸ್ ಪ್ರಸಾದ್ ಕಾರಣ

ಪ್ರಸಾದ್ ಶ್ರದ್ಧಾಂಜಲಿ ಸಭೆಯಲ್ಲಿ ಮೈಸೂರು ವಿವಿ ಪ್ರಾಧ್ಯಾಪಕ ಡಾ.ರಂಗಸ್ವಾಮಿ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಭಾನುವಾರ ನಡೆದ ವಿ.ಶ್ರೀನಿವಾಸ್ ಪ್ರಸಾದ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಹಿರಿಯ ಕ್ರೀಡಾಪಟುಗಳು ಪಾಲ್ಗೊಂಡು ಗೌರವ ಸಮರ್ಪಿಸಿದರು.

ಮೈಸೂರು,ಮೇ.5(ಎಂಟಿವೈ)– ರಾಜ್ಯದಲ್ಲಿ ಜಾರಿಯಲ್ಲಿರುವ ಮನಸ್ವಿನಿ ಹಾಗೂ ಮೈತ್ರಿ ಯೋಜನೆ ಅನುಷ್ಠಾನಗೊಳಿಸಲು ದಿ.ವಿ.ಶ್ರೀನಿವಾಸ್ ಪ್ರಸಾದ್ ಕಾರಣರಾಗಿದ್ದಾರೆ ಎಂದು ರಾಜ್ಯ ಯೋಜನಾ ಆಯೋಗದ ಮಾಜಿ ಸದಸ್ಯ, ಮೈಸೂರು ವಿವಿ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕ ಡಾ.ರಂಗಸ್ವಾಮಿ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಭಾನುವಾರ ಮೈಸೂರು ಅಥ್ಲೆಟಿಕ್ಸ್ ಕ್ಲಬ್, ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಸಂಸದ ವಿ. ಶ್ರೀನಿವಾಸಪ್ರಸಾದ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಈ ಹಿಂದೆ ರಾಜ್ಯ ಸರ್ಕಾರದಲ್ಲಿ ಕಂದಾಯ ಸಚಿವರಾಗಿ ವಿ.ಶ್ರೀನಿವಾಸ್ ಪ್ರಸಾದ್ ಅವರು ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ 40 ರಿಂದ 65 ವರ್ಷದ ಅವಿವಾಹಿತ ಮಹಿಳೆಯರಿಗೆ ಹಾಗೂ ಮಂಗಳಮುಖಿಯರಿಗೆ ಜೀವನ ಭದ್ರತೆ ಒದಗಿಸಲು ಮನಸ್ವಿನಿ, ಮೈತ್ರಿ ಯೋಜನೆ ಜಾರಿಗೊಳಿಸಲು ಕಾರಣರಾದರು. ಇದರಿಂದ ರಾಜ್ಯದಲ್ಲಿರುವ ಅಸಹಾಯಕ ಅವಿವಾಹಿತ ಮಹಿಳೆಯರು ಹಾಗೂ ತೃತೀಯಲಿಂಗಿಗಳಿಗೆ ನೆರವಾಯಿತು. ಮಾಸಿಕ ಎರಡು ಸಾವಿರ ರೂ. ಪಿಂಚಣಿ ನೀಡುವ ಈ ಯೋಜನೆ ರೂಪಿಸಿದರು. ರಾಜ್ಯದಲ್ಲಿ ಸುಮಾರು 1.34 ಲಕ್ಷ ಮಹಿಳೆಯರು ಇದರ ಪ್ರಯೋಜನ ಪಡೆದು ಜೀವನ ಸಾಗಿಸುತ್ತಿದ್ದಾರೆ. ಈ ಯೋಜನೆಗಳು ದೇಶದುದ್ದಗಲಕ್ಕೂ ಪ್ರಶಂಸೆಗೆ ಪಾತ್ರವಾಗಿವೆ ಎಂದರು.

ಈ ಯೋಜನೆ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ರಾಚಪ್ಪಾಜಿ ನಗರದಲ್ಲಿ ಮೊದಲಿಗೆ ಜಾರಿಯಾಯಿತು. ಇದೀಗ ಪಶ್ಚಿಮ ಬಂಗಾಳ ಸೇರಿದಂತೆ ಬೇರೆ ಬೇರೆ ರಾಜ್ಯಗಳು ಈ ಯೋಜನೆ ಜಾರಿ ಮಾಡುತ್ತಿವೆ ಎಂದು ತಿಳಿಸಿದರು.

ಶ್ರೀನಿವಾಸಪ್ರಸಾದ್ ಅವರ ಪುತ್ರಿ ಪ್ರತಿಮಾ ದೇವರಾಜ್ ಮಾತನಾಡಿ, ವಿ.ಶ್ರೀನಿವಾಸ್ ಪ್ರಸಾದ್ ಅವರನ್ನು ಅನಾರೋಗ್ಯದ ಕಾರಣ 24 ವರ್ಷದ ಹಿಂದೆಯೇ ಏರ್ ಲಿಫ್ಟ್ ಮಾಡಲಾಗಿತ್ತು. ಅವರ ಮನೋಸ್ಥೈರ್ಯ ಚೆನ್ನಾಗಿದ್ದರಿಂದ ಇದುವರೆಗೂ ಬದುಕುಳಿದು, ಜನಸೇವೆ ಮಾಡಿದರು. ಈ ಬಾರಿಯೂ ಅವರು ಆಸ್ಪತ್ರೆಯಿಂದ ಮನೆಗೆ ಮರಳುತ್ತಾರೆ ಎಂದುಕೊಂಡಿದ್ದೆವು. ಆದರೆ ಬಾರದ ಲೋಕಕ್ಕೆ ಮರಳಿದ್ದಾರೆ. ರಾಜಕಾರಣದಲ್ಲಿ ಹಲವು ಮಂದಿಗೆ ಮಾರ್ಗದರ್ಶನ ನೀಡಿ, ಬೆಳೆಸಿದ್ದಾರೆ. ನಾನು ಸೇರಿದಂತೆ ಇನ್ನಷ್ಟು ಮಂದಿ ಅವರ ಮಾರ್ಗದರ್ಶನದಲ್ಲಿ ಬೆಳೆಯುವ ನಿರೀಕ್ಷೆಯಲ್ಲಿದ್ದರು. ಆದರೆ ಅಪ್ಪ ನಮ್ಮನ್ನು ಬಿಟ್ಟು ಅಗಲಿದ್ದಾರೆ ಎಂದು ದುಃಖಿಸಿದರು.

ಹಿರಿಯ ಕ್ರೀಡಾಪಟು ಎಂ. ಯೋಗೇಂದ್ರ ಮಾತನಾಡಿ, ಸ್ವಾಭಿಮಾನಿ, ಶುದ್ಧ ಹಸ್ತದ ರಾಜಕಾರಣಿಯಾಗಿದ್ದ ಶ್ರೀನಿವಾಸಪ್ರಸಾದ್ ಅವರು ಸ್ವತಃ ಕ್ರೀಡಾಪಟು ಹಾಗೂ ಕ್ರೀಡಾಪ್ರೇಮಿಯಾಗಿದ್ದಾರೆ. ಫುಟ್‌ಬಾಲ್‌ನಲ್ಲಿ ರಾಜ್ಯ ತಂಡಕ್ಕ ಆಯ್ಕೆಯಾದ ಸಂದರ್ಭದಲ್ಲಿ ರಾಜಕಾರಣದತ್ತ ತೆರಳಿದ ಪರಿಣಾಮ ಅವರ ಕ್ರೀಡಾ ಚಟುವಟಿಕೆ ಅಲ್ಲಿಗೆ ಮೊಟಕಾಯಿತು. ನನ್ನಂತಹ ಕ್ರೀಡಾಪಟು ಬೆಳೆಸಲು ಶ್ರೀನಿವಾಸ ಪ್ರಸಾದ್ ಅವರ ಪ್ರೋತ್ಸಾಹವೇ ಕಾರಣ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಐದು ದಶಕಗಳ ರಾಜಕಾರಣದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಆದರ್ಶ ಪಾಲಿಸಿ, ಸಮಸಮಾಜ, ಸಾಮರಸ್ಯ, ಸಹಬಾಳ್ವೆಯ ವಾತಾವರಣ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಸೇರಿದಂತೆ ಎಲ್ಲ ಶೋಷಿತರ ಪರ ಧ್ವನಿಯಾಗಿದ್ದರು. ಜೊತೆಗೆ ಎಲ್ಲಾ ವರ್ಗಗಳ ಜನಪ್ರೀತಿಗೆ ಪಾತ್ರರಾಗಿದ್ದರು ಎಂದರು.

ಸಭೆಯಲ್ಲಿ ಧೀರಜ್ ಪ್ರಸಾದ್, ಪಿ.ಜಿ. ಚಂದ್ರಶೇಖರ್, ಸಿ.ಕೆ.ಮುರುಳೀಧರ್, ಮಹದೇವಯ್ಯ, ಜಿ.ಆರ್. ಪ್ರಭಾಕರ್, ಕೆ.ಎನ್. ಸೋಮಶೇಖರ್, ಪಿ.ಜಿ. ಸತ್ಯನಾರಾಯಣ್, ಟಿ.ಎಸ್. ರವಿಕುಮಾರ್, ಮಹದೇವರಾವ್, ಹೆಚ್.ಆರ್. ರಾಮಸ್ವಾಮಿ, ಪದ್ಮನಾಭ, ಕೆ.ಟಿ. ಬಲರಾಮೇಗೌಡ, ಅಭಿಷೇಕ್, ಎನ್. ಪ್ರಸಾದ್, ರೇಖಾ, ಸೇರಿದಂತೆ ಅಥ್ಲೀಟ್‌ಗಳು, ಕ್ರೀಡಾಭಿಮಾನಿಗಳು ಪಾಲ್ಗೊಂಡಿದ್ದರು.

ಸುಭಾಷ್ ಪಾಳೇಕಾರ್ ಸಾವಯವ ಕೃಷಿಯಿಂದ

ಬರಗಾಲದಲ್ಲೂ ನಳ ನಳಿಸುತ್ತಿವೆ ಬೆಳೆಗಳು

ಕೃಷಿಯಲ್ಲಿ ಯಶಸ್ಸು ಕಂಡ ತಾಂಡವಪುರದ ರೈತ ಟಿ.ಆರ್.ವಿದ್ಯಾಸಾಗರ್





ನಂಜನಗೂಡು, ಮೇ 5– ಪ್ರಸ್ತುತ ತೀವ್ರ ಬರಗಾಲದಿಂದ ಬೋರ್‌ವೆಲ್‌ಗಳು ಬತ್ತಿ ಹೋಗುತ್ತಿವೆ. ಹೀಗಿರುವಾಗ ಬೆಳೆ ಬೆಳೆಯಲು ಸಾಧ್ಯವಿಲ್ಲ ಎಂಬ ಸನ್ನಿವೇಶದಲ್ಲೂ ತಾಲೂಕಿನ ತಾಂಡವಪುರದ ರೈತ ಟಿ.ಆರ್. ವಿದ್ಯಾಸಾಗರ್ ಅವರು ಕಳೆದ ಹಲವು ವರ್ಷಗಳಿಂದ ಸುಭಾಷ್ ಪಾಳೇಕರ್ ಅವರ ಸಾವಯವ ಕೃಷಿ ಮತ್ತು ಸಮಗ್ರ ಬೇಸಾಯ ಪದ್ಧತಿ ಅಳವಡಿಸಿಕೊಂಡು ಎಲ್ಲಾ ಋತುವಿನಲ್ಲೂ ಆದಾಯ ಗಳಿಸುವ ಮೂಲಕ ಕೃಷಿಯಲ್ಲಿ ಯಶಸ್ಸು ಕಂಡು ಇತರರಿಗೆ ಮಾದರಿಯಾಗಿದ್ದಾರೆ.

ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ಸಿಕ್ಕ ತೇಜಸ್ವಿ ಅವರ ಸುಭಾಷ್ ಪಾಳೇಕರ್ ಅವರ ಸಹಜ ಕೃಷಿ ಪುಸ್ತಕದಿಂದ ಪ್ರೇರೇಪಣೆಗೊಂಡ ವಿದ್ಯಾಸಾಗರ್ ಅದೇ ಹಾದಿಯಲ್ಲಿ ಸಾಗಬೇಕೆಂದು ನಿಶ್ಚಯಿಸಿ ರಾಸಾಯನಿಕ, ಕೀಟ ಮುಕ್ತವಾದ ಸಾವಯವ ಸುಸ್ಥಿರ ಕೃಷಿಗೆ ಒತ್ತು ನೀಡಿ ಯಂತ್ರಗಳ ಬಳಕೆ ಇಲ್ಲದೆ ವಿಶಿಷ್ಟ ಮಾದರಿಯಲ್ಲಿ ಬೇಸಾಯ ಕೈಗೊಂಡು ನೈಸರ್ಗಿಕ ಕೃಷಿ ಮೂಲಕ ತೋಟವನ್ನು ಅಭಿವೃದ್ಧಿಪಡಿಸಿದ್ದಾರೆ.

> ತಾಂಡವಪುರ ಕೈಗಾರಿಕೆ, ವಿಮಾನ ನಿಲ್ದಾಣದಂತಹ ಜಾಗತೀಕರಣ, ಉದಾರೀಕರಣಕ್ಕೆ ಒಳಗಾದ ಮೊದಲ ಗ್ರಾಮ. ಇಂತಹ ಬದಲಾದ ಹಳ್ಳಿಯಲ್ಲೂ ಸಮಗ್ರ ಬೇಸಾಯ ಪದ್ಧತಿಯಿಂದ ರೈತ ಸಮೃದ್ಧಿಯಿಂದ ಜೀವಿಸಬಹುದು ಎಂಬುದಕ್ಕೆ ನಾನೇ ಸಾಕ್ಷಿ. ಯಾವುದೇ ರೈತ ತಮ್ಮ ಜಮೀನು ಮಾರಾಟ ಮಾಡಬಾರದು. ಅಲ್ಲದೇ ರೈತರು ಮಳೆ ನೀರನ್ನು ತಮ್ಮ ಜಮೀನಿನಲ್ಲಿ ಇಂಗಿಸುತ್ತಿಲ್ಲ. ಇದರಿಂದ ನೀರಿನ ಕೊರತೆ ಎದುರಾಗುತ್ತಿದೆ. ರೈತರು ಸರ್ಕಾರಗಳನ್ನು ದೂಷಿಸುವ ಬದಲು ಪ್ರತಿಯೊಂದು ಹನಿಯನ್ನು ಪೋಲು ಮಾಡದೆ ಅಂತರ್ಜಲ ಹೆಚ್ಚಿಸಲು ಒತ್ತು ನೀಡಬೇಕು. ಸರ್ಕಾರಗಳೂ ಕೂಡ ಒಂದು ಕೃಷಿ ಹೊಂಡ ತೆಗೆಸಿ ಪ್ರಚಾರ ಗಿಟ್ಟಿಸಿಕೊಂಡು ಕೈ ತೊಳೆದುಕೊಳ್ಳುವ ಬದಲು ರೈತರಿಗೆ ಸೂಕ್ತ ತರಬೇತಿ ನೀಡಬೇಕು. ಆ ಮೂಲಕ ರೈತರಿಗೆ ನೆರವಾಗಬೇಕು.
>
> – ಟಿ.ಆರ್.ವಿದ್ಯಾಸಾಗರ್, ರೈತ.

ತಾಲೂಕಿನ ಹಳ್ಳಿದಿಡ್ಡಿ–ಏಚಗಳ್ಳಿ ರಸ್ತೆ ಮಾರ್ಗ ಮಧ್ಯ ಟಿ.ಆರ್.ವಿದ್ಯಾಸಾಗರ್ ಅವರ 5 ಎಕರೆ ಭೂಮಿ ಇದ್ದು, ಅದರಲ್ಲಿ ಅವರು ಅಡಿಕೆ, ತೆಂಗು, ಕೊಕೊ, ಕಾಫಿ, ಚೆಂಬೆ, ಗ್ಲಿರಿಸೀಡಿಯಾ, ನಿಂಬೆ, ನುಗ್ಗೆ, ಕರಿಬೇವು ಬೆಳೆದಿದ್ದು, ಇದೀಗ ತೋಟದಲ್ಲಿ ಕಾಫಿ ಗಿಡಗಳು ಈಗಷ್ಟೇ ಫಲ ಬಿಡುತ್ತಿವೆ. ಇದರೊಂದಿಗೆ ಸಪೋಟ, ಸೀಬೆ, ಹಲಸು, ನೇರಳೆ, ಮೋಸಂಬಿ ಸೇರಿದಂತೆ ನಾನಾ ಬಗೆಯ ಹಣ್ಣಿನ ಗಿಡಗಳು ಫಲ ಕೊಡುತ್ತಿವೆ. ಅಲ್ಲದೇ ದನ ಕರುಗಳಿಗೆ ಬೇಕಾದ ಮೇವು ಬೆಳೆಯುವ ಮೂಲಕ ಸಮಗ್ರ ಕೃಷಿ ಅಳವಡಿಸಿಕೊಂಡಿದ್ದಾರೆ.



ಅಂತರ್ಜಲ ಮರು ಪೂರಣಕ್ಕೆ ಒತ್ತು: ಟಿ.ಆರ್.ವಿದ್ಯಾಸಾಗರ್ ಅವರು ತಮ್ಮ ಜಮೀನಿನಲ್ಲಿ ಅಂತರ್ಜಲ ಮರು ಪೂರಣಕ್ಕಾಗಿ ಮಳೆ ನೀರು ಇಂಗಿಸುವ ಕಾರ್ಯಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಮಳೆ ಬಂದಾಗ ಯಥೇಚ್ಛವಾಗಿ ಸಂಗ್ರಹವಾಗುವ ನೀರು ಪೋಲಾಗದಂತೆ ಎಚ್ಚರಿಕೆ ವಹಿಸಿದ್ದಾರೆ. ಮಳೆ ನೀರನ್ನು ಜಮೀನಿಂದ ಹೊರ ಹೋಗದಂತೆ ಪ್ರತಿ 15 ಅಡಿ ವಿಸ್ತೀರ್ಣಕ್ಕೆ ಒಂದರಂತೆ 2 ಅಡಿ ಆಳ, 2 ಅಡಿ ಅಗಲ ಅಳತೆಯ ಗುಂಡಿ ತೆಗೆದಿದ್ದಾರೆ. ಈ ಗುಂಡಿಯಲ್ಲಿ ಏಕದಳ ಮತ್ತು ದ್ವಿದಳ ಬೆಳೆಗಳ ಮತ್ತು ತೆಂಗಿನ ಗರಿ ತ್ಯಾಜ್ಯಗಳನ್ನು ಹಾಕಿ ಮಳೆ ನೀರು ಸುಲಭವಾಗಿ ಇಂಗುವಂತೆ ಕ್ರಮ ಕೈಗೊಂಡಿದ್ದಾರೆ. ಇದರಿಂದ ಇಂತಹ ಬರಗಾಲದಲ್ಲೂ ತೋಟ ತೇವಾಂಶದಿಂದ ಕೂಡಿದೆ. ಅಲ್ಲದೇ ಕೃಷಿಯಲ್ಲಿ ಹನಿ ನೀರಾವರಿ ಅಳವಡಿಸಿಕೊಂಡು ಸಮಗ್ರ ಕೃಷಿಗೆ ಒತ್ತು ನೀಡಿದ್ದಾರೆ.

ಜಮೀನಿನಲ್ಲಿ ಕೃಷಿ ಹೆಸರಿನಲ್ಲಿ ಭೂಮಿಯನ್ನು ಅನವಶ್ಯಕ ಉಳುಮೆ ಹಾಗೂ ಯಂತ್ರಗಳ ಬಳಕೆ ತಪ್ಪಿಸಲು ವರ್ಷಕ್ಕೆ 2 ಬಾರಿ ಮಾತ್ರ ತೋಟದಲ್ಲಿ ಬೆಳೆದು ನಿಲ್ಲುವ ಗಿಡಗಂಟಿಗಳನ್ನು ಆಳುಗಳ ಮೂಲಕ ಕತ್ತರಿಸಿ ಗುಂಡಿಯಲ್ಲಿ ಗೊಬ್ಬರ ರೂಪದಲ್ಲಿ ಸಂಗ್ರಹಿಸುತ್ತಾರೆ. ಜೊತೆಗೆ ಜಮೀನಿನಲ್ಲಿ ಸಂಗ್ರಹಗೊಳ್ಳುವ ತ್ಯಾಜ್ಯ, ಕಸಕಡ್ಡಿ, ಜಮೀನಿನಲ್ಲೇ ಕೊಳೆಯುವಂತೆ ನೋಡಿಕೊಳ್ಳಲಾಗಿದೆ. ಇದರಿಂದ ತೋಟದ ನಿರ್ವಹಣಾ ವೆಚ್ಚ ಕಡಿಮೆಯಾಗಲಿದೆ.



ಅಡಿಕೆ ತಟ್ಟೆ ತಯಾರಿಕೆ: ವಿದ್ಯಾಸಾಗರ್ ಅವರು ತಮ್ಮ ತೋಟದಲ್ಲಿ ಲಭ್ಯವಾಗುವ ಅಡಿಕೆ ಹಾಳೆಗಳನ್ನು ಬಳಸಿಕೊಂಡು ಅಡಿಕೆ ತಟ್ಟೆ ತಯಾರಿಕೆಗೆ ಮುಂದಾಗುವ ಮೂಲಕ ಸ್ಥಳೀಯ ಹಲವು ಮಂದಿಗೆ ಉದ್ಯೋಗವನ್ನೂ ನೀಡಿದ್ದಾರೆ.

ರೈತ ಸಂಘಟನೆಯಲ್ಲೂ ಮುಂದು: ಕೃಷಿ ಕಾಯಕದ ಜೊತೆಗೆ ರೈತ ಸಂಘಟನೆಗೂ ಮುಂದಾಗಿರುವ ಟಿ.ಆರ್. ವಿದ್ಯಾಸಾಗರ್ ತಮ್ಮ ಸಂಘಟನೆ ಶಕ್ತಿ, ಹೋರಾಟದಿಂದಾಗಿ ತಾಂಡ್ಯ, ಕಡಕೊಳ, ನಂಜನಗೂಡು ಕೈಗಾರಿಕಾ ಪ್ರದೇಶಗಳಲ್ಲಿ ಭೂಮಿ ಕಳೆದುಕೊಂಡಿರುವ ರೈತರ ಮಕ್ಕಳಿಗೆ ಉದ್ಯೋಗ ಕೊಡಿಸಿದ್ದಾರೆ. ರೈತರ ಸಮಸ್ಯೆಗೆ ಸದಾ ಮುಂದಾಳತ್ವ ವಹಿಸಿ ಸಂಕಷ್ಟದಲ್ಲಿರುವ ರೈತರಿಗೆ ಸಹಾಯಹಸ್ತ ಚಾಚುವುದರಲ್ಲಿ ಸದಾ ಮುಂದಿದ್ದಾರೆ.

ಟಿ.ಆರ್.ವಿದ್ಯಾಸಾಗರ್ ಅವರನ್ನು ಅವರ ತೋಟ, ತಾಂಡವಪುರ ಅಥವಾ ಮೊ. 6361862349 ಮೂಲಕ ಸಂಪರ್ಕಿಸಬಹುದು.

ತೇರು ಬಂತು ತೇರು ನಂಜುಂಡನ ತೇರು ಸಾಕ್ಷ್ಯಚಿತ್ರ ಬಿಡುಗಡೆ



ನಂಜನಗೂಡು, ಮೇ 5– ಪುಣ್ಯಭೂಮಿ ಕ್ರಿಯೇಷನ್ಸ್ ವತಿಯಿಂದ ಪಟ್ಟಣದ ಹೊರವಲಯದ ಅನುರಾಗ ಮಕ್ಕಳ ಮನೆಯಲ್ಲಿ ಆಯೋಜಿಸಿದ್ದ ತೇರು ಬಂತು ತೇರು ನಂಜುಂಡನ ತೇರು ಸಾಕ್ಷ್ಯಚಿತ್ರವನ್ನು ಶಾಸಕ ಗಣೇಶ್ ಪ್ರಸಾದ್ ಬಿಡುಗಡೆಗೊಳಿಸಿ ಕಾರ್ಯಕ್ರಮಕ್ಕೆ ಶುಭ ಕೋರಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಶ್ರಾಂತ ಪ್ರಾಧ್ಯಾಪಕ ಡಿ.ಎಸ್. ಸದಾಶಿವಮೂರ್ತಿ, ಈ ಸಾಕ್ಷ್ಯಚಿತ್ರವನ್ನು ಎರಡು ವರ್ಷಗಳ ಹಿಂದೆಯೇ ಬಿಡುಗಡೆಗೊಳಿಸಬೇಕಿತ್ತು. ಆದರೆ ಸಾಹಿತಿಗಳಾದ ಪ್ರೊ. ಮಲೆಯೂರು ಗುರುಸ್ವಾಮಿ ಮತ್ತು ದೇವನೂರು ನಾಗಣ್ಣಾಚಾರ್ ಅವರ ನಿಧನದಿಂದಾಗಿ ಮುಂದೂಲ್ಪಟ್ಟಿತ್ತು. ಈ ಸಾಕ್ಷ್ಯಚಿತ್ರಕ್ಕೆ ಇವರಿಬ್ಬರೂ ಸಾಹಿತ್ಯ ನೀಡಿರುವುದರಿಂದ ಅವರ ಅನುಪಸ್ಥಿತಿ ಇದೀಗ ಕಾಡುತ್ತಿದೆ. ಆದರೂ ಪ್ರಯತ್ನ ಕೈ ಬಿಡದೆ ನಿರ್ದೇಶಕ ಮಂಜುನಾಥ್ ಅವರ ಪ್ರಯತ್ನದಿಂದ ಈಗ ಹೊಸ ಸ್ವರೂಪದಲ್ಲಿ ಬಿಡುಗಡೆಗೊಳಿಸಲಾಗುತ್ತಿದೆ. ಈ ಸಾಕ್ಷ್ಯಚಿತ್ರವನ್ನು ನಟ ಪುನೀತ್ ರಾಜಕುಮಾರ್ ಅವರಿಗೆ ಅರ್ಪಿಸಲಾಗಿದೆ ಎಂದರು.

ಲೇಖಕ ಕಳಲೆ ಗುರುಸ್ವಾಮಿ, ನಿರ್ದೇಶಕ ಟಿ.ಎಸ್.ಮಂಜುನಾಥ್ ಪ್ರಸಾದ್ ಛಲಬಿಡದೆ ಈ ಸಾಕ್ಷ್ಯಚಿತ್ರ ಹೊರತಂದಿರುವುದು ಶ್ಲಾಘನೀಯ ಎಂದ ಅವರು ಇದೇ ವೇಳೆ ಪಂಚ ರಥೋತ್ಸವ ವಿಶೇಷತೆ, ನಂಜನಗೂಡಿಗೆ ಗರಳಪುರಿ ಎಂಬ ಹೆಸರು ಬರಲು ಕಾರಣ ಕುರಿತು ವಿವರಿಸಿದರು.

ವೇದಿಕೆಯಲ್ಲಿ ಅನುರಾಗ್ ಮಕ್ಕಳ ಮನೆಯ ಡಿ.ಜಿ.ಸೋಮಶೇಖರ್ ಮೂರ್ತಿ, ಸುಂದ್ರಮ್ಮ ನಾಗಣ್ಣಾಚಾರ್, ನಿರ್ದೇಶಕ ಟಿ.ಎಸ್. ಮಂಜುನಾಥ್ ಪ್ರಸಾದ್, ಉದ್ಯಮಿ ನೌಷದ್, ರಾಜಶೇಖರ, ವೀರಭದ್ರಾಚಾರಿ, ಪಲ್ಲವಿ ಇತರರಿದ್ದರು.

ಮರೀಗೌಡ ನಿಧನ



ಹಿರೀಕ್ಯಾತನಹಳ್ಳಿ, ಮೇ 5– ಹಿರೀಕ್ಯಾತನಹಳ್ಳಿ ಡೈರಿ ಮಾಜಿ ಸದಸ್ಯ ಮರಿಗೌಡ(72) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬನ್ನೂರಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಬನ್ನೂರು, ಮೇ 5– ಪ್ರತಿಯೊಬ್ಬರೂ ನಿಯಮಿತವಾಗಿ ತಮ್ಮ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳುವ ಮೂಲಕ ಅನಾರೋಗ್ಯಕ್ಕೆ ತುತ್ತಾಗುವುದರಿಂದ ಪಾರಾಗಬಹುದು ಎಂದು ಡಾ. ಅನಿಸಾ ಶೆರಾವತ್ ತಿಳಿಸಿದರು.

ಪಟ್ಟಣದ ಅನಿಸಾ ಕ್ಲಿನಿಕ್, ವಿಷ್ಣು ಡಯಾಗ್ನೋಸ್ಟಿಕ್ ಸೆಂಟರ್, ಲಯನ್ಸ್ ಬ್ಲಡ್ ಸೆಂಟರ್, ಭೈರವೇಶ್ವರ ನೇತ್ರಾಲಯ ವತಿಯಿಂದ ಹಮ್ಮಿಕೊಳ್ಳಲಾದ ಉಚಿತ ಬೇಸಿಗೆ ಶಿಬಿರದ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಎಷ್ಟೋ ಸಂದರ್ಭದಲ್ಲಿ ರೋಗಿಗಳಿಗೆ ರಕ್ತ ಸಿಗದೇ ಪ್ರಾಣಕ್ಕೆ ಹಾನಿಯಾಗುತ್ತಿದೆ. ಯುವಕರು ರಕ್ತದಾನ ಮಾಡುವ ಮೂಲಕ ಅಗತ್ಯವುಳ್ಳ ರೋಗಿಗಳ ಬದುಕಿಗೆ ಆಸರೆಯಾಗಬೇಕಿದೆ ಎಂದ ಅವರು, ಯಾವುದೇ ಭಯ, ಹಿಂಜರಿಕೆ, ಮೂಢನಂಬಿಕೆಗೆ ಕಟ್ಟು ಬೀಳದೆ ಆರೋಗ್ಯವಂತ ಎಲ್ಲರೂ ರಕ್ತದಾನ ಮಾಡುವ ಮೂಲಕ ಅಮೂಲ್ಯ ಜೀವ ಉಳಿಸುವಂತೆ ತಿಳಿಸಿದರು.

ಗ್ರಾಮೀಣ ಬಡ ಕುಟುಂಬಗಳು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲು ಆರ್ಥಿಕ ತೊಂದರೆಗಳಿದ್ದು, ಅವರು ಉಚಿತವಾಗಿ ಏರ್ಪಡಿಸುವ ಆರೋಗ್ಯ ತಪಾಸಣೆ ಶಿಬಿರಗಳಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಶಿಬಿರ ಯಶಸ್ವಿಗೊಳಿಸುವಂತೆ ತಿಳಿಸಿದರು.

ಇತ್ತೀಚೆಗೆ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗಿ ಜನರನ್ನು ಕಾಡಲು ಆರಂಭಿಸಿದ್ದು, ಎಲ್ಲರೂ ಆಗಿಂದಾಗ್ಗೆ ಹೃದಯ ತಪಾಸಣೆ ಮಾಡಿಸಿಕೊಳ್ಳುವಂತೆಯೂ ಸಲಹೆ ನೀಡಿದ ಅವರು, ರಕ್ತದೊತ್ತಡ, ಮಧುಮೇಹ ಪರೀಕ್ಷೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಉಚಿತ ಆರೋಗ್ಯ ತಪಾಸಣೆಯಲ್ಲಿ ತಲೆನೋವು, ಮಂಡಿನೋವು, ಜ್ವರ, ಕೆಮ್ಮು ಬಂಜೆತನ, ಥೈರಾಯಿಡ್, ಟಿಎಫ್‌ಟಿ, ಸಿಬಿಸಿ, ಇಸಿಜಿ, ಕಣ್ಣಿನ ತಪಾಸಣೆ ನಡೆಸಿ ಅಗತ್ಯವುಳ್ಳವರಿಗೆ ಸೂಕ್ತ ಔಷಧೋಪಚಾರ ನೀಡಲಾಯಿತು. ಇದೇ ವೇಳೆ ಸುಮಾರು 250ಕ್ಕೂ ಹೆಚ್ಚು ಜನರು ಶಿಬಿರದ ಪ್ರಯೋಜನ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಅಜೀಜುಲ್ಲಾ, ಡಾ.ಸಿ.ಗಿರೀಶ್, ವಿಷ್ಣು ಡಯಾಗ್ನೋಸ್ಟಿಕ್ ಸೆಂಟರ್ ವೈದ್ಯಕೀಯ ಪ್ರಯೋಗಾಲಯದ ತಂತ್ರಜ್ಞೆ ಸೌಮ್ಯರಾಜ್, ಭೈರವೇಶ್ವರ ನೇತ್ರಾಲಯದ ಸಿಬ್ಬಂದಿ, ಜೀವಧಾರ ಬ್ಲಡ್ ಸೆಂಟರ್ ಸಿಬ್ಬಂದಿ ಸೇರಿದಂತೆ ಪ್ರಮುಖರು ಪಾಲ್ಗೊಂಡಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ



ಹಿರೀಕ್ಯಾತನಹಳ್ಳಿ, ಮೇ 5– ಸಾಲಬಾಧೆ ತಾಳಲಾರದೇ ರೈತನೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹರವೆ ಕಲ್ಲಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ದೇವೇಗೌಡ(63) ಆತ್ಮಹತ್ಯೆ ಮಾಡಿಕೊಂಡವರು. ಈತ ತಮ್ಮ 1.03 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ಕಟ್ಟೆಮಳಲವಾಡಿ ಶಾಖೆಯ ಐಓಬಿ ಬ್ಯಾಂಕ್‌ನಲ್ಲಿ 9 ಲಕ್ಷ ಸಾಲ, ಅಲ್ಲದೇ ಖಾಸಗಿಯವರಿಂದ 5 ಲಕ್ಷ ಕೈ ಸಾಲ ಮಾಡಿದ್ದರು. ಸಾಲ ಮರುಪಾವತಿಸದ ಹಿನ್ನೆಲೆಯಲ್ಲಿ ಬ್ಯಾಂಕ್ ನಿಂದ ನೋಟಿಸ್ ನೀಡಲಾಗಿತ್ತು. ಇದರಿಂದ ಮನನೊಂದಿದ್ದ ದೇವೇಗೌಡ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪುತ್ರ ದೇವ್ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸ್ಥಳಕ್ಕಾಗಮಿಸಿ ಶವವನ್ನು ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಶಾಸಕ ಜಿ.ಡಿ.ಹರೀಶ್ ಗೌಡ ರೈತನ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡು ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ವಿ.ಶ್ರೀನಿವಾಸ ಪ್ರಸಾದ್ ಯುವ ರಾಜಕಾರಣಿಗಳಿಗೆ ಮಾದರಿ

ಶ್ರದ್ಧಾಂಜಲಿ ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯ



ಹುಣಸೂರಿನ ಅಂಬೇಡ್ಕರ್ ಭವನದಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹುಣಸೂರು, ಮೇ 5– ರಾಜಕೀಯದಲ್ಲಿ ಮೇರು ಪರ್ವತಕ್ಕೆ ಏರಿದರೂ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆಯ ಹೆಜ್ಜೆಯೊಂದಿಗೆ ಜನನಾಯಕರಾಗಿದ್ದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಯುವ ರಾಜಕಾರಣಿಗಳಿಗೆ ಮಾದರಿಯಾಗಿದ್ದರು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ನಗರದ ಅಂಬೇಡ್ಕರ್ ಭವನದಲ್ಲಿ ದಲಿತ ಸಮುದಾಯಗಳ ಒಕ್ಕೂಟದಿಂದ ಹಮ್ಮಿಕೊಂಡಿದ್ದ ದಿ.ವಿ.ಶ್ರೀನಿವಾಸಪ್ರಸಾದ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಶ್ರೀನಿವಾಸಪ್ರಸಾದ್ ರಾಜಕೀಯದಲ್ಲಿ ಉನ್ನತ ಸ್ಥಾನಕ್ಕೇರಿ ಭ್ರಷ್ಟಾಚಾರ ಮುಕ್ತ ಆಡಳಿತ ನೀಡಿ ಜನಮಾನಸದಲ್ಲಿ ಉಳಿದಿದ್ದಾರೆ. ಕೇಂದ್ರ ಸಚಿವರಾಗಿ ಉತ್ತಮ ಆಡಳಿತ ನಡೆಸುವ ಮೂಲಕ ಅವರು ರಾಷ್ಟ್ರಮಟ್ಟದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು ಎಂದರು.

ಕಂದಾಯ ಸಚಿವರಾಗಿದ್ದ ಶ್ರೀನಿವಾಸ ಪ್ರಸಾದ್ ಅವರಿಂದ ಅಂದಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜೀನಾಮೆ ಪಡೆದು ಅವರ ವ್ಯಕ್ತಿತ್ವಕ್ಕೆ ಧಕ್ಕೆಯಾಗುವಂತೆ ನಡೆದುಕೊಂಡಿತ್ತು. ಹೀಗಿದ್ದರೂ ಅವರು ಯಾರನ್ನೂ ಆರೋಪಿಸದೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಪಕ್ಷ ಬದಲಾವಣೆ ಮಾಡಿದರು. ಅಂದಿನಿಂದ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆವರೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಸದ ವಿ. ಶ್ರೀನಿವಾಸ ಪ್ರಸಾದ್ ಮುಖಾಮುಖಿಯಾಗಿರಲಿಲ್ಲ. ಆದರೆ ಇತ್ತೀಚೆಗೆ ಮುಖ್ಯಮಂತ್ರಿಗಳೇ ಶ್ರೀನಿವಾಸಪ್ರಸಾದ್ ಅವರ ಮನೆಗೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿ ಕಾಂಗ್ರೆಸ್‌ಗೆ ಬೆಂಬಲ ಕೋರುವ ಪ್ರಯತ್ನ ನಡೆಸಿದ್ದು, ಶ್ರೀನಿವಾಸ ಪ್ರಸಾದ್ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಮಾತನಾಡಿ, ರಾಜಕೀಯದಲ್ಲಿ ನಾನು ಮತ್ತು ಶ್ರೀನಿವಾಸಪ್ರಸಾದ್ ಸಮಕಾಲೀನರು. ಇಬ್ಬರ ನಡುವೆ ವಿಷಯವಾರು ರಾಜಕೀಯ ಚರ್ಚೆ ನಡೆಯುತ್ತಿತ್ತು. ನಮ್ಮಿಬ್ಬರ ನಡುವಿನ ಚರ್ಚೆ ಶ್ರೀಸಾಮಾನ್ಯರ ಅನುಕೂಲದ ಬಗೆಗಿನ ಕಾಳಜಿಯಾಗಿತ್ತು ಎಂಬುದಕ್ಕೆ ಹಲವು ನಿದರ್ಶನಗಳಿವೆ ಎಂದು ಹಲವು ವಿಚಾರಗಳನ್ನು ಮೆಲುಕು ಹಾಕಿದರು.

ವಾಜಪೇಯಿ ಸರ್ಕಾರದಲ್ಲಿ ಶ್ರೀನಿವಾಸ ಪ್ರಸಾದ್ ಅವರು ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾಗಿದ್ದ ವೇಳೆ ನಾನು ರಾಜ್ಯದಲ್ಲಿ ಶಿಕ್ಷಣ ಮಂತ್ರಿಯಾಗಿ ಮಕ್ಕಳಿಗೆ ಬಿಸಿಯೂಟ ನೀಡುವ ಪ್ರಸ್ತಾವನೆ ಸಲ್ಲಿಸಿದ್ದೆ. ಈ ಬಗ್ಗೆ ಅಂದಿನ ಪ್ರಧಾನಿಗೆ ಬಿಸಿಯೂಟದ ಸಂಪೂರ್ಣ ಚಿತ್ರಣ ನೀಡಿ ಬಿಸಿಯೂಟ ಯೋಜನೆಗೆ ಪ್ರಸಾದ್ ಅವರು ಹಸಿರು ನಿಶಾನೆ ತೋರಿದ ಫಲವಾಗಿ ಇಂದು ರಾಷ್ಟ್ರಮಟ್ಟದಲ್ಲಿ 85 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಸಿಗುತ್ತಿದೆ ಎಂದರು. ಇದೇ ವೇಳೆ ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ, ದಸಂಸ ಮುಖಂಡ ಆನಂದಸ್ವಾಮಿ, ಆದಿಜಾಂಬವ ಮುಖಂಡ ಡಿ.ಕುಮಾರ್, ನಾಯಕ ಸಮಾಜದ ಕಾಳಿದಾಸ ನಾಯಕ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಕೆ.ಶಿವಣ್ಣ, ಎಂ.ಕೃಷ್ಣಯ್ಯ, ಸತ್ಯಪ್ಪ ನಗರಸಭಾ ಸದಸ್ಯರಾದ ರಾಣಿ ಪೆರುಮಾಳ್, ಶಿವಶೇಖರ, ನಂಜುಂಡ ಇನ್ನಿತರರು ದಿವಂಗತ ಶ್ರೀನಿವಾಸ್ ಪ್ರಸಾದ್ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯ ಗಣೇಶ್ ಕುಮಾರಸ್ವಾಮಿ, ನಿವೃತ್ತ ಪ್ರಾಂಶುಪಾಲ ವೆಂಕಟೇಶಯ್ಯ, ತಟ್ಟೆಕೆರೆ ಶ್ರೀನಿವಾಸ್, ಮಾಜಿ ನಗರಸಭಾ ಅಧ್ಯಕ್ಷ ಶಿವಕುಮಾರ್, ರಾಜು, ನಾಗೇಶ್, ನಿಂಗರಾಜ, ಕೆಂಪರಾಜು ಇತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂಗರೂ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಊಡೂ ಈಸ್ ಬ್ಯಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ–4(ತ)	4 ಪ್ರದರ್ಶನಗಳು
ಸಂಗಂ	
ಉಸಿರೇ ಉಸಿರೇ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಿಲ್ಲ (ತ)	4 ಪ್ರದರ್ಶನಗಳು
ಪ್ರಭಾ	
ಮಾರಣಾಯುದ್ಧಂ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.40ಕ್ಕೆ, ಗಿಲ್ಲಿ (ತ): ಸಂ.4ಕ್ಕೆ, ದಿ ಫಾಲ್ ಗಾಯ್ (ಇಂ): ರಾ.7.10ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಅಂಜಾಮ್ ವೇದಂ (ಮ): ಬೆ.11ಕ್ಕೆ, O2 (ಕ): ಮ.1.45ಕ್ಕೆ, ಉಸಿರೇ ಉಸಿರೇ (ಕ): ಸಂ.4.05ಕ್ಕೆ, ಆವೇಶಂ (ಮ): ರಾ.7.05ಕ್ಕೆ, ನಡಿಕರ್ (ಮ): ರಾ.10.05ಕ್ಕೆ,
ಸ್ಕ್ರೀನ್ 3	ಕಾಂಗರೂ (ಕ): ಬೆ.11ಕ್ಕೆ, ಬಿಲ್ಲಾ (ತ): ಮ.1.35ಕ್ಕೆ, ಅರಮನೈ 4 (ತ): ಸಂ.4.20ಕ್ಕೆ, ರಾ.10.05ಕ್ಕೆ, ಪ್ರಸನ್ನವದನಂ (ತೆ): ರಾ.7.15ಕ್ಕೆ.
ಸ್ಕ್ರೀನ್ 4	ದಿ ಫಾಲ್ ಗಾಯ್ (ಇಂ): ಬೆ.11.10ಕ್ಕೆ, ಸಂ.4.35ಕ್ಕೆ, ಸಬರಿ (ತೆ): ಮ.1.50ಕ್ಕೆ, ಮಲಯಾಳಿ ಫ್ರಂ ಇಂಡಿಯಾ (ಮ): ರಾ.7.10ಕ್ಕೆ, ಆ ಒಕ್ಕಟಿ ಅಡಕ್ಕು (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ

MVC

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಕಸಾಪ ಸಂಸ್ಥಾಪನಾ ದಿನಾಚರಣೆ

ಹುಣಸೂರು, ಮೇ 5– ಕನ್ನಡ ಸಾಹಿತ್ಯ ಪರಿಷತ್ ಮತ್ತು ಸರ್ಕಾರಿ ಮಹಿಳಾ ಪದವಿ ಕಾಲೇಜಿನ ಕನ್ನಡ ವಿಭಾಗದ ಸಹಯೋಗದಲ್ಲಿ ಮೇ 6ರಂದು ಸೋಮವಾರ ಬೆಳಗ್ಗೆ 10.30ಕ್ಕೆ ಕಾಲೇಜಿನ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆ ಹಾಗೂ ಸಾಧಕರಿಗೆ ಅಭಿನಂದನಾ ಕಾರ್ಯಕ್ರಮ ನಡೆಯಲಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಮಹದೇವ್ ತಿಳಿಸಿದ್ದಾರೆ.

ಕಾರ್ಯಕ್ರಮವನ್ನು ಎಸಿ ಮಹಮದ್ ಹ್ಯಾರೀಸ್ ಸುಮೇರ್ ಉದ್ಘಾಟಿಸಲಿದ್ದು, ಕಾಲೇಜಿನ ಪ್ರಾಂಶುಪಾಲ ಪುಟ್ಟಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಪುಷ್ಪ ನಮನ ಸಲ್ಲಿಸಲಿದ್ದಾರೆ. ತಾಲೂಕು ಅಧ್ಯಕ್ಷ ಹೆಚ್.ಕೆ.ಮಹದೇವು ಆಶಯ ನುಡಿಗಳನ್ನಾಡಲಿದ್ದಾರೆ. ಜಿಲ್ಲಾ ನಿಕಟಪೂರ್ವ ಅಧ್ಯಕ್ಷ ವೈ.ಡಿ.ರಾಜಣ್ಣ ಪ್ರಧಾನ ಭಾಷಣ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಬಿಇಓ ಎಸ್.ರೇವಣ್ಣ, ನಿವೃತ್ತ ಪ್ರಾಂಶುಪಾಲ ಮೋದೂರು ಮಹೇಶ್ ಆರಾಧ್ಯ, ಕಸಾಪ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕಸಾಪ ನಿಕಟಪೂರ್ವ ಅಧ್ಯಕ್ಷ ಸೋಮಶೇಖರ್ ಆಗಮಿಸಲಿದ್ದಾರೆ. ಯುಪಿಎಸ್‌ಸಿ ಸಾಧಕರಾದ ಎಂ.ಲೇಖನ್, ಸ್ಪೀಕ್ ಫಾರ್ ಇಂಡಿಯಾ ರಾಷ್ಟಮಟ್ಟದ ಚರ್ಚಾ ಸ್ಪರ್ಧೆ ವಿಜೇತರಾದ ಹನಗೋಡಿನ ಹೆಚ್.ಪಿ.ಶ್ಯಾಮ್ ಪ್ರಸಾದ್, ಸ್ನಾತಕೋತರ ಪದವಿ ಚಿನ್ನದ ಪದಕ ವಿಜೇತೆ ಎಂ.ಎ. ಅಮೃತ, ಹುಣಸೂರಿನ ಉರಗ ತಜ್ಞಸ್ನೇಕ್ ಶಮೀಲ್ ಅವರನ್ನು ಸನ್ಮಾನಿಸಲಾಗುವುದು.



ಕಾರ್ಮಿಕ ದಿನಾಚರಣೆ ಅಂಗವಾಗಿ ಹೆಚ್.ಡಿ.ಕೋಟೆ ರೋಟರಿ ಕ್ಲಬ್ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿರುವ ಅಂಕಪ್ಪ, ವೆಂಕಟೇಶ್, ಕತ್ರೀಗೌಡ, ಕೆ.ಎಂ. ಶಿವರಾಜು, ಯೋಗೀಶ್, ಸೋಮಣ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ರೋಟರಿ ಅಧ್ಯಕ್ಷ ಬಿ.ಜಿ.ಗಂಗಾಧರ, ಕಾರ್ಯದರ್ಶಿ ಸ್ವಾಮಿ, ಖಜಾಂಚಿ ನಾರಾಯಣ ಲಾಲ್, ಸತೀಶ್ ಸುರಭಿ, ಸುರೇಶ್, ರಾಘವೇಂದ್ರ, ನಾಗರಾಜಪ್ಪ, ಇನ್ನಿತರರಿದ್ದರು.

ಇಂದು, ನಾಳೆ ಶ್ರೀ ಮುಳ್ಳೂರಮ್ಮ ಜಾತ್ರಾ ಮಹೋತ್ಸವ

ಸರಗೂರು, ಮೇ 5– ಪಟ್ಟಣದ 11ನೇ ವಾರ್ಡ್ ಬಿಡುಗಲುವಿನಲ್ಲಿ ಶ್ರೀ ಮುಳ್ಳೂರಮ್ಮನವರ ಜಾತ್ರಾ ಮಹೋತ್ಸವ ಮೇ 6 ಮತ್ತು 7ರಂದು ನಡೆಯಲಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಪಡವಲು ವಿರಕ್ತ ಮಠಾಧೀಶ ಮಹದೇವ ಸ್ವಾಮೀಜಿ ಸಮ್ಮುಖದಲ್ಲಿ ಜಾತ್ರಾ ಮಹೋತ್ಸವ ನಡೆಸಲು ಬಿಡಗಲು ಗ್ರಾಮಸ್ಥರು ಈಗಾಗಲೇ ಸಕಲ ಸಿದ್ಧತೆ ಕೈಗೊಂಡಿದ್ದಾರೆ. ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಮೇ 6ರಂದು ಸೋಮವಾರ ರಾತ್ರಿಯಿಂದಲೇ ಗಣಪತಿ ಹೋಮ, ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ಪೂಜಾ ಕೈಂಕರ್ಯಗಳು ಜರುಗಲಿದೆ. ಮೇ 7ರಂದು ಬೆಳಗೆಗ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ ನೂತನ ರಥವನ್ನು ಲೋಕಾರ್ಪಣೆಗೊಳಿಸಲಾಗುವುದು. ಬಳಿಕ ಅಮ್ಮನವರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ದೇವಾಲಯದವರೆಗೆ ರಥೋತ್ಸವ ನಡೆಸಲಾಗುವುದು. ಬಳಿಕ ದೇವಾಲಯದ ಮುಂಭಾಗ ಕೊಂಡೋತ್ಸವ ಜರುಗಲಿದ್ದು, ತೀರ್ಥಪ್ರಸಾದ ವಿನಿಯೋಗ ಮಾಡಲಾಗುವುದು. ಅಲ್ಲದೇ ಜಾತ್ರೆಗೆ ಆಗಮಿಸುವ ಭಕ್ತರಿಗಾಗಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಇಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಸಂತಾಪ ಸಭೆ



ಮೈಸೂರು: ಕೃಷ್ಣರಾಜ ಯುವ ಬಳಗದ ವತಿಯಿಂದ ಹಿರಿಯ ಮುತ್ಸದ್ದಿ ರಾಜಕಾರಣಿ ಸಂಸದರಾದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಸಂತಾಪ ಸಭೆ ಏರ್ಪಡಿಸಲಾಗಿದೆ. ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಮೇ 6ರಂದು ಬೆಳಗ್ಗೆ 11 ಗಂಟೆಗೆ ಸಂತಾಪ ಸಭೆಯನ್ನು ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಹಾಗೂ ಇನ್ನಿತರರು ಆಗಮಿಸಲಿದ್ದಾರೆ.

ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಎಐಟಿಟಿ, ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ, ಪಂಗಡದ ಯುವಕ–ಯುವತಿಯರಿಗೆ ಉದ್ಯೋಗ ಆಧಾರಿತ ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಡಿಪ್ಲೊಮಾ ಅಥವಾ ಬಿ.ಇ ವಿದ್ಯಾರ್ಹತೆ ಹೊಂದಿರುವ 16ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮೇ 10 ಕೊನೆ ದಿನ. ಮಾಹಿತಿಗೆ ಮೊ: 9945442654/ 9980615384 ಸಂಪರ್ಕಿಸಿ.

ಗೌರವಾನ್ವಿತ 5ನೇ ಜೆ.ಎಂಎಫ್.ಸಿ, ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಸಿ.ಮಿಸ್.ನಂ.51/2024

ಅರ್ಜಿದಾರರು: ಶ್ರೀ ಮಹದೇವು, ಬಿನ್ ಲೇಟ್ ನಂಜುಂಡಪ್ಪ, ವಯಸ್ಸು ಸುಮಾರು 67 ವರ್ಷ, ವಾಸ: ನಂ.7/3, ತಮ್ಮಡಗೇರಿ ಬೀದಿ, ಹಿನಕಲ್ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು. ವಿರುದ್ಧ

ಎದುರುದಾರರು : ತಹಶೀಲ್ದಾರ್. ಮೈಸೂರು ತಾಲ್ಲೂಕು, ಮೈಸೂರು

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿದಾರರ ತಾಯಿಯಾದ – ಶ್ರೀಮತಿ ಗೌರಮ್ಮ ಎಂ. ಕೋಂ ನಂಜುಂಡಪ್ಪ ರವರ ಮರಣ ಪ್ರಮಾಣಪತ್ರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ, ಸದರಿ ಶ್ರೀಮತಿ ಗೌರಮ್ಮ ಎಂ. ಕೋಂ ನಂಜುಂಡಪ್ಪ ಇವರು ದಿನಾಂಕ: 05-04-1980 ರಂದು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಮನೆ ನಂ.7/3 ರಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಇದರ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ ದಿನಾಂಕ: 20.05-24 ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ತಕರಾರನ್ನು ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಗೌರವಾನ್ವಿತ 5ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮೈಸೂರು.

ಸಹಿ/– ಅರ್ಜಿದಾರರ ಪರ ವಕೀಲರು
ಎನ್.ನಟರಾಜು, ಬಿಎಎಲ್‌ಎಲ್‌ಬಿ, ವಕೀಲರು,
#4, 1ನೇ ಕ್ರಾಸ್, ಗಣೇಶ್ ಭಂಡಾರ್ ಹತ್ತಿರ,
ಜನತಾನಗರ, ಮೈಸೂರು–09,
ಮೊ.8792054088,
ಮೈಸೂರು, ದಿನಾಂಕ : 03-05-2024

ಗೌರವಾನ್ವಿತ 5ನೇ ಜೆ.ಎಂಎಫ್.ಸಿ, ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಸಿ.ಮಿಸ್.ನಂ.52/2024

ಅರ್ಜಿದಾರರು: ಶ್ರೀ ಮಹದೇವು, ಬಿನ್ ಲೇಟ್ ನಂಜುಂಡಪ್ಪ, ವಯಸ್ಸು ಸುಮಾರು 67 ವರ್ಷ, ವಾಸ: ನಂ.7/3, ತಮ್ಮಡಗೇರಿ ಬೀದಿ, ಹಿನಕಲ್ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು. ವಿರುದ್ಧ

ಎದುರುದಾರರು : ತಹಶೀಲ್ದಾರ್. ಮೈಸೂರು ತಾಲ್ಲೂಕು, ಮೈಸೂರು

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿದಾರರ ತಂದೆಯಾದ – ಶ್ರೀನಂಜುಂಡಪ್ಪ ಬಿನ್ ಲೇಟ್ ಅಳಗಂಜಿ ನಂಜಪ್ಪ ರವರ ಮರಣ ಪ್ರಮಾಣಪತ್ರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ, ಸದರಿ ಶ್ರೀ ನಂಜುಂಡಪ್ಪ ಬಿನ್ ಲೇಟ್ ಅಳಗಂಜಿ ನಂಜಪ್ಪ ಇವರು ದಿನಾಂಕ: 06-07-1994 ರಂದು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಮನೆ ನಂ.7/3 ರಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿ ರುತ್ತಾರೆ. ಇದರ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ ದಿನಾಂಕ: 18.05.24 ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ತಕರಾರನ್ನು ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಗೌರವಾನ್ವಿತ 5ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮೈಸೂರು.

ಸಹಿ/– ಅರ್ಜಿದಾರರ ಪರ ವಕೀಲರು
ಎನ್.ನಟರಾಜು, ಬಿಎಎಲ್‌ಎಲ್‌ಬಿ, ವಕೀಲರು,
#4, 1ನೇ ಕ್ರಾಸ್, ಗಣೇಶ್ ಭಂಡಾರ್ ಹತ್ತಿರ,
ಜನತಾನಗರ, ಮೈಸೂರು–09,
ಮೊ.8792054088,
ಮೈಸೂರು, ದಿನಾಂಕ : 03-05-2024

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು